
ದುಡಿವ ಜನರ ಪ್ರಾಣ ಮಿತ್ರ


# ಐಕ್ಯರಂಗ

ಸಂಪುಟ 27 ಸಂಚಿಕೆ 37 ಸೆಪ್ಟೆಂಬರ್ 11, 2005 ಬೆಲೆ ರೂ. 3.00



## ವಿದ್ಯುತ್ ದರ ಏರಿಕೆಯ ಹುನ್ನಾರ





## ಸರ್ಕಾರಿ ಭೂಮಿ ಬಡವರಿಗೆ ಹಂಚಿ

## ವೈವಿಧ್ಯತೆಯಲ್ಲಿ ಏಕತೆ ಭಾರತದ ಅಂತಃಸತ್ವ






## ವೆನಿಜುವೆಲಾ
## ವಿಶ್ವ ಸಾಮ್ರಾಜ್ಯಶಾಹಿ ವಿರೋಧಿ ಯುವಜನೋತ್ಸವ

## ದಲಿತರ ಮನೆಗಳಿಗೆ ಕೊಳ್ಳಿಯಿಟ್ಟವರೋ ಬಿಜೆಪಿಗಳು

- ಜೆಸಿಟಿಯು - ಯಶಸ್ವಿ ಸಮಾವೇಶ
- 'ತೆಲಂಗಾಣ' - ನಕ್ಸಲೀಯರ ಬೌದ್ಧಿಕ ದಾರಿದ್ರ್ಯ




1992-93 ರಲ್ಲಿ ಮುಂಬೈ ನಗರದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ನಡೆದ ಹಿಂಸೆ-ಕೇಳುವವರ ಎದೆ ನಡುಗಿಸುವಂತಹ ಭೀಕರ ಹತ್ಯಾಕಾಂಡಗಳ ಹಿನ್ನೆಲೆಯಲ್ಲಿ ಕೋಮುವಾದ ತಲುಪಿರುವ ಘಟ್ಟವನ್ನು-ಅದರ ವಿವಿಧ ಮಗ್ಗಲುಗಳನ್ನು ವಿಶ್ಲೇಷಿಸಿರುವ ಈ ಲೇಖನವನ್ನು 'ಕೋಮುವಾದದ ಕರಾಳ ಮುಖಗಳು' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

# ಕೋಮುವಾದದ ಕರಾಳ ಮುಖಗಳು




ರಾಮ ಜನ್ಮಭೂಮಿ ಚಳುವಳಿ ಸೃಷ್ಟಿಸಿದ ಹಿಂಸೆ -ಯಾರೂ ಹೊಣೆಗಾರರಲ್ಲದ, ಯಾರಿಗೂ ಪಶ್ಚಾತ್ತಾಪವಿಲ್ಲದ ಹಿಂಸೆ - ತನ್ನ ಪರಾಕಾಷ್ಠೆಯನ್ನು ತಲುಪಿದ್ದು ಮುಂಬಯಿಯಲ್ಲಿ. ಬಾಬರಿ ಮಸೀದಿ ಉರುಳಿದ ಕರಾಳ ದಿನದಂದೇ ಆರಂಭವಾದ ಮುಂಬಯಿ ಗಲಭೆಗಳು 1993 ರ ಜನವರಿ ತಿಂಗಳಲ್ಲೂ ಮುಂದುವರಿದವು. ಈ ಅವಧಿಯಲ್ಲಿ ನಡೆದ ಹಿಂಸೆ, ಸಾವು ನೋವುಗಳು ದೇಶ ವಿಭಜನೆಯ ದಿನಗಳನ್ನು ನೆನಪಿಸುವಂತಿದ್ದವು. 1947ರ ಆಸುಪಾಸಿನಲ್ಲಿ ಭಾರತ ಉಪಖಂಡದಲ್ಲಿ ಹತ್ಯೆಯಾದವರು 10 ಲಕ್ಷ ಜನ ಮತ್ತು ನಿರ್ವಸಿತರಾದವರ ಸಂಖ್ಯೆ ಸುಮಾರು ಮೂರೂವರೆ ಕೋಟಿ ಎಂದು ಅಂದಾಜು ಮಾಡಲಾಗಿದೆ. ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಹಿಂಸೆ ಏಕಪಕ್ಷೀಯವಾಗಿರಲಿಲ್ಲ. ಹಿಂದು, ಮುಸ್ಲಿಮ್ ಮತ್ತು ಸಿಖ್ ಮೂರು ಮತದವರೂ ಪರಸ್ಪರರನ್ನು ಹಿಂಸಿಸಿದರು; ಅನ್ಯಮತದ ಹೆಂಗಸರನ್ನು ಬಲಾತ್ಕರಿಸಿದರು; ಆಸ್ತಿ ಪಾಸ್ತಿ ಲೂಟಿ ಮಾಡಿದರು. ಈ ಹಿಂಸೆಗೆ ಬಲಿಯಾದವರಿಗೆ, ಉಪಖಂಡದ ಬೇರೆ ಊರುಗಳಲ್ಲಿ ತಮ್ಮದೇ ಮತಕ್ಕೆ ಸೇರಿದವರು, ಇತರರ ಮೇಲೆ ಇದೇ ಬಗೆಯ ಹಿಂಸೆಯನ್ನು ಎಸಗುತ್ತಿದ್ದಾರೆ ಎಂಬುದೂ ಗೊತ್ತಿತ್ತು. ಆದರೆ ಮುಂಬಯಿಯಲ್ಲಿ 1992 - 93 ರ ಹಿಂಸೆಗೆ ಬಲಿಯಾದವರಲ್ಲಿ ಹೆಚ್ಚಿನವರು ಮುಸ್ಲಿಮರು. 1947ರಲ್ಲಿ ಹೊಸತಾಗಿ ಅಧಿಕಾರ ವಹಿಸಿಕೊಂಡ ಸ್ವತಂತ್ರ ಭಾರತದ ಸರಕಾರ, ಪರಸ್ಪರ ಹಿಂಸಾಚಾರದಲ್ಲಿ ತೊಡಗಿದ್ದ ಕೋಮುಗಳ ನಡುವೆ ವಿಶೇಷ ಪಕ್ಷಪಾತ ತೋರಿಸಲಿಲ್ಲ. ಆದರೆ ಎಲ್ಲಕ್ಕಿಂತ ಮುಖ್ಯವಾದ ವ್ಯತ್ಯಾಸವೆಂದರೆ, 1947ರ ಕೋಮುಹಿಂಸೆಗೆ, ಒಂದು ಪ್ರಚಂಡ ನೈತಿಕ ಪರ್ಯಾಯವಾಗಿ ಗಾಂಧೀಜಿ ಜೀವಂತವಾಗಿದ್ದರು. ಉಳಿದ ಕಾಂಗ್ರೆಸ್ ನಾಯಕರೆಲ್ಲ ಅಧಿಕಾರ ಹಸ್ತಾಂತರಗೊಂಡಾಗ ಆಗಬೇಕಾದ ಏರ್ಪಾಡುಗಳ ಗಡಿಬಿಡಿ ಸಂಭ್ರಮಗಳಲ್ಲಿದ್ದಾಗ ಗಾಂಧೀಜಿ ಬಂಗಾಳದ ನವಾಖಲಿಯಲ್ಲಿ ಕೋಮುಹಿಂಸೆಯ ಶಮನದಲ್ಲಿ ತೊಡಗಿದ್ದರು. ಕೋಮುವಾದಿಗಳು ನವಾಖಲಿಯಲ್ಲಿ ಹಾದಿಯ ಮೇಲೆ ಚೆಲ್ಲಿದ ಗಾಜಿನ ಚೂರುಗಳ ಮೇಲೆ ಪಾದಯಾತ್ರೆ ನಡೆಸಿ, ತನ್ನ ಪ್ರಾಣವನ್ನು ಅಕ್ಷರಶ: ಪಣವಾಗಿಟ್ಟು, ಗಾಂಧೀಜಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಆದರೆ ಅಷ್ಟರಲ್ಲಿ ರಾಜಧಾನಿ ದೆಹಲಿಯಲ್ಲಿ ಹಿಂಸಾಚಾರ ಉಲ್ಬಣಗೊಂಡಿತ್ತು. 1948 ಜನವರಿ 13 ರಂದು ಗಾಂಧೀಜಿ, ಈ ಹಿಂಸೆಯ ವಿರುದ್ಧ ತನ್ನ ಬದುಕಿನ ಅಂತಿಮ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಉತ್ತರ ಭಾರತದ ಹಲವೆಡೆ ಹಿಂದು, ಮುಸ್ಲಿಮ್ ಮತ್ತು ಸಿಖ್ ಸಮುದಾಯದವರು ಪರಸ್ಪರರ ಮೇಲೆ ನಡೆಸುತ್ತಿದ್ದ ಹಿಂಸೆ ತಾರಕಕ್ಕೇರಿ, ದೆಹಲಿಗೆ ನಿರಾಶ್ರಿತರು ಪ್ರವಾಹದೋಪಾದಿಯಲ್ಲಿ ಬರಲಾರಂಭಿಸಿದರು. ಅವರು ಹೊತ್ತುತಂದ ಯಾತನೆಯ ಕತೆಗಳು ವಾತಾವರಣದ ದ್ವೇಷ ಉನ್ಮಾದಗಳನ್ನು ಇನ್ನಷ್ಟು ತೀವ್ರಗೊಳಿಸಿದ್ದವು. ಕೋಮುವಾದ ಪ್ರಜೆಗಳ ಬುದ್ಧಿ ಹೃದಯಗಳನ್ನು ಪೂರ್ತ ವಶಕ್ಕೆ ತೆಗೆದುಕೊಂಡಿತ್ತು. ಈ ಸನ್ನಿವೇಶದಲ್ಲಿ ಗಾಂಧೀಜಿ ತನ್ನ ಸತ್ಯಾಗ್ರಹವನ್ನು ಆರಂಭಿಸಿದರು. ಸತ್ಯಾಗ್ರಹವನ್ನು ನಿಲ್ಲಿಸಲು ಅವರು ಹಾಕಿದ್ದ ಶರತ್ತುಗಳನ್ನು ನೋಡಿದರೆ ಈಗ ವಿಸ್ಮಯವಾಗುತ್ತೆ. ಅವರ ಶರತ್ತುಗಳು ಹೀಗಿದ್ದವು; (1) ಅಧಿಕಾರ ಹಸ್ತಾಂತರದ ಒಪ್ಪಂದದ ಪ್ರಕಾರ ಪಾಕಿಸ್ತಾನಕ್ಕೆ ಭಾರತ ಸಲ್ಲಿಸಬೇಕಾದ 50 ಕೋಟಿ ರೂಪಾಯಿಗಳನ್ನು ಸರಕಾರ ಕೂಡಲೇ ಪಾವತಿಸಬೇಕು. (2) ಬಲಾತ್ಕಾರದಿಂದ ದೇವಾಲಯ ಹಾಗೂ ಗುರುದ್ವಾರಗಳನ್ನಾಗಿ ಪರಿವರ್ತಿಸಿರುವ ಮಸೀದಿಗಳನ್ನು ಮುಸ್ಲಿಮರಿಗೆ ಮರಳಿಸಬೇಕು. (3) ದೆಹಲಿಯ ಮುಸ್ಲಿಮರಿಗೆ ಅವರ ಮನೆಗಳಲ್ಲಿ ರಕ್ಷಣೆ ಇರಬೇಕು. (4) ದೆಹಲಿ ಮತ್ತು ಇತರ ಕಡೆಗಳಲ್ಲಿ ಮುಸ್ಲಿಮರ ವಿರುದ್ಧ ಇತರರು ವಿಧಿಸಿದ್ದ ಆರ್ಥಿಕ ಬಹಿಷ್ಕಾರ ಕೂಡಲೇ ಕೊನೆಗೊಳ್ಳಬೇಕು. (5) ದೆಹಲಿಯಿಂದ ಮುಸ್ಲಿಮರನ್ನು ಬಲಾತ್ಕಾರವಾಗಿ ಸ್ಥಳಾಂತರಿಸಕೂಡದು (6) ಗಲಭೆಗಳಿಂದ ತಡೆಹಿಡಿಯಲಾಗಿದ್ದ ದೆಹಲಿಯ ಖ್ವಾಜಾ ಕುತುಬುದ್ದೀನ್ ದರ್ಗಾದ ಉರೂಸ್ ನಿರಾತಂಕವಾಗಿ ನಡೆಯುವಂತಾಗಬೇಕು. ಈ ಶರತ್ತುಗಳನ್ನು ಆರ್.ಎಸ್.ಎಸ್. ಮತ್ತು ಹಿಂದೂ ಮಹಾಸಭಾಗಳೂ ಸೇರಿದಂತೆ ದೆಹಲಿಯ ಎಲ್ಲ ರಾಜಕೀಯ ಪಕ್ಷಗಳ ಮುಖಂಡರೂ ಒಪ್ಪಿಕೊಂಡು ಕಾರ್ಯಗತಗೊಳಿಸುವ ಆಶ್ವಾಸನೆ ನೀಡಿದ ಮೇಲೆ ಜನವರಿ 18ರಂದು ಗಾಂಧೀಜಿ ತನ್ನ ಉಪವಾಸ ಸತ್ಯಾಗ್ರಹ ಮುಕ್ತಾಯಗೊಳಿಸಿದರು. ಆ ಪ್ರಕ್ಷುಬ್ಧ ದಿನಗಳಲ್ಲಿ ಗಾಂಧೀಜಿ ಏಕಾಂಗಿಯಾಗಿ, ಅಸಾಧಾರಣ ನೈತಿಕ ಧೈರ್ಯದ ಈ ಕ್ರಮ ಕೈಗೊಳ್ಳದಿದ್ದರೆ ಹಿಂಸೆ ಇನ್ನಷ್ಟು ಜಾಸ್ತಿಯಾಗುತ್ತಿತ್ತು. ಆದರೆ ಅವರ ಈ ಉಪವಾಸ ಸತ್ಯಾಗ್ರಹ ಹಿಂಸೆಯ ವಿರುದ್ಧ ನೈತಿಕ ಪ್ರತಿಭಟನೆಯಷ್ಟೇ ಆಗಿರಲಿಲ್ಲ. ಇತ್ತೀಚೆಗೆ ಭಾರತದ ಕೆಲವು ಲಿಬರಲ್ ಬುದ್ಧಿಜೀವಿಗಳೂ ಕೂಡ, ಗಾಂಧೀಜಿ ಪಾಕಿಸ್ತಾನಕ್ಕೆ ಸಲ್ಲದ ರಿಯಾಯಿತಿ ತೋರಿದರು ಮತ್ತು ಮುಸ್ಲಿಮರ ಬಗ್ಗೆ ಅನವಶ್ಯಕವಾಗಿ ಮೃದು ಧೋರಣೆ ತೋರಿಸಿದರು ಎಂಬ ಅಬಿಪ್ರಾಯವನ್ನು ಬಹಿರಂಗವಾಗಿಯೇ ಹೇಳತೊಡಗಿದ್ದಾರೆ. ಕೋಮುವಾದ ಈಗ ಪಡೆದುಕೊಂಡಿರುವ ಸಾರ್ವತ್ರಿಕ ಅಂಗೀಕಾರಕ್ಕೆ ಇದು ಒಂದು ಉದಾಹರಣೆ. ಆದರೆ ತನ್ನ ಸತ್ಯಾಗ್ರಹ ನಿಲ್ಲಿಸಲು ಗಾಂಧೀಜಿ ಮುಂದಿರಿಸಿದ್ದ ಶರತ್ತುಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದರೆ, ಸ್ವತಂತ್ರ ಭಾರತದಲ್ಲಿ ಯಾರು ಪ್ರಜೆಗಳು, ಅವರ ಹಕ್ಕುಗಳು ಏನು ಎಂಬುದರ ಬಗ್ಗೆ ಗಾಂಧೀಜಿಯವರಿಗೆ ಇದ್ದ ಸೆಕ್ಯುಲರ್ ಪ್ರಜಾಸತ್ತಾತ್ಮಕ ಪರಿಕಲ್ಪನೆಗಳು ಸ್ಪಷ್ಟವಾಗುತ್ತವೆ. ಭಾರತವನ್ನು ಒಂದು ಸೆಕ್ಯುಲರ್ ಗಣತಂತ್ರ ಪ್ರಜಾಪ್ರಭುತ್ವ ಎಂದು ಘೋಷಿಸಿದ ಸಂವಿಧಾನ ಅಸ್ತಿತ್ವಕ್ಕೆ ಬರುವ ಮೊದಲೇ ಭಾರತ ಒಂದು ಸೆಕ್ಯುಲರ್ ರಾಷ್ಟ್ರ ಎಂಬುದನ್ನು ಗಾಂಧೀಜಿ ತನ್ನ ವೈಯಕ್ತಿಕ ಉದಾಹರಣೆಯಿಂದಲೇ ಸ್ಥಾಪಿಸಿಬಿಟ್ಟರು. ದೇಶ ಇಬ್ಭಾಗವಾಗಿ, ಹೊಸತಾಗಿ ಅಸ್ತಿತ್ವಕ್ಕೆ ಬಂದ ಪಾಕಿಸ್ತಾನ ಇಸ್ಲಾಮಿಕ್ ರಾಷ್ಟ್ರವಾದ್ದರಿಂದ, ಭಾರತ ಒಂದು ಹಿಂದು ರಾಷ್ಟ್ರ ಎಂಬ ಕೋಮುವಾದಿಗಳ ರಾಷ್ಟ್ರೀಯತೆಯ ಕಲ್ಪನೆಯನ್ನೂ ಗಾಂಧೀಜಿ ತಿರಸ್ಕರಿಸಿದರು. ಸ್ವತಂತ್ರ ಭಾರತದಲ್ಲಿ ಎಲ್ಲ ಮತಧರ್ಮದವರಿಗೂ ಸಮಾನ ಅವಕಾಶ ಮತ್ತು ಹಕ್ಕುಗಳು ಇರಬೇಕು ಮತ್ತು ಈ ವಿಷಯದಲ್ಲಿ ಪಾಕಿಸ್ತಾನವಾಗಲೀ, ಮುಸ್ಲಿಮ್ ಕೋಮುವಾದಿಗಳ ದುರಾಗ್ರಹವಾಗಲೀ ಎಂದೂ ನಮಗೆ ಆದರ್ಶವಾಗಕೂಡದು ಎಂಬ ತತ್ವಕ್ಕಾಗಿ ಗಾಂಧೀಜಿ ತಮ್ಮ ಅಂತಿಮ ಸತ್ಯಾಗ್ರಹವನ್ನು ಕೈಗೊಂಡರು ತನ್ನ ಪ್ರಾಣವನ್ನೂ ಅರ್ಪಿಸಿದರು.

1992ರ ಡಿಸೆಂಬರ್ ಮತ್ತು 1993 ರ ಜನವರಿ ತಿಂಗಳುಗಳಲ್ಲಿ ದೇಶಾದ್ಯಂತ ಅದರಲ್ಲೂ ವಿಶೇಷವಾಗಿ ಮುಂಬಯಿಯಲ್ಲಿ ನಡೆದ ಗಲಭೆಗಳಲ್ಲಿ ಮೊದಲು ನಾಶವಾದದ್ದು ಗಾಂಧೀಜಿ ಎತ್ತಿಹಿಡಿದ ಭಾರತದ ಪ್ರಜೆಗಳ ಪೌರತ್ವದ ಹಕ್ಕುಗಳ ಪರಿಕಲ್ಪನೆ. ಮುಂಬಯಿ ಗಲಭೆಗಳಿಗೆ ಹಿನ್ನೆಲೆ ಮತ್ತು ಪ್ರಚೋದನೆಗಳನ್ನು ಒದಗಿಸಿದ್ದು ಬಿಜೆಪಿಯ ರಾಮ ಜನ್ಮಭೂಮಿ ಚಳುವಳಿ. ಆದರೆ ಬಿಜೆಪಿ ಮತ್ತು ಅದರ ಮಿತ್ರ ಪಕ್ಷ ಶಿವಸೇನೆಗಳಿಗೆ ಮುಂಬಯಿಯಲ್ಲಾಗಲೀ, ಮಹಾರಾಷ್ಟ್ರದ ಇತರ ಕಡೆಗಳಲ್ಲಾಗಲೀ ಕೋಮು ಹಿಂಸೆ ನಡೆಸಲು ವಿಶೇಷ ಪ್ರಚೋದನೆ ಏನೂ ಅವಶ್ಯವಿಲ್ಲ; ಪಿಳ್ಳೆ ನೆಪ ಸಿಕ್ಕಿದರೂ ಸಾಕಾಗುತ್ತದೆ. ಆ ಎರಡೂ ಪಕ್ಷಗಳಿಗೆ ರಾಜ್ಯದಲ್ಲಿ ಕೋಮು ಹಿಂಸಾಚಾರ ನಡೆಸಿದ ಸುದೀರ್ಘ ಇತಿಹಾಸವಿದೆ. ಆರ್.ಎಸ್.ಎಸ್. ಜನ್ಮತಳೆದದ್ದು ಮಹಾರಾಷ್ಟ್ರದ ನಾಗಪುರದಲ್ಲಿ. ಗಾಂಧೀಜಿಯವರ ಕೊಲೆಯಸಂಚು ರೂಪಿತವಾದದ್ದೂ ಮಹಾರಾಷ್ಟ್ರದಲ್ಲಿ. ಆ ಸಂಚಿನಲ್ಲಿ ಭಾಗಿಯಾಗಿದ್ದ ಸಾವರ್ಕರ್, ಗೋಡ್ಸೆ ಸಹೋದರರು, ಬಡ್ಗೆ ಮುಂತಾದವರೂ ಕೂಡ ಆ ರಾಜ್ಯದವರೇ. ಸ್ವಾತಂತ್ರ್ಯ ಪೂರ್ವದಲ್ಲಿ ಆರ್.ಎಸ್.ಎಸ್. ರಾಜ್ಯದ ಅನೇಕ ಕಡೆ ಹಿಂದು-ಮುಸ್ಲಿಮ್ ಘರ್ಷಣೆಗಳನ್ನು ಹುಟ್ಟುಹಾಕಿತ್ತು. ಸ್ವಾತಂತ್ರ್ಯಾನಂತರ ಮಹಾರಾಷ್ಟ್ರದ ಮೊದಲ ದೊಡ್ಡ ಕೋಮು ಗಲಭೆ 1970ರಲ್ಲಿ ಭೀವಂಡಿ, ಜಲಗಾಂವ್ ಮತ್ತು ಮಹಾಡ್‌ಗಳಲ್ಲಿ ನಡೆಯಿತು. ಇದಕ್ಕೆ ಕಾರಣವಾಗಿದ್ದ ಸಂಘಟನೆಗಳಲ್ಲಿ ಭಾರತೀಯ ಜನಸಂಘ(ಈಗಿನ ಬಿಜೆಪಿ) ಮತ್ತು ಶಿವಸೇನೆಗಳೂ ಸೇರಿದ್ದವು. ಶಿವಸೇನೆ, ಕಮ್ಯುನಿಸ್ಟ್ ನೇತೃತ್ವದ ಕಾರ್ಮಿಕ ಸಂಘಟನೆಗಳನ್ನು ಬಗ್ಗು ಬಡಿಯಲು 60ರ ದಶಕದಲ್ಲಿ ಮುಂಬಯಿಯ ಬಂಡವಾಳಶಾಹಿಗಳು ಹುಟ್ಟುಹಾಕಿದ ಒಂದು ಗೂಂಡಾ ಸಂಘಟನೆ. ಮಹಾರಾಷ್ಟ್ರದ ಜನಪ್ರಿಯ ಕಮ್ಯುನಿಸ್ಟ್ ನಾಯಕ ಕೃಷ್ಣ ದೇಸಾಯಿಯವರನ್ನು ಕೊಲೆ ಮಾಡಿದ್ದು ಶಿವಸೇನೆಯ ಮೊತ್ತ ಮೊದಲ ರಾಜಕೀಯ ಕೃತ್ಯ. ಕಾರ್ಮಿಕ ಸಂಘಟನೆಗಳನ್ನು ಬಲಾತ್ಕಾರದಲ್ಲಿ ವಶಪಡಿಸಿಕೊಳ್ಳುವ ತನ್ನ ಕಾಯಕವನ್ನು ಶಿವಸೇನೆ ಈಗಲೂ ಮುಂದುವರಿಸಿದೆ. ಆದರೆ ಅದರ ರಾಜಕೀಯ ಪ್ರತಿಪಾದನೆಗಳಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಗಳಾಗಿವೆ.ತನ್ನ ಕಡು ಕಮ್ಯುನಿಸ್ಟ್ ದ್ವೇಷದ ಜೊತೆಗೆ ಶಿವಸೇನೆ ತನ್ನ ಪ್ರಾರಂಭದ ವರ್ಷಗಳಲ್ಲಿ ಮರಾಠೀ ಪ್ರಾದೇಶಿಕವಾದವನ್ನೂ ಎತ್ತಿಹಿಡಿಯಿತು. 'ಮುಂಬಯಿ ಮರಾಠರಿಗೆ ಮಾತ್ರ' ಎಂಬ ಘೋಷಣೆಯೊಂದಿಗೆ ಅದು ಮುಂಬಯಿಯ ದಕ್ಷಿಣ ಭಾರತೀಯರ ಮೇಲೆ ಹಲ್ಲೆ ನಡೆಸಿತು. ನಂತರದ ದಿನಗಳಲ್ಲಿ ಅದು ಉಗ್ರ ಹಿಂದುತ್ವವಾದಿಯಾಗಿ ಮಾರ್ಪಟ್ಟು ಮುಂಬಯಿ ಮುಸ್ಲಿಮರ ಮೇಲೆ ಎರಗಲಾರಂಭಿಸಿತು. ಈಗಲೂ ಒಮ್ಮೊಮ್ಮೆ ಅದು ಮರಾಠಿ ಭಾಷಾಭಿಮಾನದ ನೆಪದಲ್ಲಿ ಮುಂಬಯಿಯ ದಕ್ಷಿಣ ಭಾರತೀಯರು, ಬಿಹಾರಿಗಳು ಮತ್ತು ಉತ್ತರ ಪ್ರದೇಶದ 'ಭಯ್ಯಾ'ಗಳ ಮೇಲೆ ಧಾಳಿ ನಡೆಸುವುದುಂಟು. ಆದರೆ ಕಮ್ಯುನಿಸ್ಟ್ ದ್ವೇಷ, ಹಿಂದುತ್ವವಾದ ಮತ್ತು ಮುಂಬಯಿಯ ಮಾಫಿಯಾದ ಜೊತೆ ನಿಕಟ ಸಂಬಂಧ - ಇವು ಶಿವಸೇನೆಯ ಖಾಯಂ ಆದ ಗುಣಗಳು. ಹೀಗೆ ತನ್ನ ಸಿದ್ಧಾಂತ, ಸಂಘಟನೆ, ಕಾರ್ಯಕ್ರಮ ಮತ್ತು ಹಿಂಸಾತ್ಮಕ ಚಳುವಳಿಗಳಲ್ಲಿ ಶಿವಸೇನೆ, ಓರಗೆಯಲ್ಲಿ ಅದರ ಹಿರಿಯಣ್ಣನ ಹಾಗೆ ಇರುವ ಆರ್.ಎಸ್.ಎಸ್. ಮತ್ತು ಇಟಲಿಯ ಫ್ಯಾಸಿಸ್ಟರನ್ನು ನಿಕಟವಾಗಿ ಹೋಲುವ ಸಂಘಟನೆ. ಆರ್.ಎಸ್.ಎಸ್. ಕೂಡ ಫ್ಯಾಸಿಸ್ಟ್ ಸಿದ್ಧಾಂತದ ಅನೇಕ ಅಂಶಗಳನ್ನು ತನ್ನದಾಗಿಸಿಕೊಂಡಿದೆ.

ರಾಮ ಜನ್ಮಭೂಮಿ ಚಳುವಳಿ ಸಂದರ್ಭದಲ್ಲಿ ದೇಶದ ಇತರ ಕಡೆಗಳಂತೆ ಮಹಾರಾಷ್ಟ್ರ ಮತ್ತು ಮುಂಬಯಿಗಳಲ್ಲೂ ಈ ಸಂಘಟನೆಗಳು ವಾತಾವರಣವನ್ನು ಹದಗೆಡಿಸಿದ್ದವು. ಈ ಚಳುವಳಿಯ ಅಂಗವಾಗಿ, ಮುಂಬಯಿಯ ಚಾಳುಗಳಲ್ಲಿ ಮತ್ತು ಉಪನಗರಗಳಲ್ಲಿ ರಾಮ ಪಾದುಕಾ ಪೂಜೆ ಸಮಾರಂಭಗಳು, ಚೌಕ್ ಸಭಾಗಳು, ಘಂಟಾನಾದ ಮುಂತಾದ ಕಾರ್ಯಕ್ರಮಗಳನ್ನು ನಡೆಸಿ, ಭಾರೀಸಂಖ್ಯೆಯಲ್ಲಿ ಜನರನ್ನು ಒಟ್ಟುಸೇರಿಸಿ, ಶಿವಸೇನೆ ಮತ್ತು ಬಿಜೆಪಿ ನಾಯಕರು ಉದ್ರೇಕಕಾರಿ ಭಾಷಣಗಳನ್ನು ಮಾಡುತ್ತಿದ್ದರು. ಈ ಭಾಷಣಗಳಲ್ಲಿ ಮುಸ್ಲಿಮರು ವಿದೇಶೀಯ ಮೂಲದವರೆಂದೂ, ಆಕ್ರಮಣಕಾರಿಗಳೆಂದೂ, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಅಡ್ಡಿಯಾಗಿರುವವರೆಂದೂ ದೂಷಿಸಲಾಗಿತ್ತು.

(ಮುಂದುವರಿಯುವುದು)

### ಇಂದಿಗಾಗಿ ನಾಳಿನ ಕಾರ್ಯಕ್ರಮ

- **ಆಗಸ್ಟ್ 27ರಿಂದ ಸೆಪ್ಟೆಂಬರ್ 7,2005**
  ಸೆಪ್ಟೆಂಬರ್ 29ರ ಮುಷ್ಕರದ ಹಿನ್ನೆಲೆಯಲ್ಲಿ ಕಛೇರಿಗಳಲ್ಲಿ, ಕೈಗಾರಿಕಾ ಕೇಂದ್ರಗಳಲ್ಲಿ ಧರಣಿ, ಮೆರವಣಿಗೆ, ರ್‍ಯಾಲಿ ಇತ್ಯಾದಿ ಜಿಲ್ಲಾ ಕೇಂದ್ರಗಳಲ್ಲಿ ರ್‍ಯಾಲಿ
- **ಸೆಪ್ಟೆಂಬರ್ 10ರಿಂದ 15,2005**
  ಕಿಸಾನ್ ಸಭಾದಿಂದ ದೇಶದಾದ್ಯಂತ ಜಂಟಿ ಪ್ರಚಾರಾಂದೋಲನ
  ಸೆಪ್ಟೆಂಬರ್ 29ರಂದು ರಸ್ತೆ ತಡೆ ಚಳುವಳಿ
- **ಸೆಪ್ಟೆಂಬರ್ 14,2005**
  ವೃತ್ತಿ ಆಧಾರಿತ ಶಿಕ್ಷಣ (ಜೆ.ಒ.ಸಿ)ದ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ, ರಾಜ್ಯಮಟ್ಟದ ಪ್ರತಿಭಟನಾ ರ್‍ಯಾಲಿ ಬೆಳಗ್ಗೆ 11 ಗಂಟೆಗೆ ಚಿಕ್ಕಲಾಲ್‌ಬಾಗ್ ನಿಂದ ಮೆರವಣಿಗೆ-ಎಸ್ಎಫ್ಐ ನೇತೃತ್ವದಲ್ಲಿ
- **ಸೆಪ್ಟೆಂಬರ್ 29, 2005**
  ದೇಶದಾದ್ಯಂತ ಕಾರ್ಮಿಕರ ಮುಷ್ಕರ ರೈತ, ಕೃಷಿ ಕೂಲಿಕಾರರಿಂದ ರಸ್ತೆತಡೆ, ಹರತಾಳ, ಬಂದ್ ಇತ್ಯಾದಿ

# ಸರ್ಕಾರಿ ಬೀಳು ಭೂಮಿ ಭೂಹೀನ ಬಡವರಿಗೆ ವಿತರಣೆಯಾಗಲಿ

**ನಮಗೆಲ್ಲಾ ಇರುವುದು ಒಂದೇ ಭೂಮಿಯಾದರೂ ಭೂಮಿಯ ಮೇಲಿನ ಅಸಂಖ್ಯಾತ ಜೀವ ಸಂಕುಲಗಳನ್ನು ಪೋಷಿಸುವ ಜೀವ ಚೈತನ್ಯ ಈ ಭೂಮಿಗಿದೆ. ಆದರೆ ಈ ಭೂಮಿಯ ಬಹುಭಾಗ ಬೆವರು ಬಸಿದು ದುಡಿಯುವ ಶ್ರಮಿಕರ ಕೈಗೆ ದಕ್ಕಿಲ್ಲ. ಕೃಷಿ ಭೂಮಿಯ ಬಹುದೊಡ್ಡ ಭಾಗ ಭೂಮಾಲಿಕರ ಕಪಿಮುಷ್ಟಿಯಲ್ಲಿ ಸಿಲುಕಿದ್ದರೆ, ಇನ್ನೆಷ್ಟೋ ಅಗಾಧ ಪ್ರಮಾಣದ ಭೂಮಿ ಬೀಳು ಭೂಮಿಯಾಗಿ ಸರ್ಕಾರದ ಬಿಗಿ ಮುಷ್ಟಿಯಲ್ಲಿ ಬಂಧಿಯಾಗಿದೆ. ಈ ಬಂಧನಗಳಿಂದ ಭೂಮಿಯನ್ನು ಬಿಡಿಸಿ ಭೂಹೀನ ಬಡವರಿಗೆ ಹಂಚದಿದ್ದರೆ ಕೋಟಿ ಕೋಟಿ ಸಂಖ್ಯೆಯಲ್ಲಿರುವ ಭೂಹೀನ ಬಡವರನ್ನು ಅವರ ಸಂಕಷ್ಟಗಳ ಸರಪಳಿಯಿಂದ ವಿಮೋಚನೆಗೊಳಿಸುವುದು ಸಾಧ್ಯವಿಲ್ಲ. ಮಾತ್ರವಲ್ಲ, ಸಮಾಜದ ಸರ್ವಾಂಗೀಣ ಪ್ರಗತಿಯ ಚಕ್ರ ತಿರುಗುವುದು ಸಹ ಸಾಧ್ಯವಿಲ್ಲ. ಈ ಬಗ್ಗೆ ಲೇಖನ ಸಿಪಿಐ(ಎಂ) ಪಕ್ಷದ ಪ್ರಚಾರಾಂದೋಲನದ ಅಂಗವಾಗಿ.**



ಡಾ. ಮನಮೋಹನಸಿಂಗ್ ನೇತೃತ್ವದ ಯು.ಪಿ.ಎ ಸರ್ಕಾರವು ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಭೂಸುಧಾರಣೆಗಳಿಗೆ ತನ್ನ ಬದ್ಧತೆಯನ್ನು ಘೋಷಿಸಿಕೊಂಡಿದೆ. ಸಿಎಂಪಿ ಹೀಗೆ ಹೇಳುತ್ತದೆ: "ಭೂಮಿತಿ ಹಾಗೂ ಭೂ ವಿತರಣಾ ಕಾಯ್ದೆಯನ್ನು ಜಾರಿಗೊಳಿಸುವ ಮೂಲಕ ಭೂಹೀನ ಕುಟುಂಬಗಳಿಗೆ ಭೂಮಿಯನ್ನು ವಿತರಣೆ ಮಾಡಲಾಗುವುದು. ಭೂಮಿತಿ ಕಾಯ್ದೆಯನ್ನು ತಲೆಕೆಳಗೆ ಮಾಡಲು ಅವಕಾಶ ನೀಡಲಾಗದು". ಆದರೆ ಈ ಭರವಸೆಯನ್ನು ಜಾರಿಗೊಳಿಸಲು ಇದುವರೆಗೂ ಯಾವುದೇ ಗಂಭೀರ ಪ್ರಯತ್ನ ಆರಂಭವಾಗಿಲ್ಲ. ಆದ್ದರಿಂದ ಸಿಪಿಐ(ಎಂ) ನಡೆಸುತ್ತಿರುವ ದೇಶವ್ಯಾಪಿ ಪ್ರಚಾರಾಂದೋಲನದಲ್ಲಿ ಭೂಸುಧಾರಣೆಗಳು ಮತ್ತು ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ವಿತರಣೆ ಮಾಡುವ ಪ್ರಶ್ನೆ ಒಂದು ಪ್ರಮುಖ ವಿಷಯವಾಗಿದೆ.

**ಭೂಸುಧಾರಣೆಗಳ ಮಹತ್ವ :**

ಭೂ ಹಿಡುವಳಿಗಳಿಗೆ ಮಿತಿ ಹಾಕಿ, ಹೆಚ್ಚುವರಿ ಭೂಮಿಯನ್ನು ಭೂಮಾಲೀಕರಿಂದ ಸ್ವಾಧೀನಪಡಿಸಿಕೊಂಡು, ಅದನ್ನು ಭೂಹೀನ ಕೃಷಿ ಕೂಲಿಕಾರರಿಗೆ, ಬಡ ರೈತರಿಗೆ ವಿತರಣೆ ಮಾಡುವುದಕ್ಕೆ ಭೂ ಸುಧಾರಣೆಗಳೆನ್ನುತ್ತಾರೆ. ಭೂಸುಧಾರಣಾ ಕ್ರಮಗಳು ಜಾರಿಯಾದರೆ ಭೂಹೀನ ಬಡವರಿಗೆ ಹೆಚ್ಚುವರಿ ಭೂಮಿಯ ವಿತರಣೆಯಾಗುತ್ತದೆ. ಇದರಿಂದಾಗಿ ಕೃಷಿ ಉತ್ಪಾದನೆ ಅಧಿಕಗೊಳ್ಳುತ್ತದೆ. ಗ್ರಾಮೀಣ ಬಡವರ ಆದಾಯ ಹೆಚ್ಚಾಗುತ್ತದೆ ಮತ್ತು ಅದರೊಂದಿಗೆ ಅವರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತದೆ. ಇದರ ಪರಿಣಾಮವಾಗಿ ಕೈಗಾರಿಕಾ ಉತ್ಪನ್ನಗಳ ಬೇಡಿಕೆಯೂ ಹೆಚ್ಚಾಗುತ್ತದೆ. ಕೈಗಾರೀಕರಣ ತೀವ್ರವಾಗುತ್ತದೆ. ಕೈಗಾರಿಕೀಕರಣದಿಂದಾಗಿ ಉದ್ಯೋಗದ ಅವಕಾಶಗಳು ಹೆಚ್ಚಾಗುತ್ತವೆ. ಭೂಮಿಯ ಮೇಲಿನ ಅನಗತ್ಯ ಅವಲಂಬನೆ ಕಡಿಮೆಯಾಗುತ್ತದೆ. ಹೀಗೆ ಭೂಸುಧಾರಣೆಗಳಿಂದ ಅಭಿವೃದ್ಧಿ ಚಕ್ರ ತಿರುಗಲಾರಂಭಿಸುತ್ತದೆ.

ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೂ ಭೂ ಸುಧಾರಣೆಗಳು ಅತ್ಯವಶ್ಯವಾಗಿವೆ. ಗ್ರಾಮೀಣ ಪ್ರದೇಶಗಳ ಭೂಹೀನ ಕುಟುಂಬಗಳಲ್ಲಿ ಬಹುಸಂಖ್ಯಾತರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿರುತ್ತಾರೆ. ಇವರು ಭೂಮಿಯ ಹಕ್ಕಿನಿಂದ ವಂಚಿತರಾದವರಾಗಿರುವುದರಿಂದ ಶತಮಾನಗಳಿಂದ ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ತುಳಿತಕ್ಕೊಳಪಟ್ಟವರಾಗಿದ್ದಾರೆ. ಇವರಿಗೆ ಭೂಮಿಯ ವಿತರಣೆಯಾಗುವುದರೊಂದಿಗೆ ಮಾತ್ರ ಇವರ ವಿಮೋಚನೆಯ ಪ್ರಕ್ರಿಯೆ ಆರಂಭವಾಗುತ್ತದೆ. ಬಡತನ ಮತ್ತು ನಿರುದ್ಯೋಗದ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಭೂಸುಧಾರಣೆಗಳ ಜಾರಿ ಮತ್ತು ಭೂಹೀನರಿಗೆ ಭೂಮಿಯ ವಿತರಣೆ ಒಂದೇ ದಾರಿ ಎಂದು ದಮನಕ್ಕೊಳಗಾದ ಜಾತಿಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ನೇಮಿಸಲಾಗಿದ್ದ ಮಂಡಲ್ ಆಯೋಗವು ತನ್ನ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದು ಗಮನಾರ್ಹವಾಗಿದೆ.

**ಕಾಂಗ್ರೆಸ್ ಭೂಸುಧಾರಣೆಗಳ ಪ್ರಹಸನ :**

1920 ರಲ್ಲೇ ಸ್ಥಾಪನೆಯಾಗಿದ್ದ ಭಾರತ ಕಮ್ಯೂನಿಷ್ಟ್ ಪಕ್ಷವು ಅಂದಿನಿಂದಲೇ ಜಮೀನ್ದಾರಿ ಪದ್ಧತಿಯ ವಿರುದ್ಧ ಧ್ವನಿ ಎತ್ತುತ್ತಾ ಬಂದಿತ್ತು. 1396 ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕಿಸಾನ್ ಸಭಾ ಜಮೀನ್ದಾರಿ ಪದ್ಧತಿ ರದ್ದಾಗಬೇಕು; ಉಳುವವನೇ ಭೂಮಿಯ ಒಡೆಯನಾಗಬೇಕು ಎಂಬ ಬೇಡಿಕೆಯನ್ನು ತನ್ನ ಮೊತ್ತಮೊದಲ ಬೇಡಿಕೆಯನ್ನಾಗಿ ಇಟ್ಟುಕೊಂಡು ಚಳುವಳಿಗಳನ್ನು ನಡೆಸುತ್ತಿತ್ತು. ಹೀಗೆ ಜಮೀನ್ದಾರಿ ಪದ್ಧತಿಯ ರದ್ದತಿಯ ಬೇಡಿಕೆ ಸ್ವಾತಂತ್ರ್ಯ ಚಳುವಳಿಯ ಬೇಡಿಕೆಗಳ ಒಂದು ಭಾಗವೇ ಆಗಿತ್ತು. ಆದರೆ ದೇಶದ ಜಮೀನ್ದಾರಿ ವರ್ಗದೊಂದಿಗೆ ರಾಜ್ಯಾಧಿಕಾರವನ್ನು ಹಂಚಿಕೊಂಡ ಬಂಡವಾಳಶಾಹಿಗಳು ಜಮೀನ್ದಾರಿ ಪದ್ಧತಿಯನ್ನು ನಾಶ ಮಾಡಲು ಮುಂದಾಗಲಿಲ್ಲ, ಭೂಮಾಲೀಕ ಬಂಡವಾಳಶಾಹಿ ವರ್ಗಗಳ ಪ್ರತಿನಿಧಿಯಾಗಿದ್ದ ಕಾಂಗ್ರೆಸ್ ಸರ್ಕಾರಗಳು ಭೂಸುಧಾರಣೆಗಳನ್ನು ಜಾರಿಗೆ ತರಲು ಆಸಕ್ತಿ ವಹಿಸಲಿಲ್ಲ. ಆದ್ದರಿಂದಲೇ ಸ್ವಾತಂತ್ರ್ಯ ಸಿಕ್ಕು ಆರೇಳು ದಶಕಗಳು ಕಳೆಯುತ್ತಾ ಬಂದರೂ ದೇಶದಲ್ಲಿ ಬಡತನ, ನಿರುದ್ಯೋಗದಂತಹ ಸಮಸ್ಯೆಗಳು ತಾಂಡವವಾಡುತ್ತಿವೆ.

ಸ್ವಾತಂತ್ರ್ಯ ನಂತರವೂ ಭೂಮಿಗಾಗಿ ಮುಂದುವರೆದ ಜನಾಂದೋಲನದ ಪರಿಣಾಮವಾಗಿ ಕಾಂಗ್ರೆಸ್ ಸರ್ಕಾರಗಳು ಜನರ ಕಣ್ಣಿಗೆ ಮಣ್ಣೆರಚುವ ಉದ್ದೇಶಕ್ಕಾದರೂ ಕೆಲವೊಂದು ಭೂಸುಧಾರಣೆಗಳನ್ನು ಜಾರಿಗೆ ತರಲೇಬೇಕಾಯಿತು. ವಿತರಣೆಗಾಗಿ ಎಷ್ಟು ಭೂಮಿ ಲಭ್ಯವಿದೆ ಎಂಬುದನ್ನು ಕಂಡುಹಿಡಿಯಲು 1967 ರಲ್ಲಿ ಮಹಾಲ ನೊಬಿಸ್ ಸಮಿತಿಯನ್ನು ರಚಿಸಲಾಯಿತು. ಕುಟುಂಬಕ್ಕೆ 20 ಎಕರೆಯಂತೆ ಭೂಮಿತಿಯನ್ನು ನಿಗದಿಪಡಿಸಿದರೆ ಒಟ್ಟು 6,30,00,000 ಎಕರೆ ಭೂಮಿ ವಿತರಣೆಗೆ ಲಭ್ಯವಾಗಲಿದೆ ಎಂದು ಸಮಿತಿ ವರದಿ ನೀಡಿತು. 1970ರಲ್ಲಿ 4,00,00,000 ಎಕರೆ ಭೂಮಿ ವಿತರಣೆಗೆ ಲಭ್ಯವಿದೆ ಎಂದು ಪರಿಷ್ಕರಿಸಿದ ಅಂಕಿ ಅಂಶಗಳನ್ನು ಸರ್ಕಾರ ಸಂಸತ್ತಿಗೆ ನೀಡಿತು. 1971- 72ರಲ್ಲಿ ಈ ಅಂದಾಜನ್ನು 1,22,00,000 ಎಕರೆಗೆ ಇಳಿಸಲಾಯಿತು. ಅಂಕಿ ಅಂಶಗಳಲ್ಲಿನ ಈ ವ್ಯತ್ಯಾಸಗಳಿಗೆ ಸರ್ಕಾರ ಯಾವ ವಿವರಣೆಯನ್ನೂ ನೀಡಲಿಲ್ಲ. ರೈತರ ಚಳುವಳಿಯ ಒತ್ತಡದಿಂದಾಗಿ ಮತ್ತು ಬದಲಾಗುತ್ತಿದ್ದ ರಾಜಕೀಯ ಪರಿಸ್ಥಿತಿಯ ಕಾರಣದಿಂದಾಗಿ, 1970-72ರಲ್ಲಿ ಎಲ್ಲಾ ರಾಜ್ಯಗಳು ಭೂಮಿತಿ ಶಾಸನಗಳನ್ನು ರೂಪಿಸಿ ಜಾರಿಗೊಳಿಸಬೇಕೆಂದು ಸೂಚಿಸಲಾಯಿತು. ಈ ಅವಧಿಯಲ್ಲಿ ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಭೂಸುಧಾರಣಾ ಕಾಯ್ದೆಗಳನ್ನು ಅಂಗೀಕರಿಸಲಾಯಿತು. ಆದರೆ ಭೂಮಾಲಿಕ ಶಕ್ತಿಗಳ ಪ್ರಭಾವದಿಂದಾಗಿ ಅವುಗಳು ಬಹುತೇಕವಾಗಿ ಕಾಗದದಲ್ಲಿಯೇ ಉಳಿದವು. ಚಳುವಳಿಯ ಒತ್ತಡ ಇದ್ದಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಅವುಗಳ ಅನುಷ್ಠಾನ ಸಾಧ್ಯವಾಯಿತು.

ಕಾಂಗ್ರೆಸ್ ಸರ್ಕಾರಗಳು ಜಾರಿಗೆ ತಂದ ಭೂಸುಧಾರಣೆಗಳಿಂದ ದೊಡ್ಡ ದೊಡ್ಡ ಭೂಮಾಲಿಕರಿಗೆ ಅಪಾರವಾದ ಪರಿಹಾರವನ್ನು ಪಡೆಯಲು ಸಾಧ್ಯವಾಯಿತು. ಕಾಯ್ದೆಗಳಲ್ಲಿದ್ದ ಪಾರುಗಂಡಿಗಳನ್ನು ಬಳಸಿಕೊಂಡು ಭೂಮಾಲಿಕರು ದೊಡ್ಡ ಪ್ರಮಾಣದ ಭೂಮಿಯನ್ನು ಸ್ವಂತ ಸಾಗುವಳಿ ಹೆಸರಿನಲ್ಲಿ ತಮ್ಮ ವಶದಲ್ಲೇ ಉಳಿಸಿಕೊಂಡರು, ಮಾತ್ರವಲ್ಲದೆ ಬೇನಾಮಿಯಾಗಿಯೂ ಹೆಚ್ಚುವರಿ ಭೂಮಿಯನ್ನು ತಮ್ಮ ಸ್ವಾಧೀನದಲ್ಲಿ ಉಳಿಸಿಕೊಂಡರು. ಗೇಣಿದಾರರನ್ನು ಬೆದರಿಸಿ ಅವರು ಭೂಮಿಯ ಹಕ್ಕಿಗಾಗಿ ಅರ್ಜಿಗಳನ್ನು ಹಾಕದಂತೆ ತಡೆಯಲಾಯಿತು. ಅಸಂಖ್ಯಾತ ಗೇಣಿದಾರರನ್ನು ನಿರ್ದಾಕ್ಷಿಣ್ಯವಾಗಿ ಒಕ್ಕಲೆಬ್ಬಿಸಲಾಯಿತು. ಹೆಚ್ಚುವರಿ ಎಂದು ಘೋಷಿಸಲಾದ ಭೂಮಿಯನ್ನು ಸರ್ಕಾರದ ವಶಕ್ಕೆ ಹೋಗದಂತೆ ತಡೆಯಲು ಅಧಿಕಾರಿಗಳ ಮೇಲೆ ಪ್ರಭಾವ ಬೀರಲಾಯಿತು. ಗೇಣಿದಾರರಿಗೆ ಹಾಗೂ ಇತರ ಬಡವರಿಗೆ ವಿತರಣೆಯಾದ ಭೂಮಿಯೊಳಗೆ ಫಲಾನುಭವಿಗಳು ಪ್ರವೇಶಿಸದಂತೆ ಗುಂಡಾಶಕ್ತಿಯನ್ನು ಬಳಸಿಕೊಳ್ಳಲಾಯಿತು. ಹೀಗೆ ಕಾಂಗ್ರೆಸ್ ಭೂಸುಧಾರಣೆಗಳಿಂದ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದೂ ಸಾಧ್ಯವಾಗಲಿಲ್ಲ; ಅದನ್ನು ಭೂಹೀನ ಬಡವರಿಗೆ ಹಂಚುವುದೂ

ನಿತ್ಯಾನಂದಸ್ವಾಮಿ

ಆಗಲಿಲ್ಲ. 2004ರಲ್ಲಿ, ಅಂದರೆ 34 ವರ್ಷಗಳ ನಂತರ ಸರ್ಕಾರ ಸಂಸತ್ತಿಗೆ ನೀಡಿದ ಮಾಹಿತಿಗಳ ಪ್ರಕಾರ ಭೂ ವಿತರಣೆಯ ವಿವರ ಹೀಗಿದೆ.

ಘೋಷಿತ ಹೆಚ್ಚುವರಿ ಭೂಮಿ : 73, 35, 937 ಎಕರೆ ಸ್ವಾಧೀನಪಡಿಸಿದ ಭೂಮಿ : 64,96,471 ಎಕರೆ

ವಿತರಣೆ ಮಾಡಿದ ಭೂಮಿ : 54, 02,101

ಮೂಲತಃ ಲಭ್ಯವಿದ್ದ 6 ಕೋಟಿ ಎಕರೆ ಹೆಚ್ಚುವರಿ ಭೂಮಿಯಲ್ಲಿ ಕೇವಲ 54 ಲಕ್ಷ ಎಕರೆ ಭೂಮಿಯನ್ನು ಮಾತ್ರ ವಿತರಣೆ ಮಾಡಲಾಯಿತು.

**ಎಡರಂಗ ಸರ್ಕಾರಗಳ ದಾಖಲೆ :**

ಒಟ್ಟು ವಿತರಣೆಯಾದ 54 ಲಕ್ಷ ಎಕರೆ ಭೂಮಿಯಲ್ಲಿ ಶೇ.20ರಷ್ಟು ಭೂಮಿ ಪಶ್ಚಿಮ ಬಂಗಾಳ ರಾಜ್ಯವೊಂದರಲ್ಲೇ ವಿತರಣೆಯಾಗಿದೆ ಎಂಬುದು ಗಮನಾರ್ಹವಾದ ವಿಷಯವಾಗಿದೆ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಮಾತ್ರ ಅತ್ಯಂತ ಪ್ರಗತಿಪರವಾದ ಭೂಸುಧಾರಣೆ ಕಾಯ್ದೆಗಳನ್ನು ರೂಪಿಸಿ ಅವುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತಂದವು. ಪಶ್ಚಿಮ ಬಂಗಾಳ ರಾಜ್ಯವೊಂದರಲ್ಲೇ ಸುಮಾರು 13 ಲಕ್ಷ ಎಕರೆ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು ಅದರಲ್ಲಿ ಸುಮಾರು 11 ಲಕ್ಷ ಎಕರೆ ಭೂಮಿಯನ್ನು 2.5 ಲಕ್ಷ ಭೂಹೀನ ಕುಟುಂಬಗಳಿಗೆ ವಿತರಣೆ ಮಾಡಲಾಯಿತು. ಭೂಮಿ ಪಡೆದ ಫಲಾನುಭವಿಗಳಲ್ಲಿ ಶೇ.55 ರಷ್ಟು ಜನ ದಲಿತರು ಮತ್ತು ಆದಿವಾಸಿಗಳು. ಇನ್ನುಳಿದ ರಾಜ್ಯಗಳಿಗೆ ಹೋಲಿಸಿದರೆ ಈ ಮೂರು ರಾಜ್ಯಗಳು ಅತಿ ಚಿಕ್ಕ ರಾಜ್ಯಗಳು. ಉತ್ತರ ಪ್ರದೇಶದಂತಹ ಅತಿ ದೊಡ್ಡ ರಾಜ್ಯದಲ್ಲಿ ಕೇವಲ 2 ಲಕ್ಷ ಎಕರೆ ಭೂಮಿಯನ್ನು ಮಾತ್ರ ವಿತರಣೆ ಮಾಡಲಾಗಿದೆ. ಬಿಹಾರದಲ್ಲಿ 3 ಲಕ್ಷ ಎಕರೆ, ಮಧ್ಯ ಪ್ರದೇಶದಲ್ಲಿ 2 ಲಕ್ಷ ಎಕರೆ ಕರ್ನಾಟಕದಲ್ಲಿ ಕೇವಲ 1.23 ಲಕ್ಷ ಭೂಮಿ ವಿತರಣೆಯಾಗಿದೆ.

ಅನೇಕ ರಾಜ್ಯಗಳಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ದಲಿತರಿಗೆ ಮತ್ತು ಇತರ ಬಡವರಿಗೆ ವಿತರಣೆ ಮಾಡಲಾದ ಹೆಚ್ಚುವರಿ ಭೂಮಿಯನ್ನು ಶ್ರೀಮಂತ ಭೂಮಾಲಿಕರು ಬಲವಂತವಾಗಿ ತಮ್ಮ ಸ್ವಾಧೀನಪಡಿಸಿಕೊಂಡು ಬೇಸಾಯ ಮಾಡುತ್ತಿದ್ದಾರೆ. ತಮಿಳುನಾಡಿನ ದಿಂಡಿಗಲ್ ಎಂಬ ಜಿಲ್ಲೆಯಲ್ಲಿ ಭೂಹೀನ ಬಡವರಿಗೆ ವಿತರಣೆ ಮಾಡಲಾದ ಸುಮಾರು 5000 ಎಕರೆ ಭೂಮಿಯನ್ನು ಶ್ರೀಮಂತರು ಕಬಳಿಸಿರುವ ಪ್ರಕರಣ ಇತ್ತೀಚಿಗೆ ಬೆಳಕಿಗೆ ಬಂದಿದೆ. ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿಯೂ ದಲಿತರಿಗೆ ವಿತರಣೆ ಮಾಡಲಾದ ಭೂಮಿಯನ್ನು ಸವರ್ಣೀಯ ಭೂಮಾಲಕರು ಸ್ವಾಧೀನಪಡಿಸಿಕೊಂಡಿರುವುದು ವರದಿಯಾಗಿದೆ. ಕರ್ನಾಟಕದಲ್ಲಿ ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ ಇಂತಹ ಸಾಕಷ್ಟು ಪ್ರಕರಣಗಳು ಇವೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗುತ್ತದೆ. ಅಧಿಕಾರಿಗಳಿಗೆ ಆಮಿಷಗಳನ್ನು ಒಡ್ಡಿ ಅವರನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಗಂಗಾವತಿ ತಾಲ್ಲೂಕಿನಲ್ಲಿ ಬಡ ದೇವದಾಸಿ ಮಹಿಳೆಯರಿಗೆ ನೀಡಲಾದ ಭೂಮಿಯನ್ನು ಶ್ರೀಮಂತ ಭೂಮಾಲಿಕರು ಬಲವಂತದಿಂದ ಕಿತ್ತುಕೊಂಡಿದ್ದರೂ ಕಂದಾಯ ಅಧಿಕಾರಿಗಳು ಕ್ರಮ ಜರುಗಿಸಲು ಹಿಂದೇಟು ಹಾಕುತ್ತಿದ್ದಾರೆ. ಪ್ರಬಲವಾದ ಚಳುವಳಿಯಿಂದ ಮಾತ್ರ ಇಂತಹ ಅಕ್ರಮಗಳನ್ನು ಸರಿಪಡಿಸಲು ಸಾಧ್ಯ.

**ಉದಾರೀಕರಣದ ಧಾಳಿ**

90ರ ದಶಕದಲ್ಲಿ ಆರಂಭಿಸಲಾದ ಉದಾರೀಕರಣದ ನೀತಿಗಳ ಪರಿಣಾಮವಾಗಿ ಭೂಸುಧಾರಣೆಗಳ ಬಗ್ಗೆ ಮಾತೆತ್ತುವುದನ್ನೇ ಕೈಬಿಡಲಾಗಿದೆ. ಮಾತ್ರವಲ್ಲ ಅಳಿದುಳಿದ ಭೂಸುಧಾರಣಾ ಕ್ರಮಗಳನ್ನು ತಲೆಕೆಳಗೆ ಮಾಡಿ ಭಾರೀ ಪ್ರಮಾಣದ ಭೂಮಿಯನ್ನು ದೊಡ್ಡ ಬಂಡವಾಳಗಾರರಿಗೆ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟ ಮಾಡುವುದನ್ನು ಹಾಗೂ ಲೀಸ್ ಆಧಾರದಲ್ಲಿ ನೀಡುವುದನ್ನು ಆರಂಭಿಸಲಾಯಿತು.

ಮಹಾರಾಷ್ಟ್ರ, ಓರಿಸ್ಸಾ, ಕರ್ನಾಟಕದಂತಹ ರಾಜ್ಯಗಳಲ್ಲಿ ಭೂಮಿತಿಗಳನ್ನು ತೆಗೆದುಹಾಕಲಾಗಿದೆ. ಕೃಷಿಯೇತರ ಉದ್ದೇಶಗಳಿಗೆ ಕೃಷಿ ಭೂಮಿಯನ್ನು ಬಳಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸಾಲದ ಭಾಧೆಗೆ ಒಳಗಾದ ರೈತರು ಕೃಷಿ ಭೂಮಿಯನ್ನು ಕಂಪನಿಗಳಿಗೆ ಮಾರಿಕೊಂಡು ಬೀದಿ ಪಾಲಾಗುತ್ತಿದ್ದಾರೆ. ರಸ್ತೆ ನಿರ್ಮಾಣ ಮತ್ತಿತರ ಯೋಜನೆಗಳಿಗಾಗಿ ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದರಲ್ಲಿ ದೊಡ್ಡ ಭಾಗವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಲಾಗುತ್ತಿದೆ.

**ಸರ್ಕಾರಿ ಬೀಳು ಭೂಮಿಯ ಖಾಸಗೀಕರಣ**

ಸುಮಾರು 3 ಕೋಟಿ 30 ಲಕ್ಷ ಹೆಕ್ಟೇರ್ ಬೀಳು ಭೂಮಿ ವಿವಿಧ ರಾಜ್ಯ ಸರ್ಕಾರಗಳ ವಶದಲ್ಲಿದೆ ಎಂದು 1992 ರಲ್ಲಿ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ವರದಿ ಮಾಡಲಾಗಿತ್ತು. ಇಂತಹ ಬೀಳು ಭೂಮಿಯನ್ನು ಅಭಿವೃದ್ಧಿಪಡಿಸಿ ಭೂಹೀನ ಬಡವರಿಗೆ ವಿತರಣೆ ಮಾಡುವ ಬದಲು ಅದನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಲಾಗುತ್ತಿದೆ ಗುಜರಾತ್‌ನಲ್ಲಿ ಲಭ್ಯ ಇರುವ 26 ಲಕ್ಷ ಹೆಕ್ಟೇರ್

ಪುಟ 10 ಕ್ಕೆ

# ರಾಜ್ಯವ್ಯಾಪಿ ಪಕ್ಷದ ಪ್ರಚಾರಾಂದೋಲನ

**ಭೂಮಿ-ಆಹಾರ-ಉದ್ಯೋಗದ ಪ್ರಶ್ನೆಗಳ ಆಧಾರದಲ್ಲಿ ರಾಷ್ಟ್ರವ್ಯಾಪಿ ನಡೆಯುತ್ತಿರುವ ಪಕ್ಷದ ಪ್ರಚಾರಾಂದೋಲನದ ಭಾಗವಾಗಿ ರಾಜ್ಯದಲ್ಲಿಯೂ ವ್ಯಾಪಕವಾದ ಚಟುವಟಿಕೆಗಳು ನಡೆದಿವೆ. ಅದರ ಸಂಕ್ಷಿಪ್ತ ವರದಿಯನ್ನು ಇಲ್ಲಿ ನೀಡಲಾಗಿದೆ.**

**ಮಂಗಳೂರು :** ಜನಸಾಮಾನ್ಯರನ್ನು ಬಾಧಿಸುವ ಮುಖ್ಯ ಪ್ರಶ್ನೆಗಳಾಗಿರುವ ಆಹಾರ, ಭೂಮಿ ಮತ್ತು ಉದ್ಯೋಗದ ಕುರಿತು ದೇಶದಾದ್ಯಂತ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ವ್ಯಾಪಕ ಚಳುವಳಿ ರೂಪಿಸಬೇಕೆಂಬ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕರೆಯ ಮೇರೆಗೆ ಮಂಗಳೂರಿನ ಗುರುಪುರ ಪ್ರದೇಶದ ಕೈಕಂಭದಲ್ಲಿ ಸಮಾವೇಶ ಯಶಸ್ವಿಯಾಗಿ ನಡೆದಿದೆ. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಕಾಂ.ಯು.ಬಿ. ಲೋಕಯ್ಯ, ಕಾಂ. ಗಂಗಯ್ಯ ಅಮೀನ್ ಮುಂತಾದವರು ಪಾಲ್ಗೊಂಡಿದ್ದರು.

ಸಮಾವೇಶದ ನಂತರ ಗುರುಪುರ ಪ್ರದೇಶದಲ್ಲಿ ಮನೆ ಮನೆ ಪ್ರಚಾರ ನಡೆದಿದೆ. ತಂಡ ತಂಡಗಳಾಗಿ ಮನೆ ಮನೆಗೆ ಭೇಟಿ ನೀಡಿ ಚರ್ಚೆ ನಡೆಸಲಾಗಿದೆ.

ಇದಲ್ಲದೆ ಮಂಗಳೂರು ಜಿಲ್ಲೆಯಾದ್ಯಂತ ಪ್ರಚಾರಾಂದೋಲನ ವ್ಯಾಪಕವಾಗಿ ನಡೆದಿದೆ. ಮಂಗಳೂರಿನಲ್ಲಿ ಮೂರು ಪ್ರದೇಶಗಳಿಂದ ಹೊರಟ ಜಾಥಾ ಆಹಾರ,ಭೂಮಿ, ಉದ್ಯೋಗ ಪ್ರಶ್ನೆಗಳ ಬಗೆಗೆ ಜನರಿಗೆ ವಿವರಿಸುತ್ತಾ ಬಂದು ಸ್ಟೇಟ್ ಬ್ಯಾಂಕ್ ಸರ್ಕಲ್ ಸೇರಿ ಅಲ್ಲಿ ಬೃಹತ್ ಸಭೆ ನಡೆದಿದೆ. ಈ ಸಭೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿಗಳು, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಶ್ರೀಯಾನ್ ಮುಂತಾದವರು ಮಾತನಾಡಿದರು. ಬಂಟ್ವಾಳದಲ್ಲಿ ಮನೆ ಮನೆ ಪ್ರಚಾರದ ಜೊತೆಗೆ ಎರಡು ಕಾಲ್ನಡಿಗೆ ಜಾಥಾ ಸಂಘಟಿಸಲಾಗಿದೆ. ಬೆಳ್ತಂಗಡಿ, ಉಳ್ಳಾಲ, ಮಂಗಳೂರುಗಳಲ್ಲಿಯೂ ಇದೇ ರೀತಿಯ ಪ್ರಚಾರಗಳು ನಡೆದಿವೆ. ಬೆಳ್ತಂಗಡಿ ಪ್ರಚಾರಾಂದೋಲನದ ಕೊನೆಯಲ್ಲಿ ಆಗಸ್ಟ್ 29 ರಂದು ನಡೆದ ಬೃಹತ್ ಬಹಿರಂಗ ಸೆಯಲ್ಲಿ ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಕಾಂ. ಶ್ರೀಯಾನ ಪಾಲ್ಗೊಂಡು ಮಾತನಾಡಿದ್ದಾರೆ. ಉಳ್ಳಾಲದಲ್ಲಿ ಮೂರು ದಿನಗಳ ಕಾಲ್ನಡಿಗೆ ಜಾಥಾ ನಡೆಸಲಾಗಿದೆ. ಪ್ರದೇಶದ ಪ್ರತಿ ಗ್ರಾಮಗಳನ್ನು ಪ್ರಚಾರದ ಮೂಲಕ ತಲುಪಿಸಲಾಗಿದೆ. ಒಟ್ಟಾರೆ ಜಿಲ್ಲೆಯಲ್ಲಿ 25 ಸಾವಿರ ಕರಪತ್ರಗಳೊಂದಿಗೆ ಕನಿಷ್ಟ 25 ಸಾವಿರ ಕುಟುಂಬಗಳನ್ನು ತಲುಪುವಂತೆ ಪ್ರಚಾರ ನಡೆಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಪಕ್ಷದ ಸದಸ್ಯರ ಮತ್ತು ಹಿತೈಷಿಗಳ ಸಭೆಗಳು ಜುಲೈ ತಿಂಗಳಲ್ಲಿ ನಡೆದು ಪ್ರಚಾರ - ಪ್ರಕ್ಷೋಭೆಗೆ ಸಿದ್ಧತಾ ಕೆಲಸ ನಡೆಯಿತು. ಆಗಸ್ಟ್ ತಿಂಗಳಲ್ಲಿ 15-20 ಮಂದಿಯ ತಂಡಗಳ ಮೂಲಕ ಕುಂದಾಪುರ, ಬೈಂದೂರು, ಬ್ರಹ್ಮಾವರ, ಕೊಡವೂರು ಈ ಪ್ರದೇಶಗಳಲ್ಲಿ 'ಕಾಲ್ನಡಿಗೆ ಜಾಥಾ' ನಡೆಯಿತು. ಈವರೆಗೆ ಸುಮಾರು 25 ಸಾವಿರ ಕರಪತ್ರಗಳನ್ನು ಮನೆ-ಮನೆಗೆ ಹೋಗಿ ಹಂಚುವ ಮೂಲಕ ವ್ಯಾಪಕ ಪ್ರಚಾರ ನಡೆದಿದೆ.

ಬೈಂದೂರ್ ವಿಧಾನಸಭಾ ಕ್ಷೇತ್ರದಲ್ಲಿ ಕರ್ಕುಂಜೆ, ಗುಲ್ವಾಡಿ, ಹಟ್ಟಿಯಂಗಡಿ, ಉಪ್ಪಿನಕುದ್ರು, ತಲ್ಲೂರು, ಕನ್ಯಾಣ ಮತ್ತು ನಾಡ ಈ ಗ್ರಾಮಗಳಲ್ಲಿ ಸುಮಾರು 150 ಪಕ್ಷದ ಸದಸ್ಯರು ಪಕ್ಷದ ತಾಲೂಕು ಸಮಿತಿಯ ಸದಸ್ಯರಾದ ಕಾ. ಮುತ್ತಯ್ಯ ಕನ್ಯಾಣ, ಜಿ.ಬಿ. ಮಹಮ್ಮದ್, ರಾಜು ಪಡುಕೋಣೆ ಹಾಗೂ ಇತರ ಪಕ್ಷದ ಸದಸ್ಯರ ನೇತೃತ್ವದಲ್ಲಿ ಮನೆ-ಮನೆಗೆ ಹೋಗಿ ಕರಪತ್ರ ಹಂಚಿ ಪ್ರಚಾರ ಮಾಡುವ ಮೂಲಕ ಆಹಾರ ಮತ್ತು ಭೂಮಿಯ ಪ್ರಶ್ನೆಗಳಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ನಡೆಯುವ ಪ್ರದೇಶ ಮತ್ತು ತಾಲೂಕು ಮಟ್ಟದ ಹೋರಾಟದಲ್ಲಿ ಜನಸಾಮಾನ್ಯರು ಭಾಗವಹಿಸಲು ಸಿದ್ಧತೆ ಕೂಡಾ ನಡೆದಿದೆ.

ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾವ್ರಾಡಿ, ಅಂಪಾರು, ಕೋಣಿ, ಕಂದಾವರ, ಬಳ್ಕೂರು, ಬಸ್ರೂರು, ಗ್ರಾಮಗಳಲ್ಲಿ ಮುಖ್ಯವಾಗಿ ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಮದ್ದುಗುಡ್ಡಿ, 8ನೇ ವಾರ್ಡ್, ಖಾರ್ವಿಕೇರಿ, 4ನೇ ವಾರ್ಡ್ ಮತ್ತು ಕೋಡಿ ಪ್ರದೇಶಗಳಲ್ಲಿ ಸುಮಾರು 180 ಪಕ್ಷದ ಸದಸ್ಯರು ಹಗೂ ಕಾರ್ಮಿಕರು ಮನೆ-ಮನೆಗೆ ಕರಪತ್ರ ಹಂಚುವ ಮೂಲಕ ವ್ಯಾಪಕ ಪ್ರಚಾರ ಮಾಡಿ, ಹಳದಿ ಕಾರ್ಡು ಮತ್ತು ಉದ್ಯೋಗದ ಬೇಡಿಕೆಗಳಿಗಾಗಿ ಜನಸಮಾನ್ಯರನ್ನು ಹಾಗೂ ಯುವಕರನ್ನು ಸಿದ್ಧತೆಗೊಳಿಸುವ ಕೆಲಸ ನಡೆದಿದೆ. ಕಾ. ಮಹಾಬಲ ವಡೇರಹೋಬಳಿ, ಗೋಪಾಲ ಶೆಟ್ಟಿಗಾರ ಮತ್ತು ಯು.ದಾಸ ಭಂಡಾರಿಯವರು ನೇತೃತ್ವ ವಹಿಸಿರುತ್ತಾರೆ.

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಕಾಂ. ಎಚ್.ವಿಠಲ್‌ನವರ ನೇತೃತ್ವದಲ್ಲಿ 30 ಮಂದಿಯ 3 ತಂಡಗಳಾಗಿ ಬ್ರಹ್ಮಾವರದ 3 ಗ್ರಾಮಗಳಲ್ಲಿ 'ಕಾಲ್ನಡೆ ಜಾಥಾ'ದ ಮೂಲಕ ಮನೆ-ಮನೆಗೆ ಹೋಗಿ ಕರಪತ್ರ ಹಂಚಿರುತ್ತಾರೆ. 20 ಮಂದಿ 2 ತಂಡಗಳಾಗಿ ಸಾಲಿಗ್ರಾಮದಲ್ಲಿ ಕರಪತ್ರ ಹಂಚಿರುತ್ತಾರೆ.

ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯವಾಗಿ ನಗರಸಭಾ ವ್ಯಾಪ್ತಿಯ ಕಲ್ಯಾಣಪುರ, ಕೊಡವೂರು, ಕುಂಜಿಬೆಟ್ಟು, ಮಾರ್ಪಳ್ಳಿ, ಶಿವಳ್ಳಿ, ಅಂಬಾಗಿಲು ಮತ್ತು ಪೇಟೆಯ ಮುಖ್ಯ ವಾರ್ಡುಗಳಲ್ಲಿ ಮನೆ - ಮನೆಗೆ ಹೋಗಿ ಕರಪತ್ರ ಹಂಚಲಾಗಿದೆ. ಕಾ. ಡೇವಿಡ್ ಎ.ಕರ್ಕಡ, ಪಿ.ವಿಶ್ವನಾಥ ರೈ, ಸಾಧು ಅಮೀನ್, ರಮೇಶ ಮೆಂಡನ್, ದೋಗು ಸುವರ್ಣ, ಕೃಷ್ಣ ಅಮೀನ್, ಡೇರಿಕ್ ರೆಬೆಲ್ಲೊ ಮತ್ತು ಸಂಜೀವ ನಾಯ್ಕರವರ ನೇತೃತ್ವದಲ್ಲಿ ಸುಮಾರು 120 ಮಂದಿಯ 12 ತಂಡಗಳಾಗಿ ಹೋಗಿ ಕರಪತ್ರ ಹಂಚಿರುತ್ತಾರೆ.

ಇನ್ನೂ ಕೆಲವು ಗ್ರಾಮಗಳಿಗೆ 'ಕಾಲ್ನಡೆ ಜಾಥಾ' ಹೋಗುವ ಕಾರ್ಯಕ್ರಮವಿದೆ. ತಾರೀಕು 1.9.2005 ರಂದು ಕುಂದಾಪುರದ ಪೇಟೆಯಲ್ಲಿ ಸುಮಾರು 70 ಮಂದಿಯ ಒಂದು ತಂಡ ಬಾವುಟಗಳನ್ನು ಮತ್ತು ಬೇನರ್ ಹಿಡಿದು ಅಂಗಡಿ ಹಾಗೂ ಹೋಟೇಲ್ ಮತ್ತು ಮನೆಗಳಿಗೆ ಹೋಗಿ ಕರಪತ್ರ ಹಂಚಲಾಗಿದೆ. 'ಕಾಲ್ನಡೆ ಜಾಥಾ'ದ ನೇತೃತ್ವವನ್ನು ಕಾ. ಕೆ.ಶಂಕರ್, ಮಹಾಬಲ ವಡೇರಹೋಬಳಿ, ಮುತ್ತಯ್ಯ ಕನ್ಯಾಣ, ಗೋಪಾಲ ಶೆಟ್ಟಿಗಾರ, ಗೋವಿಂದ ಶೆಟ್ಟಿಗಾರ, ಎಲ್.ಶೀನ, ಕೆ.ಶಾರದ ಮತ್ತು ಅಶ್ವತ್ ಕುಮಾರ್ ವಹಿಸಿರುತ್ತಾರೆ.

ಸೆಪ್ಟೆಂಬರ್ ತಿಂಗಳಲ್ಲಿ ಕೆಲವು ಪ್ರದೇಶಗಳಲ್ಲಿ ಜಾಥಾ, ಪ್ರಚಾರ ಸಭೆ ಹಾಗೂ ಬೇಡಿಕೆಗಳಿಗಾಗಿ ಸಾಮೂಹಿಕ ಚಳುವಳಿ ನಡೆಸುವ ಸಿದ್ಧತೆ ನಡೆಸಲಾಗಿದೆ.

ಗುಲ್ಬರ್ಗಾ: ಪಕ್ಷದ ಪ್ರಚಾರಾಂದೋಲನಕ್ಕೆ ಗುಲ್ಬರ್ಗಾ ಜಿಲ್ಲೆಯಲ್ಲಿ ಉತ್ತಮವಾದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜಿಲ್ಲೆಯಲ್ಲಿ 14 ದಿನದ ಜೀಪ್ ಜಾಥಾ ನಡೆದಿದೆ. ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕೋಮುಸೌಹಾರ್ದತೆಯ ಒಂದು ಉತ್ತಮ ಸಂಕೇತದಂತಿರುವ ಬಬಲಾದ ಊರಿನಿಂದ ಜಾಥಾ ಆರಂಭಗೊಂಡಿತು. ಜಾಥಾದ ನಡುವೆ ಒಟ್ಟು 96 ಹಳ್ಳಿಗಳಲ್ಲಿ ಬಹಿರಂಗ ಸಭೆಗಳು ನಡೆದಿವೆ. ಸಭೆಗಳಲ್ಲಿ 40-50ರಿಂದ 300-400ರವರೆಗೆ ಜನಗಳು ಸೇರಿದ್ದಾರೆ. ಉತ್ತಮವಾಗಿ ಪ್ರತಿಕ್ರಿಯಿಸಿದ್ದಾರೆ.

ಅದೇ ರೀತಿ ಚಿಂಚೋಳಿ ತಾಲ್ಲೂಕಿನಲ್ಲಿ 6 ದಿನಗಳ ಆಟೋ ಪ್ರಚಾರ -ಸಾರ್ವಜನಿಕ ಸಭೆ ನಡೆದಿದೆ. ಶಾಪುರ ತಾಲ್ಲೂಕಿನಲ್ಲಿ 5 ದಿನಗಳ ಜೀಪ್ ಜಾಥಾ ನಡೆದಿದೆ. ಗುಲ್ಬರ್ಗಾ ನಗರದಲ್ಲಿ 2 ದಿನಗಳ ಕಾಲ ಮನೆ ಮನೆ ಪ್ರಚಾರ ನಡೆಸಿ ಕರಪತ್ರ ವಿತರಿಸಲಾಗಿದೆ.

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 3 ಕಡೆ ಸಮಾವೇಶಗಳು ನಡೆದಿವೆ. ಆನೇಕಲ್‌ನಲ್ಲಿ ತಾಲ್ಲೂಕಿನಲ್ಲಿ ಆನೇಕಲ್ ಮತ್ತು ಸಮಂದೂರಿನಲ್ಲಿ ಒಟ್ಟು ಎರಡು ಸಮಾವೇಶಗಳು ನಡೆದಿವೆ. ಕೆಂಗೇರಿ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಪಾಲ್ಗೊಂಡ ಎರಡು ಸಮಾವೇಶಗಳು ಜರುಗಿವೆ. ಕೆ.ಆರ್.ಪುರಂ ಪ್ರದೇಶದಲ್ಲಿ 2 ದಿನ ಆಟೋ ಪ್ರಚಾರ ಹಾಗೂ ಸಮಾವೇಶ ನಡೆದಿದೆ. ಶ್ರೀರಾಮಪುರ ಪ್ರದೇಶದಲ್ಲಿ ಮನೆ ಮನೆ ಪ್ರಚಾರ ಹಮ್ಮಿಕೊಳ್ಳಲಾಗಿದೆ. ಹಾಗೆ ಬೈಕ್ ಜಾಥಾದ ಸಿದ್ಧತೆ ನಡೆದಿದೆ. ಪಕ್ಷದ ಮಹಿಳಾ ಶಾಖೆಯಿಂದ ಮೆಜೆಸ್ಟಿಕ್, ಸಂಪಂಗಿರಾಮನಗರ ಪ್ರದೇಶಗಳಲ್ಲಿ ಪ್ರಚಾರ ಮತ್ತು ನಿಧಿ ಸಂಗ್ರಹ ನಡೆದಿದೆ. ಯಶವಂತಪುರ ಪ್ರದೇಶದಲ್ಲಿ ಸರ್ವ ಸದಸ್ಯರ ಸಭೆಗಳು ನಡೆದಿದ್ದು ಮನೆಮನೆಗೆ ಪ್ರಚಾರಕ್ಕೆ ನಿರ್ಧರಿಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಬಾಗೇಪಲ್ಲಿ, ಗುಡಿಬಂಡೆ, ಕೋಲಾರ, ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಪಂಚಾಯ್ತಿ ಮಟ್ಟದ ತಂಡಗಳನ್ನು ರಚಿಸಿ ಆಮೂಲಕ ಪ್ರಚಾರಾಂದೋಲನ ನಡೆಸಲಾಗಿದೆ.

ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ 2 ದಿನ ಪ್ರಚಾರ ಹಾಗೂ ಬಹಿರಂಗ ಪ್ರಚಾರಗಳನ್ನು ನಡೆಸಲಾಗಿದೆ. ಜೀಪ್ ಜಾಥಾ ಮೂಲಕ ಹಳ್ಳಿಗಳಲ್ಲಿ ಪ್ರಚಾರಾಂದೋಲನ ನಡೆದಿದೆ. ಪಕ್ಷದ ರಾಜ್ಯಸಮಿತಿ ಸದಸ್ಯರಾದ ಭೀಮಸಿ ಕಲಾದಗಿ, ಅಣ್ಣಾರಾಯ ಈಳಗೇರಾ ಮತ್ತು ಮಹಿಳಾ ಮುಖಂಡರಾದ ಸುರೇಖ ರಜಪೂತ ಭಾಗವಹಿಸಿದ್ದಾರೆ. ಇದಲ್ಲದೆ ಶಾಖಾ ಮಟ್ಟದ ಸಭೆ ನಡೆಸಿ ಬಿಜಾಪುರ ನಗರದಲ್ಲಿ ಪ್ರಚಾರ ವಿಸ್ತರಿಸಲು ಯೋಜಿಸಲಾಗಿದೆ. ಬಳ್ಳಾರಿಯಲ್ಲಿ ಸ್ಥಳೀಯ ಸಮಿತಿಗಳ ಸಭೆಗಳನ್ನು ಹಾಗೂ ಶಾಖಾ ಸಭೆಗಳನ್ನು ನಡೆಸಿ ಪ್ರಚಾರಾಂದೋಲನದ ಬಗೆಗೆ ವಿವರಿಸಲಾಗಿದೆ.

ತುಮಕೂರಿನಲ್ಲಿ ಆಗಸ್ಟ್ 7ರಂದು ಉದ್ಘಾಟನೆಗೊಂಡ ಪ್ರಚಾರಾಂದೋಲನದಲ್ಲಿ ಪಕ್ಷದ ರಾಜ್ಯಸಮಿತಿ ಸದಸ್ಯರಾದ ಕಾಂ.ಬಾಲಕೃಷ್ಣ ಶೆಟ್ಟಿ, ಕಾಂ.ಸೈಯದ್ ಮುಜೀಬ್, ಗಂಗಾಧರ್ ಮುಂತಾದವರು ಪಾಲ್ಗೊಂಡಿದ್ದರು. 10 ಸಾವಿರ ಕರಪತ್ರಗಳನ್ನು ಮನೆಮನೆಗೆ ತಲುಪಿಸುವ ಪ್ರಚಾರಾಂದೋಲನ ನಡೆದಿದೆ. ಪೌರ ಕಾರ್ಮಿಕರಿಗೆ ಕೊಳಗೇರಿ ನಿವಾಸಿಗಳಿಗೆ ಅವರ ಮನೆಗಳಿಗೆ ಹಕ್ಕುಪತ್ರಗಳನ್ನು ನೀಡುವಂತೆ ಒತ್ತಾಯಿಸಲಾಗಿದೆ. ಸಮರ್ಪಕ ರೇಷನ್ ವ್ಯವಸ್ಥೆಗಾಗಿ ಚಳುವಳಿ ತೀವ್ರಗೊಳಿಸಲು ಮತ್ತು ಗಣಿಗಾರಿಕೆಯ ವಿರುದ್ಧ ಚಳುವಳಿ ನಡೆಸಲು ನಿರ್ಧರಿಸಲಾಗಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಭಟ್ಕಳ, ಹೊನ್ನಾವರ, ಶಿರಸಿ, ಧಾಂಡೇಲಿಗಳಲ್ಲಿ ಸಮಾವೇಶಗಳು ನಡೆದಿವೆ. ಕಾರವಾರದಲ್ಲಿ ಸಮಾವೇಶದ ಸಿದ್ಧತೆಗಳು ನಡೆದಿವೆ. ಜಾಥಾ ತಯಾರಿ ಸಹ ನಡೆದಿದೆ.

ಕೊಡಗು ಜಿಲ್ಲೆಯಲ್ಲಿ ವಿರಾಜಪೇಟೆಯಲ್ಲಿ ಕರಪತ್ರ ವಿತರಣೆ ನಡೆದಿದೆ. ಸೆಪ್ಟೆಂಬರ್ 10ರಿಂದ 25ರವರೆಗೆ ಕರಿಕೆ, ಭಾಗಮಂಡಲ, ಸಿದ್ಧಾಪುರ, ಮೊದಲಾದ ಕಡೆಗಳಲ್ಲಿ ಶಾಖೆಗಳ ವತಿಯಿಂದ ಮನೆಮನೆಗೆ ತೆರಳಿ ಪ್ರಚಾರ ನಡೆಸಲಾಗಿದೆ. ಜನರೊಂದಿಗೆ ಚರ್ಚಿಸಲಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರೆಹಳ್ಳಿ ಕೌಕುಡಿ ಮತ್ತು ಸಾಂತವೇರಿಗಳಲ್ಲಿ ತೋಟ ಕಾರ್ಮಿಕರ ಮನೆ ಮನೆಗೆ ತೆರಳಿ ಪ್ರಚಾರ ನಡೆಸಲಾಗಿದೆ. ಕಾಫಿ, ಬೆಲೆ ಕುಸಿತದಿಂದಾಗಿ ಕೂಲಿ ಕಡಿಮೆಯಾಗಿ ಆಹಾರದ ಸಮಸ್ಯೆ ತೀವ್ರವಾಗಿರುವ ಈ ಜನವಿಭಾಗಗಳ ನಡುವೆ ಪ್ರಚಾರಾಂದೋಲನ ನಡೆಸಲಾಗುತ್ತಿದೆ. ಸುಮಾರು 3 ಸಾವಿರ ಕರಪತ್ರ ವಿತರಿಸಲಾಗಿದೆ.

ಮೈಸೂರಿನಲ್ಲಿ ಪಕ್ಷದ ಸರ್ವಸದಸ್ಯರ ಸಭೆ ನಡೆಸಲಾಗಿದೆ. ಮೈಸೂರು ನಗರದ ಆಯ್ದ ಕೇಂದ್ರಗಳಲ್ಲಿ ಮನೆಮನೆಗೆ ಪ್ರಚಾರ ನಡೆಸಲಾಗಿದೆ. 8 ಸಾವಿರ ಕರಪತ್ರ ವಿತರಿಸಲಾಗಿದೆ. ಪ್ರಚಾರಾಂದೋಲನ ಪ್ರಶ್ನೆಗಳಿಗೆ ಸಂಬಂಧಿಸಿ ಪ್ರಶ್ನಾವಳಿ ರೂಪಿಸಿ ಜನರಿಂದ ಮಾಹಿತಿ ಸಂಗ್ರಹವೂ ನಡೆಯುತ್ತಿದೆ.

ಬೆಳಗಾಂ ಜಿಲ್ಲೆಯ ರಾಮದುರ್ಗದಲ್ಲಿ ಸಭೆಗಳು ನಡೆಯುತ್ತಿವೆ. ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಪ್ರದೇಶ ಸಮಿತಿಯ ಸದಸ್ಯ ಉನ್ನಿತ್ತನ್ ನೇತೃತ್ವದಲ್ಲಿ 2 ಸಭೆಗಳು ನಡೆದಿವೆ. ದಾವಣಗೆರೆಯಲ್ಲಿ ಕಾರ್ಮಿಕರು- ಮಧ್ಯಮವರ್ಗದ ಜನರ ನಡುವೆ ಮನೆಮನೆ ಪ್ರಚಾರ ನಡೆದಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ 3 ಸಾವಿರ ಕರಪತ್ರದೊಂದಿಗೆ ಮನೆ ಮನೆ ಪ್ರಚಾರ ನಡೆದಿದೆ.

ಪಕ್ಷದ ಧಾರವಾಡ ಜಿಲ್ಲಾ ವ್ಯಾಪ್ತಿಯ ಗದಗ್ ಜಿಲ್ಲೆಯ ಬೆಳವಣಿಕೆ, ಕಾಡಶೆಟ್ಟಿ ಹಳ್ಳಿಯಲ್ಲಿ ಮನೆ ಮನೆಗೆ ತೆರಳಿ ಕರಪತ್ರ ವಿತರಿಸಲಾಗಿದೆ.

ರಾಯಚೂರು ಜಿಲ್ಲೆಯಲ್ಲಿ ಪ್ರಚಾರಾಂದೋಲನಕ್ಕೆ ಪೂರಕ ಸ್ಥಳೀಯ ಸಮಿತಿಗಳ ಸಭೆಗಳು ನಡೆದಿವೆ. ಗ್ರಾಮಗಳಲ್ಲಿ ಮತ್ತು ವಾರ್ಡ್‌ಗಳಲ್ಲಿ ಸಭೆಗಳ ಮೂಲಕ ಪ್ರಚಾರಾಂದೋಲನ ನಡೆದಿದೆ. ರಾಯಚೂರಿನ 6 ವಾರ್ಡ್‌ಗಳಲ್ಲಿ, ಸಿಂಧನೂರಿನ 6 ಗ್ರಾಮಗಳಲ್ಲಿ, ದೇವದುರ್ಗದ 8 ಗ್ರಾಮಗಳಲ್ಲಿ ಸಭೆ ನಡೆಸಲಾಗಿದೆ. ರಾಯಚೂರಿನಲ್ಲಿ ವಸತಿ- ನಿವೇಶನದ ಸಂಬಂಧ ಹೋರಾಟವನ್ನು ನಡೆಸಲಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಪ್ರಚಾರಾಂದೋಲನಕ್ಕೆ ಪೂರಕವಾಗಿ ಸರ್ವ ಸದಸ್ಯರ ಸಭೆ ನಡೆದಿದೆ. 35 ಜನರ ಸೈಕಲ್ ಜಾಥಾ 2 ದಿನಗಳ ಕಾಲ ನಡೆದಿದ್ದು 10 ಗ್ರಾಮಗಳಲ್ಲಿ ಪ್ರಚಾರಾಂದೋಲನ ನಡೆಸಲಾಗಿದೆ. ಗಂಗಾವತಿ ಪಟ್ಟಣದ 4 ಕಡೆಗಳಲ್ಲಿ ಕಾಲ್ನಡಿಗೆ ಜಾಥಾ ನಡೆಸಲಾಗಿದೆ. ಸೈಕಲ್ ಜಾಥಾ, ಕಾಲ್ನಡಿಗೆ ಜಾಥಾ ಮುಂದುವರಿಯಲಿದೆ. 5 ಸಾವಿರ ಕರಪತ್ರಗಳೊಂದಿಗೆ ಪ್ರಚಾರ ನಡೆದಿದೆ.

### 'ಖಾಸಗಿ ವಿದ್ಯುತ್ ಕಂಪನಿಗಳ ಏಜೆಂಟರಾಗಬೇಡಿ' ದಿಲ್ಲಿ ರಾಜ್ಯದ ಸರಕಾರಕ್ಕೆ ಸಿಪಿಐ(ಎಂ) ಆಗ್ರಹ

ದೇಶದ ರಾಜಧಾನಿ ನವದೆಹಲಿಯಲ್ಲಿ ವಿದ್ಯುತ್ ಸರಬರಾಜನ್ನು ಖಾಸಗೀಯವರಿಗೆ ಕೊಟ್ಟಿದ್ದು ಇತ್ತೀಚೆಗೆ ಅವರು ವಿದ್ಯುತ್ ದರಗಳನ್ನು ಶೇ.10ರಷ್ಟು ಹೆಚ್ಚಿಸಿದ್ದು, ಇದಕ್ಕೆ ವ್ಯಾಪಕ ಪ್ರತಿಭಟನೆ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಈಗ ಈ ದರ ಏರಿಕೆಯನ್ನು ಹಿಂತೆಗೆದು ಕೊಳ್ಳಲಾಗಿದೆ. ಆದರೆ ಪ್ರತಿಯಾಗಿ ದಿಲ್ಲಿ ಕಾಂಗ್ರೆಸ್ ರಾಜ್ಯ ಸರ್ಕಾರ ಖಾಸಗಿ ಕಂಪನಿಗಳ 'ನಷ್ಟ'ವನ್ನು ತುಂಬಿಕೊಡುವ ಹೆಸರಿನಲ್ಲಿ 93.5 ಕೋಟಿ ರೂಗಳ ಸಬ್ಸಿಡಿಯನ್ನು ಕೊಡಲು ನಿರ್ಧರಿಸಿದೆ. ಇದು ವಿದ್ಯುತ್ ದರ ಏರಿಕೆಯಿಂದ ಬರಬಹುದಾಗಿದ್ದ ಮೊತ್ತದ ಶೇ.50ರಷ್ಟಾಗುತ್ತದೆ. ಇದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು. ರಾಜ್ಯ ಸರಕಾರ ಖಾಸಗಿ ವಿದ್ಯುತ್ ಕಂಪನಿಗಳ ಏಜೆಂಟರಾಗಿ ವರ್ತಿಸುವುದನ್ನು ನಿಲ್ಲಿಸಬೇಕು ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿ ಆಗ್ರಹ ಪಡಿಸಿದೆ. ಖಾಸಗೀ ವಿದ್ಯುತ್ ಸರಬರಾಜು ಕಂಪನಿಯಾದ ಬಿಎಸ್‌ಇಎಸ್ ದರ ಏರಿಕೆ ಕೇಳಲು ಸುಳ್ಳು ಅಂಕಿ-ಸಂಖ್ಯೆಗಳನ್ನು ನೀಡಿದ್ದು ಈ ವಂಚನೆಯ ಬಗ್ಗೆ ಅದನ್ನು ತರಾಟೆಗೆ ತೆಗೆದುಕೊಳ್ಳಬೇಕಾಗಿತ್ತು. ಅಲ್ಲದೆ ಖಾಸಗೀಕರಣ ಮಾಡುವಾಗ ಒಪ್ಪಿದ ಅಂಶಗಳಿಗೆ ಈಗ ಅದು ಬದ್ಧವಾಗಿಯೂ ಇಲ್ಲ. ಆದರೆ ಆ ಕಂಪನಿಯನ್ನು ಶಿಕ್ಷಿಸುವ ಬದಲು ಸರಕಾರ ಸಾರ್ವಜನಿಕರ ಹಣವನ್ನು ಸಬ್ಸಿಡಿಯಾಗಿ ನೀಡುತ್ತಿದೆ. ಖಾಸಗೀಕರಣ ವೆಂದರೆ ಸಾರ್ವಜನಿಕ ಹಣದ ಲೂಟಿ ಎಂಬುದಕ್ಕೆ ಇದು ಇತ್ತೀಚಿನ ಉದಾಹರಣೆ.

**ಹದಿಮೂರು ವರ್ಷಗಳ ನಂತರ ಇದೀಗ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ನಡೆದಿದೆ. ಭಾರತೀಯ ಸಮಾಜವನ್ನು ಕಾಡುತ್ತಿರುವ ಸಂಕೀರ್ಣ ಸಮಸ್ಯೆಯಾದ ಕೋಮುವಾದವನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಬೇಕಾದ ಅಗತ್ಯವನ್ನು ಕುರಿತು ಹಾಗೂ ಅದರ ಮಾರ್ಗೋಪಾಯಗಳ ಕುರಿತು ಸಿಪಿಐ(ಎಂ) ಪಕ್ಷದ ಪರವಾಗಿ ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಮಂಡಿಸಿದ ವಿಚಾರಗಳು ಹಾಗೂ ಸಭೆಯ ವಿವರಗಳು ಇಲ್ಲಿವೆ.**

# ಕೋಮುವಾದಿ ಹಿಂಸಾಚಾರದ ನಿಗ್ರಹಕ್ಕೆ ಮಾದರಿ ಮಸೂದೆಯ ಭರವಸೆ ಈಡೇರಬೇಕು

**ಪ್ರಕಾಶ್ ಕಾರಟ್**

ಯುಪಿಎ ಸರಕಾರ ಕೋಮುವಾದಿ ಹಿಂಸಾಚಾರವನ್ನು ನಿಗ್ರಹಿಸಲು ಒಂದು ಮಾದರಿ ಮಸೂದೆ ತರುವುದಾಗಿ ವಚನ ನೀಡಿತ್ತು. ಇದು ಎಲ್ಲಾ ರಾಜ್ಯಗಳು ಈ ಕುರಿತ ಶಾಸನಗಳನ್ನು ತರಲು ಚೌಕಟ್ಟು ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಈ ವಚನ ಇನ್ನೂ ಈಡೇರಿಲ್ಲ. ಇನ್ನಷ್ಟು ವಿಳಂಬ ಮಾಡದೆ ಇಂತಹ ಒಂದು ಶಾಸನವನ್ನು ತರಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಮಂಡಿಸಿದ ಟಿಪ್ಪಣಿಯಲ್ಲಿ ಆಗ್ರಹಿಸಿದ್ದಾರೆ.

ದೇಶದಲ್ಲಿ ಕೋಮುವಾದಿ ಹಿಂಸಾಚಾರದ ಇತಿಹಾಸವನ್ನು ಗಮನಿಸಿದರೆ ಇಂತಹ ಹಿಂಸಾಚಾರವನ್ನು ಸಂಘಟಿಸಿದವರನ್ನು, ನಡೆಸಿದವರನ್ನು ಶಿಕ್ಷೆಗೆ ಗುರಿಪಡಿಸಿದ ಉದಹರಣೆಗಳೇ ಬಹಳ ಅಪರೂಪ ಎಂಬ ಸಂಗತಿಯತ್ತ ಗಮನ ಸೆಳೆದ ಕಾಂ.ಕಾರಟ್ ದೇಶದಲ್ಲಿ ಕೋಮು ಸೌಹಾರ್ದದ ಪ್ರಶ್ನೆಯನ್ನು ಚರ್ಚಿಸುವಾಗ ಇತ್ತೀಚೆಗೆ ಗುಜರಾತಿನಲ್ಲಿ ಸರಕಾರದ ಪೋಷಣೆಯಲ್ಲೇ ನಡೆದ ಸಾಮೂಹಿಕ ಹಿಂಸಾಚಾರದ ಅರ್ಥವನ್ನು ಉಪೇಕ್ಷಿಸಲು ಸಾಧ್ಯವಿಲ್ಲ ಎಂದರು. ರಾಷ್ಟ್ರೀಯ ಸಮಗ್ರತಾ ಮಂಡಳಿ ಈ ಭೀಕರ ಘಟನೆಯಿಂದ ಪಾಠ ಕಲಿಯಬೇಕು, ಮೊದಲ ಹೆಜ್ಜೆಯಾಗಿ ಈ ಹಿಂಸಾಚಾರದಲ್ಲಿ ಸಂಕಟ ಅನುಭವಿಸಿದವರಿಗೆ ನ್ಯಾಯ ಸಿಗಬೇಕು, ಹಿಂಸಾಚಾರ ನಡೆಸಿದವರನ್ನು ಶಿಕ್ಷಿಸಬೇಕು ಎಂದರು. ಗುಜರಾತ್ ರಾಜ್ಯ ಪೊಲೀಸ್ ಮತ್ತು ನ್ಯಾಯ ವ್ಯವಸ್ಥೆಯಿಂದಲೂ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿರುವಾಗ ಕೇಂದ್ರ ಸರಕಾರದ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ ಎಂದು ಅವರು ಹೇಳಿದರು.


ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ವ್ಯವಸ್ಥೆಯ ಕೋಮುವಾದೀಕರಣ ಒಂದು ಗಂಭೀರ ಆತಂಕದ ಸಂಗತಿಯಾಗಿದೆ. ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಇನ್ನು ಮಾಧ್ಯಮದ ಪಾತ್ರವೂ ಬೇಜವಾಬ್ದಾರಿತನದ್ದಾಗಿತ್ತು. ಪತ್ರಿಕಾ ಮಂಡಳಿ ತಯಾರಿಸಿದ ವರದಿಯೇ ಇದನ್ನು ಸಾಬೀತು ಮಾಡಿದೆ. ಮಾಧ್ಯಮ ಪ್ರತಿನಿಧಿಗಳೇ ರೂಪಿಸುವ ಒಂದು ಮಾದರಿ ನೀತಿ ಸಂಹಿತೆ ಹಾಗೂ ಮಾರ್ಗ ದರ್ಶಕ ಸೂತ್ರಗಳನ್ನು ಜ್ಯಾರಿಗೊಳಿಸಲು ಭಾರತೀಯ ಪತ್ರಿಕಾ ಮಂಡಳಿಗೆ ಸಾಕಷ್ಟು ಅಧಿಕಾರ ನೀಡಬೇಕು ಎಂದು ಕಾಂ.ಪ್ರಕಾಶ್ ಕಾರಟ್ ಸೂಚಿಸಿದರು.

ಕೋಮುವಾದದ ವಿಚ್ಛಿದ್ರಕಾರಿ ಪರಿಣಾಮವನ್ನು ದೇಶದಲ್ಲಿನ ಒಟ್ಟಾರೆ ಸಾಮಾಜಿಕ- ಆರ್ಥಿಕ ಸನ್ನಿವೇಶದಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಆದ್ದರಿಂದ ರಾಷ್ಟ್ರೀಯ ಸಮಗ್ರತಾ ಮಂಡಳಿ ಈ ಸಭೆಯಲ್ಲಲ್ಲದಿದ್ದರೂ, ಮುಂದಿನ ಸಭೆಗಳಲ್ಲಾದರೂ ರಾಷ್ಟ್ರೀಯ ಸಮಗ್ರತೆಯನ್ನು ತಟ್ಟುವ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕು ಎಂದು ಸೂಚಿಸಿದ ಕಾಂ.ಕಾರಟ್ 'ರಾಷ್ಟ್ರೀಯ ಐಕ್ಯತೆ'ಯ ಪರಿಕಲ್ಪನೆಯ ಬಗ್ಗೆ ಸ್ಪಷ್ಟತೆಯಿರಬೇಕು ಎಂದರು. ರಾಷ್ಟ್ರೀಯ ಐಕ್ಯತೆ ಎಂಬುದು 'ಒಂದು ದೇಶ, ಒಂದು ಜನ, ಒಂದು ಸಂಸತಿ' ಯಂತಹ ಘೋಷಣೆಯೊಳಗೆ ತುರುಕಲು ಸಾಧ್ಯವಿಲ್ಲ. ಭಾರತ ಒಂದು ಬಹುಭಾಷಾ ಬಹುಧರ್ಮಿಯ, ಬಹುಸಂಸತಿಯ ದೇಶ. ಈ ವೈವಿಧ್ಯತೆಯನ್ನು ಗುರುತಿಸಿ, ಅದರೊಳಗಿನ ಏಕತೆಯನ್ನು ಬಲಪಡಿಸುವ ಮೂಲಕವಷ್ಟೇ ಭಾರತದ ಐಕ್ಯತೆಯನ್ನು ಕಟ್ಟಿ ಬೆಳೆಸಬೇಕು. ಬಹುಸಂಖ್ಯಾತ ಕೋಮುವಾದ ಇಂತಹ ಭಾರತದ ಪರಿಕಲ್ಪನೆಯನ್ನು ಒಪ್ಪುವುದಿಲ್ಲ. 'ಹಿಂದುತ್ವ' ಎಂಬುದು ಜಾತ್ಯಾತೀತತೆಗೆ ವಿರುದ್ಧವಾದ ತತ್ವ ಎಂದವರು ವಿಶ್ಲೇಷಿಸಿದರು.

ಈ ಸಂದರ್ಭಧಲ್ಲಿ ಆರ್ಥಿಕ ನೀತಿಗಳೂ ಮುಖ್ಯವಾಗುತ್ತದೆ. ಬಹುಪಾಲು ಜನಗಳನ್ನು ಒಳಗೊಳ್ಳದ ಬೆಳವಣಿಗೆ ರಾಷ್ಟ್ರೀಯ ಐಕ್ಯತೆಗೆ ಹಾನಿಕಾರಕವಾದ ಪ್ರತಿಗಾಮಿ ತತ್ವಗಳಿಗೆ ಭೌತಿಕ ಆಧಾರ ಕಲ್ಪಿಸುತ್ತದೆ ಎಂದೂ ಅವರು ಒತ್ತಿ ಹೇಳಿದರು. ಈ ಸಂದರ್ಭದಲ್ಲಿ ಜಮ್ಮು-ಕಾಶ್ಮೀರ ಮತ್ತು ಈಶಾನ್ಯ ಭಾರತ ಈ ಎರಡು ಪ್ರದೇಶಗಳ ಮೇಲೆ ವಿಶೇಷ ಗಮನ ನೀಡಬೇಕು ಎಂದು ಅವರು ಹೇಳಿದರು.

2004-05ದಲ್ಲಿ ಕೋಮುವಾದಿ ಘಟನೆಗಳು, ಸಾವು- ನೋವುಗಳು ಕಡಿಮೆಯಾಗಿವೆ ಎಂಬುದು ಸಂತೋಷದ ಸಂಗತಿ. ಆದರೆ ಈ ಬಗ್ಗೆ ಸಂತೃಪ್ತ ಮನೋಭಾವ ಸಲ್ಲದು ಎಂದು ಅವರು ಹೇಳಿದರು.

ಯುಪಿಎ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಮೊದಲ ಬಾರಿಗೆ ಸಭೆ ಸೇರುತ್ತಿರುವ ರಾಷ್ಟ್ರೀಯ ಸಮಗ್ರತಾ ಮಂಡಳಿ ಪ್ರಭುತ್ವ ಮತ್ತು ಅದರ ಸಂಸ್ಥೆಗಳ ಎಲ್ಲಾ ವಲಯಗಳಲ್ಲಿ ಜಾತ್ಯಾತೀತ ನೀತಿಯನ್ನು ಮತ್ತೆ ತರುವ, ಬಲಗೊಳಿಸುವ ಕರೆ ನೀಡಬೇಕು ಎಂದು ಸೂಚಿಸಿದ ಕಾಂ.ಪ್ರಕಾಶ್ ಕಾರಟ್ ಈ ಮಂಡಳಿ ಕೋಮುವಾದದ ವಿದ್ಯಮಾನ ಹಾಗೂ ಸಮಾಜವನ್ನು ಅದು ತಟ್ಟುವ ರೀತಿಯ ಬಗ್ಗೆ ಚರ್ಚಿಸಿ ತೀರ್ಮಾನಗಳಿಗೆ ಬರುವ ವೇದಿಕೆಯಾಗಬೇಕು. ಈ ಪ್ರಕ್ರಿಯೆಯಲ್ಲಿ ನಮ್ಮ ಜಾತ್ಯಾತೀತ ಹಂದರವನ್ನು ರಕ್ಷಿಸಲು, ಬಲಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಚರ್ಚಿಸಬೇಕು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.



ಸಭೆಯಲ್ಲಿ ವಾಜಪೇಯಿ : ಕಬಾಬದಂಗಡಿಯಲ್ಲಿ ನೊಣಕ್ಕೇನು ಕೆಲಸ?

## ರಾಷ್ಟ್ರೀಯ ಸಮಗ್ರತೆಯೆಂದರೆ ವೈವಿಧ್ಯತೆಯಲ್ಲಿ ಏಕತೆಯೇ ಹೊರತು ಏಕರೂಪತೆ ಅಲ್ಲ

ಸುಮಾರು 13 ವರ್ಷಗಳ ನಂತರ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಆಗಸ್ಟ್ 31, 2005 ರಂದು ನಡೆಯಿತು. ಪುನರ್ರಚನೆಗೊಂಡ ಮಂಡಳಿ "ಸರಕಾರಿ ಕ್ರಿಯೆ, ಶಿಕ್ಷಣ ಮತ್ತು ಮಾಧ್ಯಮದ ಮೂಲಕ ಕೋಮುಸೌಹಾರ್ದ" ಎಂಬ ಮೂಲ ವಿಷಯದ ಮೇಲೆ ಚರ್ಚೆ ನಡೆಸಿತು.

ರಾಷ್ಟ್ರೀಯ ಸಮಗ್ರತಾ ಮಂಡಳಿ ಈ ಹಿಂದೆ ಸಭೆ ಸೇರಿದ್ದು ನವೆಂಬರ್ 1992ರಲ್ಲಿ. ಆಗ ಉದ್ರೇಕಕಾರಿ ಅಯೋಧ್ಯಾ ಆಂದೋಲನ ತಾರಕಕ್ಕೇರಿದ ಸಮಯ, ಬಿಜೆಪಿ ಸಭೆಯನ್ನು ಬಹಿಷ್ಕರಿಸಿತ್ತು. ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಮಂಡಿಸಿದ ನಿರ್ಣಯವನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಈ ನಿರ್ಣಯ ಬಾಬ್ರಿ ಮಸೀದಿಯ ರಕ್ಷಣೆಗೆ ಅಗತ್ಯವಾದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನರಸಿಂಹರಾವ್ ಸರಕಾರಕ್ಕೆ ಅಧಿಕಾರ ನೀಡಿತ್ತು. ಆದರೆ ಹಾಗಾಗಲಿಲ್ಲ ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಡಿಸೆಂಬರ್ 6ರಂದು ಬಾಬ್ರಿ ಮಸೀದಿ ಧ್ವಂಸ, ಅದರ ಭೀಕರ ಪರಿಣಾಮಗಳು, ಕೊಲೆ ಸುಲಿಗೆಗಳು ಅತ್ಯಂತ ಹೀನ ರೀತಿಯ ಕೋಮು ಧ್ರುವೀಕರಣವನ್ನು ಹರಿಯಬಿಟ್ಟವು (ಗುಜರಾತಿನ ಸರಕಾರ- ಪ್ರಾಯೋಜಿತ ಕೋಮು ಹತ್ಯಾಕಾಂಡದವರೆಗೆ).

ಅಂದಿನಿಂದ ರಾಷ್ಟ್ರೀಯ ಸಮಗ್ರತಾ ಮಂಡಳಿ ಸಭೆ ಸೇರಿರಲಿಲ್ಲ. ಹಲವಾರು ಸಲ ಕೇಳಿಕೊಂಡರೂ ಬಿಜೆಪಿ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ವಾಜಪೇಯಿ ಸಭೆ ಕರೆಯಲು ನಿರಾಕರಿಸಿದರು. ಅದು ಸಹಜವೇ ಆಗಿತ್ತು. ಏಕೆಂದರೆ ಆರ್.ಎಸ್.ಎಸ್/ ಬಿಜೆಪಿ ತಿಳುವಳಿಕೆಯ ಪ್ರಕಾರ ಭಾರತ ಒಂದು ದೇಶ, ಒಂದು ಜನ, ಒಂದು ಸಂಸತಿ. ಭಾರತದ ಇಂದಿನ ವೈವಿಧ್ಯತೆಯನ್ನು ಸೈದ್ಧಾಂತಿಕವಾಗಿ ಆರ್.ಎಸ್.ಎಸ್. ಬಿಜೆಪಿ ಗುರುತಿಸುವುದೇ ಇಲ್ಲ.

**ಪದಗಳ ಕಸರತ್ತಿನ ಹಿಂದೆ**

ತಮಾಷೆಯೆಂದರೆ ತಮ್ಮ ಆಳ್ವಿಕೆಯಲ್ಲಿ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಕರೆಯಲು ನಿರಾಕರಿಸಿದ್ದ ವಾಜಪೇಯಿ ಮತ್ತು ಅಡ್ವಾಣಿ ಈ ಸಭೆಯಲ್ಲಿ ಪ್ರಧಾನಮಂತ್ರಿ, ಯುಪಿಎ ಅಧ್ಯಕ್ಷೆ ಸೋನಿಯಾಗಾಂಧಿ, ಸಿಪಿಐ(ಎಂ) ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿಗಳೊಂದಿಗೆ ವೇದಿಕೆಯ ಮೇಲೆ ರಾರಾಜಿಸುತ್ತಿದ್ದರು.

ಆದರೆ ಅವರೂ ಭಾಗವಹಿಸಿದರೆಂದರೆ ತಮ್ಮ ನಿಲುವನ್ನು ಅವರು ಬದಲಿಸಿದ್ದಾರೆಂದು ಏನೂ ಅಲ್ಲ. ಅವರು ಈಗಲೂ ಆರ್.ಎಸ್.ಎಸ್‌ನ 'ಹಿಂದುರಾಷ್ಟ್ರ' ಪರಿಕಲ್ಪನೆಗೆ ಬದ್ಧರಾಗಿದ್ದಾರೆ. ಇದು ಆಧುನಿಕ ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವ ಸ್ವರೂಪಕ್ಕೆ ತದ್ವಿರುದ್ಧವಾದ ಪರಿಕಲ್ಪನೆಯೆಂಬುದು ಸ್ಪಷ್ಟ.

ವಾಜಪೇಯಿಯವರು ಈ ಮಂಡಳಿಯ ಹಿಂದಿ ಹೆಸರಿನಲ್ಲಿ ಇರುವ 'ಏಕತಾ' ತೆಗೆದು 'ಏಕಾತ್ಮತಾ' ಮಾಡಬೇಕು ಎಂದರೆ, ಅಡ್ವಾಣಿ 'ಧರ್ಮನಿರಪೇಕ್ಷ'ದ ಬದಲು 'ಪಂಥ ನಿರಪೇಕ್ಷ' ಮಾಡಬೇಕೆಂದರು. ಇವೆರಡೂ ಆರ್.ಎಸ್.ಎಸ್.ನ ಸೈದ್ಧಾಂತಿಕ ನೆಲೆಯ ಕೇಂದ್ರ ಕಲ್ಪನೆಗಳು. ಪದಗಳ ಕಸರತ್ತು ಏನೇ ಇರಲಿ, ಅವುಗಳ ಹಿಂದಿರುವ ತರ್ಕವೆಂದರೆ ಭಾರತದಲ್ಲಿನ ಎಲ್ಲಾ ಧಾರ್ಮಿಕ ವೈವಿಧ್ಯತೆಗಳನ್ನು ಹಿಂದೂಧರ್ಮದಲ್ಲಿ ಐಕ್ಯಗೊಳಿಸಬೇಕು ಎಂದು. ಭಾರತದಲ್ಲಿ ಹಿಂದೂ ಧರ್ಮ ಅನುಸರಿಸುವವರ ಸಂಖ್ಯೆಯೇ ದೊಡ್ಡದಿರುವುದರಿಂದ ಇತರ ಧರ್ಮಗಳು ಹಿಂದೂ ಧರ್ಮದ ನೇತೃತ್ವವನ್ನು ಸ್ವೀಕರಿಸಿದರೆ ಮಾತ್ರ ಅಸ್ತಿತ್ವದಲ್ಲಿರಲು ಸಾಧ್ಯ, ಹಿಂದೂ ಧರ್ಮ ಮಾತ್ರವೇ ನಿಜವಾದ 'ಧರ್ಮ', ಉಳಿದವೆಲ್ಲಾ ಕೇವಲ ಪಂಥಗಳು ಎಂಬುದು ಅವರ ಪರಿಕಲ್ಪನೆಗಳು. ಅಂದರೆ ಹಿಂದೂಧರ್ಮ ಮಾತ್ರವೇ ಶ್ರೇಷ್ಠ, ಉಳಿದವೆಲ್ಲಾ ನಿಕೃಷ್ಟ ಎಂದು ಗೋಲ್ವಾಲ್ಕರ್ 1939ರಲ್ಲಿ ನಡುಕ ಬರುವಂತೆ ಹೇಳಿದ್ದನ್ನು ಇವರೀಗ ಮತ್ತೆ ಸೂಚಿಸಿದ್ದಾರೆ.

ಇವು ಮೂಲಭೂತವಾಗಿ ನಮ್ಮ ಗಣತಂತ್ರದ ಸಂವಿಧಾನಕ್ಕೆ ವಿರುದ್ಧವಾದ ನಿಲುವುಗಳು ಎಂದು ಬೇರೆ ಹೇಳಬೇಕಾಗಿಲ್ಲ. ಇವುಗಳಿಂದ ರಾಷ್ಟ್ರೀಯ ಸಮಗ್ರತೆಗೆ ಪ್ರೋತ್ಸಾಹ ಸಿಗುವುದಿಲ್ಲವಷ್ಟೇ ಅಲ್ಲ, ಅದನ್ನು ಇನ್ನಷ್ಟು ಹಾನಿಗೊಳಿಸುತ್ತವೆ. ಆದ್ದರಿಂದ ದೇಶದ ಐಕ್ಯತೆ ಸಮಗ್ರತೆ ಬಯಸುವವರೆಲ್ಲರೂ ಇಂತಹ ಪರಿಕಲ್ಪನೆಗಳನ್ನು ತಿರಸ್ಕರಿಸಬೇಕು.


ಅಂದರೆ ಭಾರತದ ಸಂದರ್ಭದಲ್ಲಿ ಜಾತ್ಯಾತೀತತೆ ಅಥವಾ ಧರ್ಮನಿರಪೇಕ್ಷತೆಯ ಅರ್ಥ ಎಲ್ಲಾ ಧರ್ಮಗಳ ಸಮಾನತೆಯೆಂದಷ್ಟೇ ಕಾಣಬಾರದು ಎಂಬುದನ್ನೂ ಇದು ಸೂಚಿಸುತ್ತದೆ. ಪ್ರಭುತ್ವ ಮತ್ತು ರಾಜಕೀಯದಿಂದ ಧರ್ಮದ ಬೇರ್ಪಡಿಕೆ ಎಂಬುದು ಮುಖ್ಯವಾಗುತ್ತದೆ. ಪ್ರಭುತ್ವ ತನ್ನ ಧರ್ಮವನ್ನು ಅನುಸರಿಸುವ, ಪ್ರಚಾರಪಡಿಸುವ ಪ್ರತಿಯೊಬ್ಬ ನಾಗರೀಕನ ಹಕ್ಕನ್ನು ರಕ್ಷಿಸುತ್ತದೆ. ಆದರೆ ಪ್ರಭುತ್ವ ತಾನಾಗಿಯೇ ಯಾವುದೇ ಧರ್ಮವನ್ನು ಆಚರಿಸುವುದಿಲ್ಲ.

ರಾಷ್ಟ್ರೀಯ ಸಮಗ್ರತಾ ಮಂಡಳಿ ತನ್ನ ಮುಂದಿನ ಸಭೆಗಳಲ್ಲಿ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ತಟ್ಟುವಂತಹ ಇತರ ಆಯಾಮಗಳನ್ನು ಅಂದರೆ ಜಾತಿ ಅಸಮಾನತೆಗಳು ಆರ್ಥಿಕ ಅಸಮಾನತೆಗಳು, ಧಾರ್ಮಿಕ ಅಸಮಾನತೆಗಳು, ಭಾಷಾ ಭೇದಭಾವ ಇತ್ಯಾದಿಗಳನ್ನು ಚರ್ಚಿಸಿ ಸರಕಾರ ಕೈಗೊಳ್ಳಬೇಕಾದ ಸರಿಪಡಿಕೆ ಕ್ರಮಗಳನ್ನು ಸೂಚಿಸುವುದರೊಂದಿಗೆ, ಮೇಲೆ ಹೇಳಿದ ಧರ್ಮನಿರಪೇಕ್ಷತೆಯ ವೈಜ್ಞಾನಿಕ ಪರಿಕಲ್ಪನೆಯನ್ನು ಜನಜನಿತಗೊಳಿಸುವಂತೆ ಮಾಡಲು ಸಾಧ್ಯವಾದರೆ ಅದು ಆಧುನಿಕ ಭಾರತೀಯ ಗಣತಂತ್ರಕ್ಕೆ ಒಂದು ದೊಡ್ಡ ಸೇವೆ ಆಗುತ್ತದೆ.

**ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಮತ್ತೊಮ್ಮೆ ವಿದ್ಯುತ್ ದರ ಏರಿಕೆಗೆ ಹವಣಿಸಿವೆ. ತಪ್ಪು ಲೆಕ್ಕ - ತಪ್ಪು ವಾದ ಮಾಡುತ್ತಾ ಜನವಿರೋಧಿ ದಾರಿ ಹಿಡಿದಿವೆ. ಅಗ್ಗದ ಜಲ ವಿದ್ಯುತ್ ಬಗೆಗೆ ಅಲರ್ಜಿ ಬೆಳೆಸಿಕೊಂಡಿರುವ ಸರ್ಕಾರ ಮತ್ತು ವಿದ್ಯುತ್ ಕಂಪನಿಗಳು ದುಬಾರಿ ಖಾಸಗಿ ವಿದ್ಯುತ್‌ನಿಂದ 'ಮಧುರ ಕಂಪನ' ದೊರೆಯುತ್ತದೆಯೋ ಎಂಬಂತೆ ಅದರತ್ತಲೇ ತುಡಿಯುತ್ತಿವೆ. ರೈತರಿಗೆ ಜನಸಾಮಾನ್ಯರಿಗೆ 'ವಿದ್ಯುದಾಲಿಂಗನ'ದಂತೆ ಅಪಾಯಕಾರಿಯಾದ ಈ ಖಾಸಗೀಕರಣದ ಹುನ್ನಾರಗಳನ್ನು ಸಿಪಿಐ(ಎಂ) ಪಕ್ಷ ಮತ್ತು ಕರ್ನಾಟಕ ಪ್ರಾಂತ ರೈತ ಸಂಘಗಳ ಪರವಾಗಿ ಕಾಂ. ಜಿ.ಎನ್.ನಾಗರಾಜ್ ಮತ್ತು ಕಾಂ. ಜಿ.ಸಿ.ಬಯ್ಯಾರೆಡ್ಡಿಯವರು ಕೆಇಆರ್‌ಸಿ ಯ 'ಆಕ್ಷೇಪಣಾ ವಿಚಾರಣೆ'ಯಲ್ಲಿ ಮಂಡಿಸಿರುವ ಸಮರ್ಥ ವಾದದ ಸಾರವನ್ನು ಇಲ್ಲಿ ನೀಡಲಾಗಿದೆ.**

# ವಿದ್ಯುತ್ ದರ ಏರಿಕೆ ಹುನ್ನಾರಗಳು

ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿ (ಎಸ್ಕಾಂ)ಗಳು ವಿದ್ಯುತ್ ದರ ಏರಿಕೆಗೆ ಅವಕಾಶವನ್ನು ಕೋರಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ ಅರ್ಜಿ ಸಲ್ಲಿಸಿವೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) 11.4 ಶೇ. ವಿದ್ಯುತ್ ದರ ಏರಿಕೆಗೆ ಉದ್ದೇಶಿಸಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿದರೆ ವಿದ್ಯುತ್ ನಷ್ಟದ ನಿಖರತೆ ಗುರುತಿಸಬಹುದೆಂಬ ನೆಪದಲ್ಲಿ ರೈತರ ಪಂಪ್‌ಸೆಟ್‌ಗಳ ಮೀಟರೀಕರಣವನ್ನು ಒತ್ತಾಯಿಸಲಾಗುತ್ತಿದೆ. ವಿದ್ಯುತ್ ದರ ಪರಿಷ್ಕರಣೆಯ ಸಂಬಂಧ 'ಆಕ್ಷೇಪಗಳ ವಿಚಾರಣೆ'ಯಲ್ಲಿ ಸಿಪಿಐ(ಎಂ) ಪಕ್ಷ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ (ಕೆ.ಪಿ.ಆರ್.ಎಸ್.) ರಾಜ್ಯ ಸಮಿತಿಗಳು ಲಿಖಿತ ಆಕ್ಷೇಪಗಳೊಂದಿಗೆ ಮಂಡಿಸಿರುವ ವಿಚಾರಗಳು ವಿದ್ಯುತ್ ದರ ಏರಿಕೆಯ ಹಿಂದಿನ ಹುನ್ನಾರಗಳನ್ನು ಬಯಲು ಮಾಡಿವೆ.



ರಾಜ್ಯಾದ್ಯಂತ ಧೋ ಎಂದು ಸುರಿದಿರುವ ಮಳೆಗೆ ಜಲಾಶಯಗಳೆಲ್ಲಾ ತುಂಬಿ ತುಳುಕುತ್ತಿವೆ. ಸಾಕಷ್ಟು ಹಾನಿ ಆಸ್ತಿ ಪಾಸ್ತಿ ನಷ್ಟವಾಗಿದೆ. ಆದರೆ ಜಲಾಶಯಗಳೆಲ್ಲಾ ಭರ್ತಿಗೊಂಡ ಫಲಶೃತಿಯಾಗಿ ವಿದ್ಯುತ್ ಪೂರೈಕೆ, ವಿದ್ಯುತ್ ಗುಣಮಟ್ಟವಾದರೂ ಸುಧಾರಿಸಬಹುದು, ಜಲ ವಿದ್ಯುತ್ ಉತ್ಪಾದನೆಯ ಹೆಚ್ಚಳದಿಂದಾಗಿ ಜನರ ಮೇಲೆ ನಿರಂತರವಾಗಿ ತೂಗು ಕತ್ತಿಯಂತೆ ಕಾಣುತ್ತಿರುವ ವಿದ್ಯುತ್ ದರ ಏರಿಕೆಯಿಂದ ಕೊಂಚ ವಿರಾಮ ದೊರೆಯಬಹುದೆಂದು ಜನತೆ ನಿರೀಕ್ಷಿಸಿದ್ದಾರೆ.

ಆದರೆ ಜಾಗತೀಕರಣ ಖಾಸಗೀಕರಣ ಉದಾರೀಕರಣಗಳ ನೀತಿಗಳಿಗೆ ನಮ್ಮನ್ನು ಒಪ್ಪಿಸಿಕೊಂಡಿರುವ ಸರ್ಕಾರಗಳು ವಿದ್ಯುತ್ ಸಂಸ್ಥೆಗಳು ಜನರ ಆಕಾಂಕ್ಷೆ-ನಿರೀಕ್ಷೆಗಳಿಗೆ ಯಾಕಾದರೂ ಬೆಲೆ ಕೊಟ್ಟಾವು. ಅವುಗಳದ್ದು ಈಗ ಅದೇ ರಾಗ, ಅದೇ ಹಾಡು. ವಿದ್ಯುತ್ ದರ ಪರಿಷ್ಕರಣೆಯಾಗಬೇಕು (ಅಂದರೆ ಹೆಚ್ಚಿಸಬೇಕು) ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಬೇಕು, ಅಷ್ಟೆ. ಕೃಷಿ ಬಿಕ್ಕಟ್ಟು, ಬಡವರ ಬವಣೆ, ಸಾಮಾಜಿಕ ನ್ಯಾಯಗಳನ್ನು ಕಟ್ಟಿಕೊಂಡು ಅವರಿಗೇನಾಗಬೇಕಿದೆ? ವಿದ್ಯುತ್ ಒಂದು ಶಕ್ತಿ-ಸರಕು. ಅದರ ನಿರ್ದಯ ಮಾರಾಟಕ್ಕೆ ಅವಕಾಶಬೇಕು. ಅದರ ಸಾಮಾಜಿಕ ಪರಿಣಾಮ ಯಾರಿಗೆ ಬೇಕು ?

1917ರಲ್ಲಿ ರಷ್ಯಾದಲ್ಲಿ ಜರುಗಿದ ಐತಿಹಾಸಿಕ ಸಮಾಜವಾದಿ ಕ್ರಾಂತಿಯ ನಂತರ ಕ್ರಾಂತಿಯ ನೇತಾರ ಲೆನಿನ್ ಸಮಾಜದ ಆಧುನೀಕರಣ ಎಂದರೆ ವಿದ್ಯುದೀಕರಣ ಎಂದಿದ್ದರು. ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಏನೆಲ್ಲಾ ಒಂಬತ್ತು ಯೋಜನೆಗಳಿದ್ದಾಗಲೂ ದಶಕಗಳ ನಂತರವೂ ಇಂದಿಗೂ ನಮ್ಮ ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳ ಶೇ.58 ಮನೆಗಳಿಗೆ ವಿದ್ಯುತ್ ಬೆಳಕಿನ ಕಿರಣಗಳು ತಲುಪಲಿಲ್ಲ. ಗ್ರಾಮಾಂತರ ಪ್ರದೇಶಗಳ ಶೇ 80 ರಷ್ಟು ಮನೆಗಳಿಗೆ ವಿದ್ಯುತ್ ತಲುಪದ ರಾಜ್ಯಗಳೂ ದೇಶದಲ್ಲಿವೆ. ಇಂತಹ ಸಾಮಾಜಿಕ ವಾಸ್ತವವನ್ನಾಧರಿಸಿದ ಸಿಪಿಐ(ಎಂ) ಮತ್ತು ಪ್ರಾಂತ ರೈತ ಸಂಘದ ರಾಜ್ಯಸಮಿತಿಗಳ ವಾದಗಳು ವಿದ್ಯುತ್ ಸಂಸ್ಥೆಗಳ ತಪ್ಪು ವಾದ, ಸುಳ್ಳು ಅಂಕಿ ಸಂಖ್ಯೆ, ಸಮಾಜ ವಿರೋಧಿ ಚಿಂತನೆಗಳನ್ನು ಅನಾವರಣಗೊಳಿಸಿದವು.

**ವಿದ್ಯುತ್ ನಷ್ಟ : ಬೆಸ್ಕಾಂ ಇಷ್ಟ** : 2005-06ರ ಸಾಲಿನಲ್ಲಿ ವಿದ್ಯುತ್ ನಷ್ಟದ ಪ್ರಮಾಣವನ್ನು ಶೇ. 21.41ಕ್ಕೆ ನಿಗದಿಗೊಳಿಸಬೇಕೆಂದು ಬೆಸ್ಕಾಂ ಕೆಇಆರ್‌ಸಿಯನ್ನು ಕೇಳಿದೆ. ಬೆಸ್ಕಾಂನ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಶೆ. 37.12 ರಷ್ಟು, ನಗರ-ಪಟ್ಟಣಗಳಲ್ಲಿ ಶೇ. 3.09ರಷ್ಟು ವಿದ್ಯುತ್ ನಷ್ಟವಾಗುತ್ತಿದೆಯೆಂಬುದು ಬೆಸ್ಕಾಂನ ಅಂಕಿ ಸಂಖ್ಯೆ.

ತಮಿಳು ನಾಡಿನಲ್ಲಿ ದಿನಕ್ಕೆ 14 ಗಂಟೆ ಪಂಪ್‌ಸೆಟ್‌ಗೆ ವಿದ್ಯುತ್ ನೀಡಿದರೂ ಅಲ್ಲಿ ಪ್ರತಿ ಗಂಟೆಗೆ ಖರ್ಚಾಗುವ ವಿದ್ಯುತ್ 394 ಯೂನಿಟ್. ಆದರೆ ಪಂಪ್‌ಸೆಟ್‌ಗಳಿಗೆ ಕೇವಲ 8 ಗಂಟೆ ವಿದ್ಯುತ್ ನೀಡಿ, ಪ್ರತಿಗಂಟೆಗೆ 755 ಯೂನಿಟ್ ವಿದ್ಯುತ್ ನಷ್ಟ ಲೆಕ್ಕ ತೋರಿಸುತ್ತಿರುವ ಬೆಸ್ಕಾಂ ವಾದ ಅವೈಜ್ಞಾನಿಕ ಎಂದು ಆಕ್ಷೇಪಣಾ ಪತ್ರ ಎತ್ತಿ ತೋರಿಸಿದೆ. ಇದರಲ್ಲಿ ಲೆಕ್ಕಾಚಾರದ ತಪ್ಪಿನ ಜೊತೆಗೆ ಹೈಟೆನ್ಷನ್ ಮಾರ್ಗದ ವಿದ್ಯುತ್ ಸೋರಿಕೆಯನ್ನು (ವಿಶೇಷವಾಗಿ ನಗರದ ದೊಡ್ಡ ಜನಗಳ ವಿದ್ಯುತ್ ಕಳ್ಳತನಗಳನ್ನು) ತಡೆಯಲಾರದ ಬೆಸ್ಕಾಂ ಅದನ್ನು ಗ್ರಾಮೀಣ ರೈತರ ಮೇಲೆ ಹೊರಿಸುವ ತಂತ್ರಗಾರಿಕೆ ನಡೆಸಿರುವುದನ್ನು ಸಂಘಟನೆಗಳು ವಿರೋಧಿಸಿವೆ. ವಿಭಾಗವಾರು, ಲೈನ್‌ವಾರು ವಿದ್ಯುತ್ ನಷ್ಟದ ವಿವರ ನೀಡಲು ಆಗ್ರಹಿಸಿರುವ ಸಂಘಟನೆಗಳು ಯಾವುದೇ ಕಾರಣಕ್ಕೂ ವಿದ್ಯುತ್ ನಷ್ಟವನ್ನು ಶೇ. 21. 41ಕ್ಕೆ ನಿಗದಿಗೊಳಿಸಲು ಅವಕಾಶ ನೀಡಬಾರದೆಂದು ಒತ್ತಾಯಿಸಿವೆ.

ತಾಂತ್ರಿಕ ಮತ್ತು ವಾಣಿಜ್ಯ ವಿದ್ಯುತ್ ನಷ್ಟವನ್ನು ತಪ್ಪಿಸಲು 2005-06ರ ಸಾಲಿಗೆ 98.50 ಕೋಟಿ ರೂ. ಹಣವನ್ನು ಬೆಸ್ಕಾಂ ಕೇಳಿದೆ. ಇದೇ ಕಾರಣಕ್ಕಾಗಿ ಕಳೆದ 5 ವರ್ಷಗಳಲ್ಲಿ ಮಾಡಲಾಗಿರುವ ಖರ್ಚು ಮತ್ತು ಅದರ ಫಲಿತಾಂಶದ ಬಗೆಗೆ ತಜ್ಞರ ಸಮಿತಿಯಿಂದ ಪರಿಶೀಲನೆ ನಡೆಸಬೇಕೆಂದು ಸಂಘಟನೆಗಳು ಒತ್ತಾಯಿಸಿವೆ.

**ಖಾಸಗಿ ವಿದ್ಯುತ್ತಿನ 'ಮಧುರ ಕಂಪನ'**

ನಮ್ಮ ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ಜಲವಿದ್ಯುತ್ ಯೋಜನೆಗಳ ಮೂಲಕ ಇನ್ನೂ 4000 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದಿಸಲು ಅವಕಾಶವಿದೆಯೆಂದು ವೈಜ್ಞಾನಿಕವಾಗಿ ಅಂದಾಜು ಮಾಡಲಾಗಿದೆ. ಆದರೆ ಅತ್ಯಂತ ಅಗ್ಗದ ದರದಲ್ಲಿ ತಯಾರಾಗುವ ಈ ಜಲ ವಿದ್ಯುತ್ ಬಗೆಗೆ ಅದೇಕೋ ವಿದ್ಯುತ್ ಸಂಸ್ಥೆಗಳಿಗೆ ಅಲರ್ಜಿ. ಸ್ವತಂತ್ರ(ಖಾಸಗಿ) ವಿದ್ಯುತ್ ಉತ್ಪಾದಕರಿಂದ ದುಬಾರಿ ದರದ ವಿದ್ಯುತ್ ಖರೀದಿಸುವುದರಲ್ಲೇ ಸರ್ಕಾರಕ್ಕೂ ಎಸ್ಕಾಂಗಳಿಗೂ ಆಸಕ್ತಿ. ಇವರ ಕೈಗಳಿಗೆ ಖಾಸಗಿ ಕಂಪನಿಗಳ ವಿದ್ಯುತ್ ತಾಗಿದರೂ ಶಾಕ್ ಹೊಡೆಯುವುದಿಲ್ಲವೇನೋ! ಇವರ ಮೈಯಲ್ಲಿ ಈ ವಿದ್ಯುತ್ 'ಮಧುರ ಕಂಪನ'ಗಳನ್ನೇ ಮೂಡಿಸಬಹುದೇನೊ !! ಆದರೆ ರೈತರು ಕಾರ್ಮಿಕರು ಕೂಲಿಕಾರರೂ ಬಡವರ ಪಾಲಿಗಂತೂ ಈ ವಿದ್ಯುತ್ ಪ್ರಾಣ ಘಾತುಕ ಎಂಬುದು ಸ್ಪಷ್ಟವಾಗಿದೆ. 2000-2001 ರಲ್ಲಿ 10,663 ದಶಲಕ್ಷ ಯೂನಿಟ್ ಜಲ ವಿದ್ಯುತ್ ಉತ್ಪಾದನೆ ಆಗಿದ್ದರೆ, 2002-2003 ರಲ್ಲಿ ಇದು 6835 ಯೂನಿಟ್‌ಗೆ ಇಳಿದಿದೆ. ಹೀಗಿದೆ ನಮ್ಮ ಸರ್ಕಾರಗಳ ಖಾಸಗಿ ವಿದ್ಯುತ್ ವ್ಯಾಮೋಹ.

ಉಡುಪಿ ಜಿಲ್ಲೆಯ ನಾಗಾರ್ಜುನ ಥರ್ಮಲ್ ಪವರ್ ಕಂಪನಿ ಸೇರಿದಂತೆ ಎಲ್ಲಾ ಖಾಸಗಿ ಕಂಪನಿಗಳ ಜೊತೆಗಿನ ಒಪ್ಪಂದಗಳ ಕುರಿತಂತೆ ವಿದ್ಯುತ್ ಕಾಯ್ದೆ-2003ರ ಪ್ರಕಾರ ರಾಜ್ಯ ಕೆ.ಇ.ಆರ್.ಸಿ. ಮುಂದೆ ವಿಚಾರಣೆ ನಡೆಯಬೇಕೆಂದು ಸಂಘಟನೆಗಳು ಒತ್ತಾಯಿಸಿವೆ.

**ವಿದ್ಯುತ್ ಬೇಡಿಕೆ : ಬೆಸ್ಕಾಂ ತಪ್ಪು ಲೆಕ್ಕ**

ಬೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ 2004ರಲ್ಲಿ 4,84,405 ಪಂಪ್‌ಸೆಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದವೆಂದೂ 2005ರಲ್ಲಿ 4,99,405 ಪಂಪ್‌ಸೆಟ್ ಕಾರ್ಯ ನಿರ್ವಹಿಸುತ್ತಿವೆ ಎಂದೂ, ಈ ಸಂಖ್ಯೆ 2006ರಲ್ಲಿ 5,39,843ಕ್ಕೆ ಏರಲಿದೆ ಎಂದೂ ಬೆಸ್ಕಾಂ ಲೆಕ್ಕಾಚಾರ ಮಂಡಿಸಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳಲ್ಲಿ ನೀರಿಲ್ಲದಂತಾಗಿರುವುದರಿಂದ 5,000 ದಷ್ಟು ಪಂಪ್‌ಸೆಟ್‌ಗಳು ಬಳಕೆಯಾಗುತ್ತಿಲ್ಲ ಎಂದು ಅಂದಾಜಿಸಲಾಗಿದೆ. ಕೋಲಾರ ಬೆಂಗಳೂರು ಜಿಲ್ಲೆಗಳಲ್ಲಿ 500 ರಿಂದ 1000 ಅಡಿಗಳವರೆಗೂ ತೋಡಿದರೂ ನೀರಿಲ್ಲದೇ ನಿಷ್ಪ್ರಯೋಜಕವಾಗಿರುವ ಬಾವಿಗಳದೆಷ್ಟೋ! ನೀರು ಸಿಕ್ಕಿದರೂ ಕೆಲ ದಿನಗಳಲ್ಲಿ ನೀರು ಖಾಲಿಯಾಗುವ ಬಾವಿಗಳದೆಷ್ಟೋ. ಈ ಬಗ್ಗೆ ಸರಿಯಾದ ಸಮೀಕ್ಷೆ ಆಗಬೇಕಾದ ಅಗತ್ಯವಿದೆ. ಆದರೆ ಬೆಸ್ಕಾಂ ಹೆಚ್ಚು ವಿದ್ಯುತ್ ಅಗತ್ಯವೆಂದೂ

ಪುಟ 8 ಕ್ಕೆ

## ಎಸ್ಕಾಂವಾರು ವಿಭಿನ್ನ ವಿದ್ಯುತ್ ದರಗಳು !!!

ರಾಜ್ಯದಲ್ಲಿ ಒಟ್ಟಾರೆ ಪ್ರದೇಶವಾರು 5 ಎಸ್ಕಾಂಗಳಿರುವುದರಿಂದ ರಾಜ್ಯವ್ಯಾಪಿ ವಿದ್ಯುತ್ ದರ ಒಂದೇ ಇದ್ದರೆ, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯುತ್ ಕಂಪನಿ (ಎಸ್ಕಾಂ) ಕೆಟ್ಟದಾಗಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯುತ್ ಕಂಪನಿಯ ನಷ್ಟದ ಹೊರೆಯನ್ನು ಹೊರಬೇಕಾಗುತ್ತದೆ ಎಂಬ ವಾದದ ಆಧಾರದಲ್ಲಿ ಪ್ರತಿ ಎಸ್ಕಾಂಗಳಿಗೂ ಭಿನ್ನ ಭಿನ್ನ ಸ್ವರೂಪದಲ್ಲಿ ವಿದ್ಯುತ್ ದರ ನಿಗದಿ ಮಾಡಬೇಕೆಂಬ ಪ್ರಸ್ತಾಪವು ಕರ್ನಾಟಕ ವಿದ್ಯುತ್ ನಿಯಂತ್ರಣ ಮಂಡಳಿಯ ಮುಂದಿದೆ. ಇಂಥ ಒಂದು ಆಲೋಚನೆಯೇ ಅತ್ಯಂತ ದೋಷಪೂರಿತ ಮತ್ತು ಸಂಪೂರ್ಣ ಅವೈಜ್ಞಾನಿಕ ಎಂದು ಸಿಪಿಐ(ಎಂ) ಪಕ್ಷ ಮತ್ತು ಕರ್ನಾಟಕ ಪ್ರಾಂತ ರೈತ ಸಂಘಗಳು ತಾವು ಮಂಡಿಸಿರುವ ಆಕ್ಷೇಪಣಾ ಪತ್ರದಲ್ಲಿ ನಿರೂಪಿಸಿವೆ.

ವಿದ್ಯುತ್ ಸಂಸ್ಥೆಗಳ ಈ ಪ್ರಸ್ತಾಪ ಜಾರಿಯಾದರೆ ಗೆಸ್ಕಾಂ(ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ)ನ ವಿದ್ಯುತ್ ದರಗಳು ಶೇ.34 ರಷ್ಟು ಏರಲಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಈ ಏರಿಕೆ ಶೇ. 2.57 ಆಗಿರುತ್ತದೆ. (ಹೆಸ್ಕಾಂ ವ್ಯಾಪ್ತಿ ಶೇ. 59.60, ಮೆಸ್ಕಾಂ ವ್ಯಾಪ್ತಿ ಶೇ. 5.36) ಒಂದು ವಿದ್ಯುತ್ ಸಂಸ್ಥೆಯ ಸಾಧನೆ- ಅದು ನಷ್ಟದಲ್ಲಿ ನಡೆಯುತ್ತಿದೆಯೇ ಲಾಭದಲ್ಲಿ ನಡೆಯುತ್ತಿದೆಯೇ ಎಂಬ ವಿಚಾರವು ಬಹುತೇಕ ಎಸ್ಕಾಂಗಳ ಆಂತರಿಕ ವಿಚಾರಗಳನ್ನು ಅವಲಂಬಿಸಿಲ್ಲ.

ನಿರ್ದಿಷ್ಟ ಪ್ರದೇಶದಲ್ಲಿನ ನಿಸರ್ಗ- ಕೈಗಾರಿಕಾ ಬೆಳವಣಿಗೆ-ಕೈಗಾರಿಕೆಗಳ ಸ್ವರೂಪ-ಆ ನಿರ್ದಿಷ್ಟ ವ್ಯಾಪ್ತಿಯ ವಾಣಿಜ್ಯಾಭಿವೃದ್ಧಿ-ಜನರ ಖರೀದಿಸುವ ಶಕ್ತಿ - ಆ ಪ್ರದೇಶದ ಕೈಗಾರಿಕೆಗಳು ಎದುರಿಸುತ್ತಿರುವ ಬಿಕ್ಕಟ್ಟುಗಳು, ಇತ್ಯಾದಿ ಹಲವಾರು ವಿಚಾರಗಳ ಆಧಾರದಲ್ಲಿ ಈ ಪ್ರಶ್ನೆಯು ನಿರ್ಧರಿತವಾಗಿದೆ. ಈ ಯಾವ ಅಂಶಗಳೂ ಸಹ ಯಾವುದೇ ಎಸ್ಕಾಂಗಳ ನಿಯಂತ್ರಣದಲ್ಲಿಲ್ಲ. ಬದಲಿಗೆ ಅವು ಹಲವು ಐತಿಹಾಸಿಕ ಅಂಶಗಳನ್ನು ಹಾಗೂ ಸರ್ಕಾರದ ನೀತಿಗಳನ್ನು ಅವಲಂಬಿಸಿವೆ.

ಬೆಂಗಳೂರು ಜಿಲ್ಲೆಯಲ್ಲಿ ರಾಜ್ಯದ ಸರಿಸುಮಾರು ಅರ್ಧದಷ್ಟು ಕೈಗಾರಿಕೆಗಳು ಸ್ಥಾಪನೆಗೊಂಡಿವೆ. ಮಾಹಿತಿ ತಂತ್ರಜ್ಞಾನದ ಬೆಳವಣಿಗೆ ಆಗಿ ಬೆಂಗಳೂರನ್ನು 'ಸಿಲಿಕಾನ್ ವ್ಯಾಲಿ' ಎಂದು ಕರೆಯಲಾಗುತ್ತಿದೆ. ಇದರಲ್ಲಿ ಬೆಸ್ಕಾಂನ ಹಿರಿಮೆ ಏನಿದೆ? ಬಹುತೇಕ ಏನೂ ಇಲ್ಲ. ಗೆಸ್ಕಾಂ ವ್ಯಾಪ್ತಿಯಲ್ಲಿ ಗ್ರಾಮೀಣ ವಿದ್ಯುದೀಕರಣವೇ ಹಿಂದಿದೆ. ಅಲ್ಲಿನ ಪರಿಶಿಷ್ಟ ಜಾತಿ-ಪಂಗಡದ ಜನರ ಬಹುತೇಕ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ. ಇದಕ್ಕಾಗಿ ಗೆಸ್ಕಾಂ ಅನ್ನು ದೂರಬಹುದೇ? ಹಲವು ದಶಕಗಳ ಹಿಂದೆ ಆರಂಭಗೊಂಡು ಇಂದಿಗೂ ಮುಂದುವರಿಯುತ್ತಿರುವ ಐತಿಹಾಸಿಕ ಪ್ರಕ್ರಿಯೆಗಳು ಇದಕ್ಕೆ ಕಾರಣವಾಗಿದೆ.

ಭಿನ್ನ ಭಿನ್ನ ವಾದ ವಿದ್ಯುತ್ ದರಗಳನ್ನು ನಿಗದಿ ಪಡಿಸುವುದು ಸಾಧ್ಯ. ಆದರೆ ಅದರಿಂದಾಗಿ ಹಿಂದುಳಿದ ಪ್ರದೇಶಗಳಿಗೆ ಇತರರಿಗಿಂತ ಹೆಚ್ಚು ರಿಯಾಯಿತಿ ದೊರೆಯುವಂತಾಗಬೇಕು.

ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮತ್ತಷ್ಟು ವಿದ್ಯುತ್ ದರ ಏರಿಸಿ, ಭಿನ್ನ ದರ ನೀತಿ ಜಾರಿಗೆ ತಂದರೆ ಅದರ ಪರಿಣಾಮ ಅತ್ಯಂತ ಅಪಾಯಕಾರಿಯಾಗಲಿದೆ. ಅದನ್ನು ಒಪ್ಪಲು ಸಾಧ್ಯವಿಲ್ಲ. ಹಿಂದುಳಿದ ಪ್ರದೇಶಗಳಿಗೆ, ಸಮಾಜದ ದುರ್ಬಲ ವಿಭಾಗಗಳಾದ ಪರಿಶಿಷ್ಟ ಜಾತಿ ಪಂಗಡದ ಜನರಿಗೆ ವಿಶೇಷ ಸಹಾಯಧನ ನೀಡುವ ನಿಟ್ಟಿನಲ್ಲಿ ಭಿನ್ನ ವಿದ್ಯುತ್ ದರ ಜಾರಿಗೆ ತರುವುದಾದರೆ ಅದು ಸ್ವಾಗತಾರ್ಹ ಎಂದು ಸಂಘಟನೆಗಳು ತಮ್ಮ ವೈಜ್ಞಾನಿಕ ವಿಚಾರ ಸರಣಿಯನ್ನು ಮಂಡಿಸಿವೆ. ○

# ಜೆಸಿಟಿಯು

# ವಿಶಾಲ ಭಾಗವಹಿಸುವಿಕೆಯ ಯಶಸ್ವಿ ಸಮಾವೇಶ

**ಸೆಪ್ಟೆಂಬರ್ 29 ರ ಅಖಿಲ ಭಾರತ ಸಾರ್ವಜನಿಕ ಮುಷ್ಕರದ ಮಹತ್ವ- ಬೇಡಿಕೆಗಳು - ಸಿದ್ಧತೆಗಳ ಬಗೆಗೆ ಪತ್ರಿಕೆಯಲ್ಲಿ ಈಗಾಗಲೇ ಓದಿದ್ದೀರಿ. ಇದೇ ಹಿನ್ನೆಲೆಯಲ್ಲಿ ಆಗಸ್ಟ್ 25 ರಂದು ಬೆಂಗಳೂರಿನಲ್ಲಿ ನಡೆದ ಜೆಸಿಟಿಯು ರಾಜ್ಯ ಸಮಾವೇಶವು ಅದರಲ್ಲಿ ಕಂಡುಬಂದ ಉತ್ಸಾಹ, ವಿಶಾಲ ಪಾಲ್ಗೊಳ್ಳುವಿಕೆಯ ಕಾರಣಕ್ಕಾಗಿ ಎಲ್ಲರ ಗಮನ ಸೆಳೆದಿದೆ. ಆ ಕುರಿತ ವರದಿ ಇಲ್ಲಿದೆ.**

ಕಾರ್ಮಿಕ ಸಂಘಗಳ ಜಂಟಿ ಸಮಿತಿ (ಜೆಸಿಟಿಯು)ಯ ಕರ್ನಾಟಕ ರಾಜ್ಯ ಸಮಾವೇಶವು ಆಗಸ್ಟ್ 25, 2005ರಂದು ಬೆಂಗಳೂರಿನಲ್ಲಿ ಪುರಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಈ ಸಮಾವೇಶದಲ್ಲಿ ಎಐಟಿಯುಸಿ, ಸಿಐಟಿಯು, ಟಿಯುಸಿಸಿ, ಹೆಚ್‌ಎಂಎಸ್, ಯುಟಿಯುಸಿ(ಎಲ್‌ಎಸ್), ವಿಮಾ ನೌಕರರ ಸಂಘಟನೆಗಳು, ಕೇಂದ್ರ- ರಾಜ್ಯ ಸರ್ಕಾರಿ ನೌಕರರ ಸಂಘಟನೆಗಳು, ಬ್ಯಾಂಕ್, ಜೆಎಎಫ್ ಹಾಗೂ ಇನ್ನಿತರ ಹಲವಾರು ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಅಖಿಲ ಭಾರತ ಸಿಐಟಿಯುವಿನ ಅಧ್ಯಕ್ಷರಾದ ಕಾಂ. ಎಂ.ಕೆ.ಪಂಧೆಯವರು ಹಾಗೂ ಎಐಟಿಯುಸಿನ ಕಾಂ.ಮಹದೇವನ್ ರವರು ಉಪಸ್ಥಿತರಿದ್ದದ್ದು ವಿಶೇಷವಾಗಿತ್ತು.

ಈ ಸಮಾವೇಶದ ಸಂಚಾಲಕ ಮಂಡಳಿಯ ಪರವಾಗಿ ಕಾಂ.ವರಲಕ್ಷ್ಮಿ ಸ್ವಾಗತ ಭಾಷಣ ಮಾಡಿದರು. ಎಐಟಿಯುಸಿಯ ದೀಪಕ್‌ರವರು ಜಾಗತೀಕರಣ, ಉದಾರೀಕರಣದ ದುಷ್ಪರಿಣಾಮಗಳನ್ನು ವಿವರಿಸುತ್ತಾ ಸೆಪ್ಟೆಂಬರ್ 29ರ ಸಾರ್ವತ್ರಿಕ ಮುಷ್ಕರಕ್ಕೆ ತಯಾರಿ ನಡೆಸುವ ನಿಟ್ಟಿನಲ್ಲಿ ಚರ್ಚೆಯಾಗಬೇಕೆಂದು ಹೇಳಿದರು.

ಸಮಾವೇಶದ ಪ್ರಾಸ್ತಾವಿಕ ಭಾಷಣ ಮಾಡಿದ ಸಿಐಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್‌ರವರು ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಬೇಡಿಕೆಗಳ ವಿವರಣೆ ನೀಡುತ್ತಾ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಬಣ್ಣಿಸಿದರು. ಯುಪಿಎ ಸರ್ಕಾರ 'ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ವನ್ನು ಅನುಸರಿಸದೆ ಅಡ್ಡ ಮಾರ್ಗ ಹಿಡಿಯುತ್ತಿದೆ ಎಂದು ಹೇಳಿದರು. ಲಾಭದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಬಂಡವಾಳ ಹಿಂಪಡೆಯುವ ಕೇಂದ್ರ ಸರ್ಕಾರದ ನಿಲುವನ್ನು ಖಂಡಿಸುತ್ತಾ ಈ ಉದ್ದಿಮೆಗಳು ಕೇವಲ ಲಾಭಗಳಿಸಲಿಕ್ಕಾಗೇ ಅಲ್ಲದೆ ಸಾಮಾಜಿಕ ಜವಾಬ್ದಾರಿಯನ್ನೂ ಹೊಂದಿವೆ ಹಾಗೂ ಹಿಂಪಡೆಯಲು ಯೋಜಿಸಿರುವ ಬಂಡವಾಳದ ಮೊತ್ತವು ಒಂದೆರಡು ವರ್ಷಗಳಲ್ಲೇ ಡಿವಿಡೆಂಡ್ ರೂಪದಲ್ಲಿ ಸರ್ಕಾರದ ಕೈಸೇರಲಿದೆ ಎಂದು ಹೇಳಿದರು. ರಕ್ಷಣಾ ಕ್ಷೇತ್ರದಲ್ಲಿ ಖಾಸಗಿಯವರ ಸಹಭಾಗಿತ್ವವು ದೇಶದ ಸುರಕ್ಷತಾ ದೃಷ್ಟಿಯಿಂದ ಒಳ್ಳೆಯದಲ್ಲವೆಂದೂ ಹೇಳಿದರು. ಕೋಲಾರದ ಚಿನ್ನದ ಗಣಿ ಕಂಪನಿಯನ್ನು ಪುನಶ್ಚೇತನಗೊಳಿಸುವ ಬದಲಾಗಿ ಅದನ್ನು ಸರ್ಕಾರವು ಮಾರಲು ಮುಂದಾಗಿರುವುದು ಶೋಚನೀಯವೆಂದು ಬಣ್ಣಿಸಿದರು.

ಸೆಪ್ಟೆಂಬರ್ 29ರ ಮುಷ್ಕರಕ್ಕೆ ಪೂರ್ವಭಾವಿ ಸಿದ್ಧತೆಯಾಗಿ ಎಲ್ಲಾ ಸಂಘಟನೆಗಳು ದ್ವಾರಸಭೆಗಳನ್ನು ನಡೆಸಬೇಕೆಂದೂ ಹಾಗೂ ಸೆಪ್ಟೆಂಬರ್ 15ಕ್ಕೆ ಮುಷ್ಕರದ ನೋಟೀಸನ್ನು ಜಾರಿ ಮಾಡಬೇಕೆಂದು ಅವರು ಕರೆ ನೀಡಿದರು.

ನಂತರ ಅಖಿಲ ಭಾರತ ಸಿಐಟಿಯುವಿನ ಅಧ್ಯಕ್ಷರಾದ ಕಾಂ. ಎಂ.ಕೆ.ಪಂಧೆಯವರು ಸಮಾವೇಶಕ್ಕೆ ಶುಭ ಹಾರೈಸುತ್ತಾ ದೇಶದ ಪ್ರಸಕ್ತ ಪರಿಸ್ಥಿತಿಯನ್ನು ವಿವರಿಸಿದರು. ಸರ್ಕಾರದ ಬಿಡಿಗಾಸೂ ಇಲ್ಲದ ಪಿ.ಎಫ್. ಸಂಸ್ಥೆಯು ನೀಡುವ ಬಡ್ಡಿದರವನ್ನು ಕಡಿತಗೊಳಿಸುವ ಬಗ್ಗೆ ಅವರು ತೀವ್ರ ಕಳವಳ ವ್ಯಕ್ತಪಡಿಸಿದರು. 6ನೇ ವೇತನ ಆಯೋಗವನ್ನು ರಚಿಸುವುದನ್ನು ಸರ್ಕಾರವು ನಿರಾಕರಿಸಿದೆಯೆಂದೂ ಅವರು ಹೇಳಿದರು. ಎ1 ನಗರಗಳಾದ ಬೆಂಗಳೂರು ಮತ್ತು ಹೈದರಾಬಾದಿನ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಶೇ.30ರ ಮನೆ ಬಾಡಿಗೆ ಭತ್ಯೆ (ಹೆಚ್‌ಆರ್‌ಎ) ನಿರಾಕರಿಸಿರುವ ಕೇಂದ್ರ ಸರ್ಕಾರದ ನಿಲುವನ್ನು ಹಿಮ್ಮೆಟ್ಟಿಸಲು ಈ ಎರಡೂ ನಗರಗಳ ಕಾರ್ಮಿಕರ ಐಕ್ಯ ಹೋರಾಟದಿಂದ ಮಾತ್ರ ಸಾಧ್ಯವೆಂದೂ ಅವರು ಹೇಳಿದರು. ಲಾಭದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ ಕೂಡದು ಹಾಗೂ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಮರಳಿಬಾರದ ಸಾಲ(ಎನ್‌ಪಿಎ)ವನ್ನು ಕಡಿಮೆ ಮಾಡಲು ಈ ಕೂಡಲೇ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದೂ ಹೇಳಿದರು. ಖಾಸಗೀ ವಲಯದ ಉದ್ದಿಮೆಗಳಿಗೆ ತೆರಿಗೆಯ ಬಾಕಿಯನ್ನು ಹಾಗೂ ಬ್ಯಾಂಕ್ ಸಾಲವನ್ನು ಪಾವತಿಸಲು ದುಡ್ಡಿನ ಕೊರತೆಯಿದೆ. ಆದರೆ ಅದೇ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕೊಳ್ಳಲು ಅವರ ಬಳಿ ಸಾಕಷ್ಟು ಹಣವಿರುವುದು ಸೋಜಿಗದ ಸಂಗತಿಯೆಂದು ಅವರು ಬಣ್ಣಿಸಿದರು. ವಿದೇಶೀ ನೇರ ಬಂಡವಾಳದ ಹೂಡಿಕೆಯು ಪ್ರಮುಖವಾಗಿ ಆಹಾರದ ಸಂಸ್ಕರಣಾ



ಸಮಾವೇಶದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು

ವಿಭಾಗದಲ್ಲಿ ಮಾತ್ರವೇ ಆಗಿದ್ದು ಬಹುತೇಕ ಉಳಿದ ಎಲ್ಲಾ ಬಂಡವಾಳವು ಷೇರು ಮಾರುಕಟ್ಟೆಗೆ ಪ್ರವೇಶಿಸಿದೆಯೇ ವಿನಃ ಯಾವುದೇ ಉತ್ಪಾದನೆಯಲ್ಲೂ ತೊಡಗಿಲ್ಲವೆಂಬುದನ್ನು ಗಮನಿಸಬೇಕೆಂದು, ವಿದೇಶೀ ನೇರ ಬಂಡವಾಳದಿಂದ ಯಾವುದೇ ಹೊಸ ಕಂಪನಿಯೂ ಪ್ರಾರಂಭವಾಗದೇ ಹಾಲಿ ಇರುವ ಕಂಪನಿಗಳನ್ನೇ ಕೊಂಡು ಲಾಭ ಮಾಡಲಾಗುತ್ತಿದೆ ಎಂದೂ ತಿಳಿಸಿದರು. ಇದುವರೆವಿಗೂ ಯಾವುದೇ ದೇಶದಲ್ಲೂ ನಡೆಯದ ವಿಮಾನ ನಿಲ್ದಾಣಗಳ ಹಾಗೂ ಬಂದರುಗಳ ಖಾಸಗೀಕರಣವು ನಮ್ಮ ದೇಶದಲ್ಲೂ ಕೂಡದೆಂದು ಹೇಳಿದರು. ಜಗತ್ತಿನ ಅತಿ ದೊಡ್ಡ ಬಂಡವಾಳಶಾಹಿ ದೇಶವಾದ ಭಾರತದಲ್ಲಿ ಉದ್ಯೋಗಿಗಳ ಶೇ.12ರಷ್ಟು ಮಾತ್ರವೇ ಕಾರ್ಮಿಕ ಸಂಘಗಳಲ್ಲಿ ಸದಸ್ಯತ್ವವನ್ನು ಹೊಂದಿರುವುದು ತೀವ್ರ ಕಳವಳಕಾರಿಯಾದ ಅಂಶವೆಂದು ಬಣ್ಣಿಸಿದರು.

ಸೆಪ್ಟೆಂಬರ್ 29ರ ಈ ಮುಷ್ಕರವು ಸರ್ಕಾರಕ್ಕೆ ಒಂದು ಬಲವಾದ ಸಂದೇಶವನ್ನು ಮುಟ್ಟಿಸುತ್ತದೆ. ಆದ್ದರಿಂದ ಅದನ್ನು ಯಶಸ್ವಿಗೊಳಿಸಿ ಎಂದು ಅವರು ಕರೆ ನೀಡಿದರು.

ನಂತರ ಅಖಿಲಭಾರತ ಎಐಟಿಯುಸಿಯ ಕಾಂ.ಮಹದೇವನ್‌ರವರು ಮಾತನಾಡಿ ಪ್ರಪಂಚದ ಮೂವರು 'ಅದ್ಭುತ ಡಾಕ್ಟರ್'ಗಳಾದ ವಿಶ್ವಬ್ಯಾಂಕ್, ಐಎಂಎಫ್ ಹಾಗೂ ಡಬ್ಲ್ಯೂಟಿಓಗಳು ನೀಡಿದ ಔಷಧಿಯಿಂದಾಗಿ ದೇಶದ ಖಾಯಿಲೆ ಮತ್ತಷ್ಟು ಉಲ್ಬಣಗೊಂಡಿದೆಯೆಂದು ಹೇಳಿದರು. ಬಿಹೆಚ್‌ಇಎಲ್‌ನಲ್ಲಿ ಬಂಡವಾಳ ಹಿಂತೆಗೆತ ಕೂಡದು ಹಾಗೂ ದೇಶದೆಲ್ಲೆಡೆ ಕಾಂಟ್ರಾಕ್ಟ್ ಪದ್ಧತಿಯು ಒಂದು ಹೊಸ ಪಿಡುಗಾಗಿದ್ದು ಇದನ್ನು ಹೊಡೆದೋಡಿಸಲು ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ಹೇಳಿದರು. ಸೆಪ್ಟೆಂಬರ್ 29ರ ಮುಷ್ಕರವನ್ನು ಯಶಸ್ವಿಯಾಗಿಸಲು ಎಲ್ಲಾ ಸಂಘಟನೆಗಳೂ ಶಕ್ತಿ ಮೀರಿ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಎಐಟಿಯುಸಿಯ ಎಸ್.ನಾಗರಾಜ್‌ರವರು ಮಾತನಾಡಿ ಸೆಪ್ಟೆಂಬರ್ 29ರ ಮುಷ್ಕರದಲ್ಲಿ ಕೆಎಸ್‌ಆರ್‌ಟಿಸಿ ಕಾರ್ಮಿಕರು ಬೃಹತ್ ರೀತಿಯಲ್ಲಿ ಭಾಗವಹಿಸಿ ಮುಷ್ಕರವನ್ನು ಸಂಪೂರ್ಣ ಯಶಸ್ವಿಯಾಗಿಸುವರೆಂಬ ಆಶ್ವಾಸನೆಯನ್ನು ನೀಡಿದರು.

ನಂತರ ಸಿಐಟಿಯುವಿನ ಹೆಚ್.ಎನ್.ದೇವರಾಜು ಮಾತನಾಡಿ 'ಹಾರ್ನಳ್ಳಿ ರಾಮಸ್ವಾಮಿ ವರದಿ'ಯಲ್ಲಿನ ಕಾರ್ಮಿಕ ವಿರೋಧಿ ಸುಧಾರಣೆಗಳನ್ನು ವಿರೋಧಿಸಬೇಕೆಂದು ಹೇಳಿದರು ಹಾಗೂ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕುರಿತಾದ 'ಪದ್ಮನಾಭನ್ ಸಮಿತಿ'ಯ ಶಿಫಾರಸ್ಸುಗಳನ್ನು ಸಹ ವಿರೋಧಿಸಬೇಕೆಂದು ಹೇಳಿದರು.

ಟಿಯುಸಿಸಿಯ ಜಿ.ಆರ್.ಶಿವಶಂಕರ್ ರವರು ಮಾತನಾಡಿ ಬಹುರಾಷ್ಟ್ರೀಯ ಕಂಪನಿಗಳ ಸಂಕೋಲೆಯಿಂದ ನಾವು ಬಿಡುಗಡೆಯಾಗಬೇಕಾಗಿದೆ. ಇದಕ್ಕಾಗಿ ಸೆಪ್ಟೆಂಬರ್ 29ರ ಮುಷ್ಕರದ ಮೂಲಕ ಬಹುರಾಷ್ಟ್ರೀಯ ಕಂಪನಿಗಳಿಗೆ ಎಚ್ಚರಿಕೆಯನ್ನು ಕೊಡಬೇಕಾಗಿದೆ ಎಂದು ಹೇಳಿದರು.

ಯುಟಿಯುಸಿಯ ರಾಧಾಕೃಷ್ಣನ್‌ರವರು ಮಾತನಾಡಿ ಎನ್‌ಡಿಎ ಸರ್ಕಾರ ಅನುಸರಿಸಿದ ಕಾರ್ಮಿಕ ವಿರೋಧಿ ನೀತಿಯನ್ನೇ ಯುಪಿಎ ಸರ್ಕಾರವೂ ಅನುಸರಿಸುತ್ತಿದೆ. ನಮ್ಮ ವೈರಿಗಳು ಬಲಿಷ್ಠವಾಗಿರುವಾಗ ನಾವುಗಳು (ಕಾರ್ಮಿಕರು) ಬಲಿಷ್ಠವಾದ ಹೋರಾಟವನ್ನೇ ಮಾಡಬೇಕಾಗಿದೆ ಎಂದು ಹೇಳಿದರು.

ವಿಮಾ ನೌಕರರ ಪರವಾಗಿ ಮಾತನಾಡಿದ ಕಾಂ.ಜೆ.ಸುರೇಶ್‌ರವರು ವಿಮಾ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ದೇಶಿಯ ಕಂಪನಿಗಳಿಗಿಂತ ಕಡಿಮೆ ಪಾಲಿಸಿಗಳನ್ನು ಇತ್ಯರ್ಥ ಮಾಡುತ್ತಿರುವುದು ಅವರ ಕಾರ್ಯಕ್ಷಮತೆಗೆ ಹಿಡಿದ ಕನ್ನಡಿಯಾಗಿದೆಯೆಂದು ಬಣ್ಣಿಸಿದರು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಕೂಡದು ಏಕೆಂದರೆ, ಖಾಸಗೀ ಹಾಗೂ ಸಾರ್ವಜನಿಕ ಉದ್ದಿಮೆಗಳ ಗುರಿಯು ಒಂದೇ ಆಗಿರುವುದಿಲ್ಲ. ಸಾರ್ವಜನಿಕ ಉದ್ದಿಮೆಗಳು ಸಾಮಾಜಿಕ ಕಾಳಜಿಯನ್ನು ಹೊಂದಿದ್ದು ಬರೇ ಲಾಭ ಮಾಡುವ ಉದ್ದೇಶವನ್ನು ಹೊಂದದೆ ಉದ್ಯೋಗ ಸೃಷ್ಟಿಯಲ್ಲಿ ಪಾಲ್ಗೊಳ್ಳುತ್ತವೆ. ಆದರೆ, ಖಾಸಗೀ ಕಂಪನಿಗಳು ಕೇವಲ ಲಾಭ ಮಾಡುವ ಗುರಿಯನ್ನು ಮಾತ್ರವೇ ಹೊಂದಿರುತ್ತವೆ ಎಂದು ಹೇಳಿದರು.

ಬಿಇಎಫ್‌ಐನ ಶ್ರೀನಿವಾಸ ಬಾಬುರವರು ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಸಗೀಕರಣ ಕೂಡದು ಏಕೆಂದರೆ, ನಾವು ಈಗಾಗಲೇ ನೋಡಿರುವಂತೆ ಜಿಟಿಬಿಯಂತಹ ಖಾಸಗೀ ಬ್ಯಾಂಕ್‌ಗಳು ನೆಲಕಚ್ಚಿದ್ದು, ಕೇವಲ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಂದಾಗಿಯೇ (ಅಂತಹ ಬ್ಯಾಂಕ್‌ಗಳನ್ನು ವಿಲೀನಗೊಳಿಸಿಕೊಳ್ಳುವ ಶಕ್ತಿಯಿರುವುದರಿಂದ) ಠೇವಣಿದಾರರ ಹಿತಾಸಕ್ತಿ ಕಾಪಾಡಲು ಸಾಧ್ಯವಾಗಿದೆ ಎಂದರು.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ನಾಯಕರಾದ ಯು.ಡಿ.ನರಸಿಂಹಯ್ಯನವರು ಇದೊಂದು ಚಾರಿತ್ರಿಕ ಸಮಾವೇಶ ಎಂದರು. ರಾಜ್ಯ ಸರ್ಕಾರಿ ನೌಕರರು ಕೂಡಾ ಅಭದ್ರತೆಯನ್ನು ಕಾಣುತ್ತಿದ್ದಾರೆ. ಎಸ್.ಎಂ.ಕೃಷ್ಣರವರು ಅನುಸರಿಸಿದ ಜನವಿರೋಧಿ ನೀತಿಯನ್ನೇ ಧರ್ಮಸಿಂಗ್‌ರವರು ಅನುಸರಿಸುತ್ತಿರುವುದು ನಿಜಕ್ಕೂ ಶೋಚನೀಯ. ಸೆಪ್ಟೆಂಬರ್ 29ರ ಮುಷ್ಕರದಲ್ಲಿ ರಾಜ್ಯ ಸರ್ಕಾರಿ ನೌಕರರು ಸಂಪೂರ್ಣವಾಗಿ ಭಾಗವಹಿಸುವರು ಎಂದು ಅವರು ಭರವಸೆ ನೀಡಿದರು.

ಎನ್‌ಎಫ್‌ಪಿಇಯ ಸೀತಾಲಕ್ಷ್ಮಿಯವರು ಮಾತನಾಡಿ ಉದ್ಯೋಗಗಳಲ್ಲಿ ಕಡಿತ ಮಾಡಲಾಗುತ್ತಿದೆ ಹಾಗೂ ಸಾಕಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿಲ್ಲವೆಂದು ಹೇಳಿದರು.

ಎಐಬಿಇಎದ ರಾಮಕೃಷ್ಣರೆಡ್ಡಿಯವರು ಮಾತನಾಡಿ ನಿರುದ್ಯೋಗವು ಏರುಗತಿಯಲ್ಲಿದ್ದು 'ಎನ್‌ಪಿಎ' ಬೆಳೆಯುತ್ತಿರುವುದರ ವಿರುದ್ಧ ಹಾಗೂ ಅದು ಬೆಳೆಯುತ್ತಿರುವುದಕ್ಕೆ ಕಾರಣವಾಗಿರುವ ಅಂಶಗಳ ವಿರುದ್ಧ ತುರ್ತು ಹೋರಾಟದ ಅಗತ್ಯದ ಬಗ್ಗೆ ವಿವರಿಸಿದರು.

ಸಿಐಟಿಯುನ ಅಂಗನವಾಡಿ ಮತ್ತು ಅಕ್ಷರ ದಾಸೋಹ ನೌಕರರ ಸಂಘಟನೆಯ ಯಮುನಾರವರು ಮಾತನಾಡಿ 30 ವರ್ಷಗಳಿಂದಲೂ ಅಂಗನವಾಡಿಯಲ್ಲಿ ಕೇವಲ ಗೌರವಧನಕ್ಕಾಗಿ ದುಡಿಯುತ್ತಿರುವ ದೊಡ್ಡಸಂಖ್ಯೆಯ ಕಾರ್ಮಿಕರಿದ್ದು ಅವರಿಗೆ ಖಾಯಂ ಉದ್ಯೋಗವನ್ನು ಗಳಿಸಿಕೊಡಬೇಕಾದ ತುರ್ತು ಅಗತ್ಯವಿದೆ ಎಂದರು. ಸೆಪ್ಟೆಂಬರ್ 29ರ ಮುಷ್ಕರದಲ್ಲಿ ಅಂಗನವಾಡಿ ಮತ್ತು ಅಕ್ಷರ ದಾಸೋಹದ ಕಾರ್ಮಿಕರು ರಾಜ್ಯಾದ್ಯಂತ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಲಿದ್ದು

ಪುಟ 8ಕ್ಕೆ

# ಗ್ರಾಮೀಣ ಬಡ ವಿದ್ಯಾರ್ಥಿಗಳ ಬದುಕು ಬೀದಿಪಾಲು

## ವೃತ್ತಿಶಿಕ್ಷಣ(ಜೆಓಸಿ) ಕೋರ್ಸುಗಳನ್ನು ಮುಚ್ಚಲು ಸರ್ಕಾರದ ಹುನ್ನಾರ

ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಬಡ ಗ್ರಾಮೀಣ ವಿದ್ಯಾರ್ಥಿಗಳು ತಮ್ಮ ಬಡ ಕುಟುಂಬದ ನಿರ್ವಹಣೆಯ ಆಧಾರಕ್ಕಾಗಿ ಹಾಗೂ ತುರ್ತು ಉದ್ಯೋಗದ ಅಗತ್ಯಕ್ಕಾಗಿ ಸಾವಿರಾರು ಸಂಖ್ಯೆಯಲ್ಲಿ ವೃತ್ತಿಶಿಕ್ಷಣ (ಜೆ.ಒ.ಸಿ) ಕೋರ್ಸುಗಳಿಗೆ ಸೇರುತ್ತಿದ್ದಾರೆ. ರಾಜ್ಯದ ಗ್ರಾಮೀಣ ಜನತೆಯ ಆರ್ಥಿಕತೆಯ ಆಧಾರದಲ್ಲಿ ಉದ್ಯೋಗ ಕಲ್ಪಿಸುವ ಉದ್ದೇಶದೊಂದಿಗೆ ಆರಂಭಗೊಂಡಿದ್ದ ವೃತ್ತಿಶಿಕ್ಷಣ ನಿರ್ದೇಶನಾಲಯವನ್ನು ರಾಜ್ಯ ಸರ್ಕಾರ ಮುಚ್ಚುವ ಹುನ್ನಾರಕ್ಕಿಳಿದಿದೆ. ಶಿಕ್ಷಣ ವ್ಯಾಪಾರೀಕರಣಗೊಳಿಸಿ ಶಿಕ್ಷಣ ಶುಲ್ಕ ಏರಿಸಲಾಗಿದೆ. ಇಂಜಿನಿಯರಿಂಗ್ ವೈದ್ಯಕೀಯ ಅಥವಾ ಇನ್ನಿತರ ವೃತ್ತಿಪರ ಕೋರ್ಸುಗಳಿಗೆ ಸೇರಲಾಗದಿದ್ದ ಬಹುತೇಕ ಗ್ರಾಮೀಣ ಬಡ ವಿದ್ಯಾರ್ಥಿಗಳು ಪದವಿ ಪೂರ್ವ ಕಾಲೇಜುಗಳ ಜೊತೆಯಲ್ಲಿಯೇ ಇರುವ ವೃತ್ತಿಶಿಕ್ಷಣ (ಜೆ.ಒ.ಸಿ) ಕೋರ್ಸುಗಳಿಗೆ ಅವಲಂಭಿತರಾಗಿದ್ದರು. ರಾಜ್ಯ ಸರ್ಕಾರ ವೃತ್ತಿಪರ ಶಿಕ್ಷಣ ನಿರ್ದೇಶನಾಲಯಕ್ಕೆ (Directorate of Vacational Education) ಅಗತ್ಯವಾದ ರೀತಿಯಲ್ಲಿ ಹಣ ಒದಗಿಸದೆ, ಕಾಲೇಜುಗಳಿಗೆ ಮೂಲಭೂತ ಸೌಕರ್ಯ ಒದಗಿಸದೆ ಅತ್ಯಂತ ದುಸ್ಥಿತಿಯಲ್ಲಿ ಜೆಒಸಿ ಕೋರ್ಸಿನ ಕಾಲೇಜುಗಳು ನಡೆಯುತ್ತಿದ್ದವು. ಇತ್ತೀಚಿನ ದಿನಗಳಲ್ಲಂತೂ ಪರಿಸ್ಥಿತಿ ಉಲ್ಬಣಗೊಂಡಿದೆ. ಕನಿಷ್ಠ ಸೌಲಭ್ಯಗಳೂ ಇಲ್ಲದೆ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. 18-20 ವರ್ಷಗಳಿಂದ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದವರನ್ನು ಖಾಯಂ ಮಾಡಿಕೊಳ್ಳದೆ-ಸರಿಯಾಗಿ ಸಂಬಳ ನೀಡದೆ ಉಪನ್ಯಾಸಕರೂ ಕೂಡ ಸಂಕಷ್ಟಪಡುವ ಪರಿಸ್ಥಿತಿಗೆ ರಾಜ್ಯ ಸರ್ಕಾರ ತಳ್ಳಿದೆ. ರಾಜ್ಯದಲ್ಲಿರುವ ಜಿಲ್ಲೆಗಳಲ್ಲಿ ಲಭ್ಯವಾಗುವ ಸಂಪನ್ಮೂಲಗಳ ಆಧಾರದಲ್ಲಿ ಕೋರ್ಸುಗಳನ್ನು ಆರಂಭಿಸಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಬದಲು ತಾತ್ಕಾಲಿಕವಾಗಿ ಸಣ್ಣ ಸಣ್ಣ ಖಾಸಗಿ ಶಿಕ್ಷಣ ಸಂಸ್ಥೆಗಳು ಗಣಕಯಂತ್ರದ ತರಬೇತಿ ನೀಡುವಂತಹ 3,6,8 ತಿಂಗಳುಗಳ ಕೋರ್ಸುಗಳನ್ನು ಆರಂಭಿಸಿ ವಿದ್ಯಾರ್ಥಿಗಳೇ ಶುಲ್ಕ ಭರಿಸುವಂತಹ ವ್ಯವಸ್ಥೆಯನ್ನು ಹೊಸದಾಗಿ ಜಾರಿಗೊಳಿಸಲು ರಾಜ್ಯ ಸರ್ಕಾರ ಹೊರಟಿದೆ. ಕನಿಷ್ಠ ರಾಜ್ಯದ ಸಾಮಾಜಿಕ, ಆರ್ಥಿಕ ವಾಸ್ತವಗಳ ಬಗ್ಗೆ ಮಾಹಿತಿ ಇಲ್ಲದೆ ಅಸಡ್ಡೆಯಾಗಿ ಇಂಥ ಅತ್ಯಲ್ಪ ಕೋರ್ಸುಗಳನ್ನು ಜಾರಿಗೆ ತಂದು ಸಮಗ್ರವಾಗಿ ರಾಜ್ಯ ಅಭಿವೃದ್ಧಿಗೆ ಪೂರಕವಾದ ಕೋರ್ಸುಗಳನ್ನು ರದ್ದು ಮಾಡಲು ಹೊರಟಿರುವುದು ಗ್ರಾಮೀಣ ಜನತೆಯನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುತ್ತಿದೆ. ಇಂಥ ಗ್ರಾಮೀಣ ಬಡ ಜನತೆಯ ವಿದ್ಯಾರ್ಥಿಗಳ ವಿರೋಧಿ ನೀತಿಯನ್ನು ಖಂಡಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕರ್ನಾಟಕ ರಾಜ್ಯಸಮಿತಿ ನೇತೃತ್ವದಲ್ಲಿ ರಾಜ್ಯ ಮಟ್ಟದ ಜೆ.ಒ.ಸಿ ವಿದ್ಯಾರ್ಥಿಗಳ ಪ್ರತಿಭಟನಾ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಮೀಣ ಜನತೆಯ ಬೆನ್ನೆಲುಬಾದ ಗ್ರಾಮೀಣ ಆರ್ಥಿಕತೆಯ ಬೆಳವಣಿಗೆ ಬೆನ್ನೆಲುಬಾದ ವೃತ್ತಿಶಿಕ್ಷಣ (ಜೆಒಸಿ) ಕೋರ್ಸುಗಳನ್ನು ಮುಚ್ಚಬಾರದು. ಸರ್ಕಾರಿ ವೃತ್ತಿಶಿಕ್ಷಣ (ಜೆಒಸಿ) ಕೋರ್ಸುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಶುಲ್ಕ ಏರಿಕೆ ಹಿಂತೆಗೆದುಕೊಳ್ಳಬೇಕು. ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಬೇಕು.

ಜೆಒಸಿ ಕೋರ್ಸುಗಳನ್ನು ಮುಗಿಸಿದ ವಿದ್ಯಾರ್ಥಿಗಳಿಗೆ ಮುಂದಿನ ವ್ಯಾಸಂಗಕ್ಕೆ ಸೂಕ್ತ ಅವಕಾಶ ಮಾಡಿಕೊಡಬೇಕು. ವಿವಿಧ ಜಿಲ್ಲೆಗಳ ಆರ್ಥಿಕ ಸಂಪನ್ಮೂಲಗಳ ಆಧಾರದಲ್ಲಿ ಉದ್ಯೋಗ ದೊರೆಯುವಂತಹ ಕೋರ್ಸುಗಳನ್ನು ಆರಂಭಿಸಬೇಕೆಂಬ ಬೇಡಿಕೆಗಳ ಆಧಾರದಲ್ಲಿ ದಿನಾಂಕ 14.9.2005 ಬುಧವಾರ ಬೆಂಗಳೂರು ನಗರದಲ್ಲಿ ಬೃಹತ್ ಜೆಒಸಿ ವಿದ್ಯಾರ್ಥಿಗಳ ಹೋರಾಟ ನಡೆಯಲಿದೆ. ಗ್ರಾಮೀಣ ಬಡ ವಿದ್ಯಾರ್ಥಿಗಳ ಹೋರಾಟವನ್ನು ಬೆಂಬಲಿಸಬೇಕೆಂದು ಎಸ್‌ಎಫ್‌ಐ ಮನವಿ ಮಾಡಿದೆ. ಜೊತೆಗೆ ರಾಜ್ಯ ಸರ್ಕಾರ ತಕ್ಷಣ ಈ ಬಗ್ಗೆ ಎಚ್ಚರಿಕೆ ವಹಿಸಿ ಸಮಸ್ಯೆ ಬಗೆಹರಿಸಲು ಮುಂದಾಗಬೇಕೆಂದು ಎಸ್‌ಎಫ್‌ಐ ಆಗ್ರಹಿಸಿದೆ.

# ವಿದ್ಯುತ್ ದರ ಏರಿಕೆ ಹುನ್ನಾರಗಳು....

ಪುಟ 6 ರಿಂದ

ತೋರಿಸುತ್ತಾ, ಪಂಪ್‌ಸೆಟ್‌ಗೆ ಸಹಾಯಧನ ನೀಡಲಾಗುತ್ತಿರುವುದರಿಂದ ತನಗೆ ಅಪಾರ ನಷ್ಟವಾಗುತ್ತಿದೆ ಎಂದು ಸಾಧಿಸಲು ಪ್ರಯತ್ನಿಸುತ್ತಿದೆ. ಮತ್ತು ಈ ಹೆಚ್ಚುವರಿ ವಿದ್ಯುತ್ ಒದಗಿಸಲು 284.26 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಅನುಮತಿ ಕೋರುತ್ತಿದೆ.

**ಗೃಹ ಬಳಕೆ ವಿದ್ಯುತ್**
**ಸಾಮಾಜಿಕ ಆಯಾಮ**

ಕೃಷಿ ಬಿಕ್ಕಟ್ಟು, ಕೈಗಾರಿಕಾ ಬಿಕ್ಕಟ್ಟು, ಆರ್ಥಿಕ ಸಂಕಷ್ಟ, ಅಗತ್ಯ ವಸ್ತುಗಳ ಬೆಲೆ ಏರಿಕೆಗಳಿಂದ ತತ್ತರಿಸಿರುವ ಬಡವರು ಮಧ್ಯಮ ವರ್ಗದ ಜನರ ಗೃಹ ಬಳಕೆ ವಿದ್ಯುತ್ ದರದಲ್ಲಿ ಯಾವುದೇ ಏರಿಕೆ ಮಾಡಬಾರದು. ವಿದ್ಯುತ್ ಬಳಕೆಯಲ್ಲಿ 31ರಿಂದ 100 ಯುನಿಟ್‌ವರೆಗೆ ಯಾವುದೆ ಏರಿಕೆಯಾಗಬಾರದೆಂದೂ ಸಂಘಟನೆಗಳು ಆಗ್ರಹಿಸಿವೆ.

ಉಲ್ಬಣಗೊಂಡಿರುವ ನಮ್ಮ ಸಮಾಜದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕೂಲಿಕಾರರಿಗೆ ವರ್ಷದಲ್ಲಿ 60, 70 ದಿನಗಳವರೆಗೆ ಮಾತ್ರವೇ ಕೂಲಿ ದೊರೆಯುವಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜನ ಚಳುವಳಿಗಳ ಒತ್ತಡದಿಂದ ಭಾಗ್ಯಜ್ಯೋತಿ-ಕುಟೀರ ಜ್ಯೋತಿ ಫಲಾನುಭವಿಗಳಿಗೆ ಉಚಿತ ವಿದ್ಯುತ್ ನೀಡಲು ಮತ್ತು ಹಳೆ ಬಾಕಿ ಮನ್ನಾ ಮಾಡಲು ನಿರ್ಧರಿಸಿರುವ ಸರ್ಕಾರದ ಕ್ರಮದ ಬಗ್ಗೆ ಕೆ.ಇ.ಆರ್.ಸಿ. ಆಕ್ಷೇಪಣೆ ಎತ್ತಬಾರದು ಮತ್ತು ಎಲ್ಲಾ ಅರ್ಹರಿಗೆ ಯೋಜನೆಯನ್ನು ವಿಸ್ತರಿಸಬೇಕೆಂದೂ ಮಕ್ಕಳ ಶಿಕ್ಷಣ ಇತ್ಯಾದಿ ಅಗತ್ಯಗಳನ್ನು ಗಮನಿಸಿ ಎರಡು ದೀಪ ಉರಿಸಲು ಅಗತ್ಯವಾದ ಕನಿಷ್ಟ 36 ಯೂನಿಟ್ ವಿದ್ಯುತ್ ನೀಡಬೇಕೆಂದು ಒತ್ತಾಯಿಸಲಾಗಿದೆ.

**ನೀರಾವರಿ ಪಂಪ್‌ಸೆಟ್‌ಗಳ ದರ :**

ಬಳಕೆದಾರ ರೈತರ ಪಾವತಿ ಸಾಮರ್ಥ್ಯವನ್ನು ಪರಿಗಣಿಸದೆ ಬೆಸ್ಕಾಂ ರೈತರ ವರ್ಗೀಕರಣ ನಡೆಸಿದೆ. ಅದನ್ನು ಒಪ್ಪಲಾಗದು, ವೈಜ್ಞಾನಿಕ ಮರು ವರ್ಗೀಕರಣವಾಗಬೇಕು. ಅಲ್ಲಿವರೆಗೆ ಅಶ್ವಶಕ್ತಿಯೊಂದಕ್ಕೆ 300 ರೂಪಾಯಿಗಿಂತಲೂ ಹೆಚ್ಚು ಹಣ ನಿಗದಿ ಮಾಡಬಾರದು. ಈ ಸಂಬಂಧ ಕೇಂದ್ರ ಸರ್ಕಾರದ ಇಂಧನ ಇಲಾಖೆಯ ವಿಶೇಷ ಕಾರ್ಯದರ್ಶಿಗಳು ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬಹುದೆಂದು ತಿಳಿಸಿರುವುದನ್ನು ಪರಿಗಣಿಸಬೇಕು ಎಂದು ಸಂಘಟನೆಗಳು ಒತ್ತಾಯಿಸಿವೆ. ಇದೇ ಹಿನ್ನೆಲೆಯಲ್ಲಿ ಎಲ್.ಟಿ.4(ಬಿ) ಪ್ರವರ್ಗಕ್ಕೆ ಸೇರಿದ ರೈತರಿಗೆ ಅಶ್ವಶಕ್ತಿಯೊಂದಕ್ಕೆ ದರವನ್ನು 125 ರೂ.ನಿಂದ 300 ರೂ.ಗೆ ಏರಿಸುವ ಸೂಚನೆಯನ್ನು ವಾಪಸ್ ಪಡೆಯಬೇಕೆಂದೂ ಸಂಘಟನೆಗಳು ಆಗ್ರಹಿಸಿವೆ. ಅದೇ ರೀತಿಯಲ್ಲಿ ರಾಜ್ಯದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಶೇ. 66. 34 ರಷ್ಟು ಕಾಫಿ ಉತ್ಪಾದಿಸುವವರು 10 ಹೆಕ್ಟೇರ್‌ಗಿಂತ ಕಡಿಮೆ ಭೂಮಿಯುಳ್ಳ ಸಣ್ಣ ಹಿಡುವಳಿಗಾರರು. ಇದನ್ನು ಗಮನದಲ್ಲಿಟ್ಟುಕೊಂಡು ಮತ್ತು ಕಾಫಿ ಬೆಳೆಗಾರರು ನೀರಿನ ಕೊರತೆಯಾದಾಗ ಮಾತ್ರ ಪಂಪ್‌ಸೆಟ್ ಬಳಕೆ ಮಾಡುತ್ತಾರೆಂಬುದನ್ನು ಗಮನಕ್ಕೆ ತೆಗೆದುಕೊಂಡು ದರ ನಿಗದಿಪಡಿಸಬೇಕೆಂದು ಸಂಘಟನೆಗಳು ವಾದಿಸಿವೆ.

**ವಿದ್ಯುತ್ ಗುಣಮಟ್ಟ ಹೆಚ್ಚಬೇಕು**

ಅದೇ ರೀತಿಯಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ದಿನ ಕನಿಷ್ಠ 12 ಗಂಟೆ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ಹಗಲು ಹೊತ್ತಿನಲ್ಲಿ ನೀಡಬೇಕೆಂದೂ, ಕಡಿಮೆ ವೋಲ್ಟೇಜ್‌ನಿಂದಾಗಿ ಟಿ.ಸಿ.ಗಳು ಸುಟ್ಟು ಹೋದಾಗ ತತ್‌ಕ್ಷಣ ರಿಪೇರಿ ಮಾಡಬೇಕು ಹಾಗೂ ಅದರಿಂದಾಗುವ ನಷ್ಟವನ್ನು ತುಂಬಿಕೊಡಬೇಕೆಂದೂ ಒತ್ತಾಯಿಸಲಾಗಿದೆ.

**ಖಾಸಗೀಕರಣದ ಹುನ್ನಾರಗಳ ಅನಾವರಣ**

ವಿದ್ಯುತ್ ನಷ್ಟವನ್ನು ಅಳತೆ ಮಾಡಲು ಸಾರ್ವತ್ರಿಕ ಮೀಟರೀಕರಣ ಅನಿವಾರ್ಯವೇನು ಅಲ್ಲ ಎಂದು ಹಿಂದಿನ ಬೆಸ್ಕಾಂನ (ಇ.ಆರ್.ಸಿ.) ಒಪ್ಪಿತ್ತು. ಆದರೂ ಈಗ ಅದೇ ವಾದ ಮುಂದಿಟ್ಟು, ರೈತರ ಪಂಪ್‌ಸೆಟ್‌ಗಳ ಮೀಟರೀಕರಣಕ್ಕಾಗಿ ಒತ್ತಾಯಿಸಲಾಗುತ್ತಿದೆ. ವಿದ್ಯುತ್ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಹುನ್ನಾರಗಳಿಗೆ ಇದು ಒಂದು ಪೂರಕ ತಯಾರಿ, ರೈತರ-ಬಡವರ ವಿದ್ಯುತ್ ಸಬ್ಸಿಡಿ ಕಡಿತ ಮಾಡಬೇಕೆನ್ನುವುದೂ ಸಹ ಇದೇ ಹಿನ್ನೆಲೆಯಲ್ಲಿ ಎಂಬುದನ್ನು ಆಕ್ಷೇಪಣಾ ಪತ್ರ ಸಮರ್ಥವಾಗಿ ಅನಾವರಣ ಮಾಡಿದೆ. ವಿದ್ಯುತ್ ಖಾಸಗೀಕರಣ ಎಂಬುದು ಜನತೆಗೆ ವಿದ್ಯುದಾಲಿಂಗನದಂತೆ ಅಪಾಯಕಾರಿ ಎಂದೂ ಸಾರಿದೆ.

ರೈತರ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಬೇಕು. ದಂಡನಾ ಕ್ರಮಗಳು ರದ್ದಾಗಬೇಕು. ಹೊಸ ದುಬಾರಿ ಶುಲ್ಕವನ್ನು ಕಡಿತಗೊಳಿಸಬೇಕು. ಹೊಸ ಸಂಪರ್ಕಗಳಿಗೆ ಹಾಕಲಾಗುವ ಷರತ್ತುಗಳನ್ನು ಸರಳಗೊಳಿಸಬೇಕು, ಠೇವಣಿ ಹಣವನ್ನು ಕಡಿಮೆ ಮಾಡಬೇಕು, ತಂತಿ, ಕಂಬ ಇತ್ಯಾದಿ ವೆಚ್ಚವನ್ನು ನಿಗಮವೇ ವಹಿಸಿಕೊಳ್ಳಬೇಕು, ಎಂದೂ ಪತ್ರವು ಆಗ್ರಹಿಸಿದೆ.

ವಿದ್ಯುತ್ ಕೇವಲ ಮಾರಾಟದ ವಸ್ತುವಲ್ಲ. ಅಸಮಾನತೆಗಳೇ ತುಂಬಿರುವ ನಮ್ಮ ಸಮಾಜದಲ್ಲಿ ಸಾಮಾಜಿಕ ನ್ಯಾಯ ನೀಡುವ, ಅಸಮಾನ ಬೆಳವಣಿಗೆ ನಿವಾರಿಸಿ ಅಭಿವೃದ್ಧಿ ಸಾಧಿಸಲು ಉಪಯೋಗವಾಗುವ ಒಂದು ಸಾಧನ. ಆದ್ದರಿಂದ ವಿದ್ಯುತ್‌ನ ಖಾಸಗೀಕರಣ ದುಬಾರೀಕರಣಗಳು ಸಲ್ಲದು ಎಂದೂ ಪತ್ರ ಒತ್ತಾಯಿಸಿದೆ.

○

# ಜೆಸಿಟಿಯು - ಯಶಸ್ವಿ ಸಮಾವೇಶ

ಪುಟ 7 ರಿಂದ

ಜೆಸಿಟಿಯುವಿನ ಬೇರಾವುದೇ ಸಂಸ್ಥೆಗಳು ಇಲ್ಲದಿರುವ ಪ್ರದೇಶಗಳಲ್ಲಿ ಜೆಸಿಟಿಯುವನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ಹೊರುತ್ತೇವೆಂದು ಆಶ್ವಾಸನೆ ನೀಡಿದರು.

ಎಐಟಿಯುಸಿಯ ಶೇಷಾದ್ರಿ, ಟಿಯುಸಿಸಿಯ ಸಿದ್ದರಾಮಯ್ಯ, ಸಿಐಟಿಯುವಿನ ಕೆ.ಶಂಕರ್, ಯುಟಿಯುಸಿಯ ಸೋಮಶೇಖರ್‌ರವರು ಮಾತನಾಡಿ ಸೆಪ್ಟೆಂಬರ್ 29ರ ಮುಷ್ಕರವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಸಂಘ ಸಂಸ್ಥೆಗಳು ದುಡಿಯಬೇಕೆಂದು ಹೇಳಿದರು.

ಎಐಬಿಒಎದ ವಿಶ್ವನಾಥ ನಾಯಕ್ ಬ್ಯಾಂಕ್‌ಗಳಲ್ಲಿ ಹೆಚ್ಚಾಗುತ್ತಿರುವ ಕೆಲಸದ ಒತ್ತಡ ಹಾಗೂ ಖಾಸಗೀ ಉದ್ದಿಮೆದಾರರು ಮತ್ತು ರಾಜಕಾರಣಿಗಳಿಂದ ಸಾಲ ಮರಳಿ ಬಾರದಿರುವುದರ ಬಗ್ಗೆ ಪ್ರಸ್ತಾಪಿಸಿದರು. ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಪ್ರತಿನಿಧಿಸಿ ಮಾತನಾಡಿದ ಸುಕುಮಾರ್ ಪಿಳ್ಳೆಯವರು ಖಾಸಗೀಕರಣದ ಬಗ್ಗೆ ವಿರೋಧ ವ್ಯಕ್ತಪಡಿಸಿದರು. ಕೇಂದ್ರ ಸಾರ್ವಜನಿಕ ಉದ್ದಿಮೆಗಳಲ್ಲಿ ಖಾಸಗಿಯವರ ನುಸುಳುವಿಕೆ ವಿಷಾದನೀಯ ಹಾಗೂ ಇದಕ್ಕಾಗಿ ಕರ್ನಾಟಕದಲ್ಲಿ ದೊಡ್ಡ ಚಳುವಳಿಯಾಗಬೇಕಿದೆ ಎಂದು ಹೇಳಿದರು.


ಬಿಎಸ್‌ಎನ್‌ಎಲ್‌ನ ಕಾಂ.ಸಿ.ಕೆ. ಗುಂಡಣ್ಣ, ಕೇಂದ್ರ ಸರ್ಕಾರಿ ನೌಕರರ ಒಕ್ಕೂಟದ ಕಾಂ.ಬಿ.ಎಲ್.ಪ್ರಸಾದ್, ಜಿಐಸಿಯ ಕಾಂ.ಶ್ರೀನಿವಾಸಮೂರ್ತಿ, ಸಿಐಟಿಯುವಿನ ಕಾಂ.ವಸಂತಾಚಾರಿ, ಟಿಯುಸಿಸಿಯ ಕಾಂ.ರಮೇಶ್, ಅಖಿಲಭಾರತ ರೈಲ್ವೆ ಉದ್ಯೋಗಿಗಳ ಸಂಘದ ರಾಜನ್‌ರವರು ಮಾತನಾಡಿದರು. ಸೆಪ್ಟೆಂಬರ್ 29ರ ಮುಷ್ಕರವನ್ನು ಯಶಸ್ವಿಗೊಳಿಸೋಣವೆಂದು ತಿಳಿಸಿದರು. ಸಿಜಿಹೆಚ್‌ಎಸ್‌ನ ಜಯಲಕ್ಷ್ಮಿ, ಸಕ್ಕರೆ ಕಾರ್ಮಿಕರ ಒಕ್ಕೂಟದ ಶಿವಾನಂದ ಚಾಮಿಯಾರ್‌ರವರು ಮಾತನಾಡಿದರು.

ಸಿಐಟಿಯುವಿನ ಪ್ರಸನ್ನಕುಮಾರ್‌ರವರು ಸಮಾವೇಶದ ಘೋಷಣೆಗೆ ಸಭೆಯ ಅನುಮತಿಯನ್ನು ಕೋರಿದರು. ಸಭೆಯು ಒಕ್ಕೊರಲಿನಿಂದ ಘೋಷಣೆಯನ್ನು ಅನುಮೋದಿಸಿತು.

ಕೊನೆಯಲ್ಲಿ ವಂದನಾರ್ಪಣೆಯನ್ನು ಕಾಂ.ಹೆಚ್‌ಎಂಎಸ್‌ನ ಶ್ರೀನಿವಾಸ ಮೂರ್ತಿ ಮಾಡಿದರು.

ಈ ಸಮಾವೇಶದ ವಿಶೇಷವೆಂದರೆ, ಜೆಸಿಟಿಯುವಿನಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ರಂಗಗಳಿಂದ ಭಾಗವಹಿಸುವಿಕೆ ಕಂಡು ಬಂದಿದ್ದು ಇಷ್ಟೊಂದು ವಿಶಾಲ ಐಕ್ಯತೆ ಕಂಡು ಬಂದಿದ್ದು ನಿಜಕ್ಕೂ ಶ್ಲಾಘನೀಯ.

(ಕೃಪೆ : ಸಿಐಟಿಯು ಸಂದೇಶ)



ಕೆ. ಚಂದ್ರಶೇಖರ್ ರಾವ್
ಟಿಆರ್‌ಎಸ್ ಅಧ್ಯಕ್ಷ

ಆಂಧ್ರಪ್ರದೇಶದಲ್ಲಿ ಇತ್ತೀಚೆಗೆ ಕಾಂಗ್ರೆಸ್ ಶಾಸಕ-ಕಾರಿನ ಚಾಲಕ ಹಾಗೂ ಅಧಿಕಾರಿಗಳು ಸೇರಿದಂತೆ ಒಟ್ಟು ಒಂಬತ್ತು ಜನರನ್ನು ಗುಂಡು ಹಾರಿಸಿ ಕೊಂದು ತಮ್ಮದು ವಿವೇಕಹೀನ ಹಿಂಸಾಚಾರದ ಹಾದಿ ಎಂಬುದನ್ನು ನಕ್ಸಲೀಯರು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಇದು ಮಾತ್ರವೇ ಅಲ್ಲ ತಾವೇ ಪ್ರತಿಪಾದಿಸುವ ಭಾಷಾ ರಾಷ್ಟ್ರೀಯತೆಗಳ ಪರಿಕಲ್ಪನೆಯ ವಿರುದ್ಧವೇ ಕೆಲಸ ಮಾಡುವ ಎಡಬಿಡಂಗಿತನವನ್ನು ಅವರು ಪ್ರದರ್ಶಿಸಿದ್ದಾರೆ. ವಿಶಾಲಾಂಧ್ರದ ಐತಿಹಾಸಿಕ ಚಳವಳಿ, ಪರಂಪರೆಗೆ ವಿರುದ್ಧವಾಗಿ ಅವರು ಪ್ರತ್ಯೇಕ ತೆಲಂಗಾಣ ಚಳುವಳಿಗೂ ಕುಮ್ಮಕ್ಕು ನೀಡುತ್ತಾ ತಮ್ಮ ಬೌದ್ಧಿಕ ದಾರಿದ್ರ್ಯವನ್ನು ಅನಾವರಣಗೊಳಿಸಿಕೊಂಡಿದ್ದಾರೆ.

# ಪ್ರತ್ಯೇಕ ರಾಜ್ಯದ ಬೇಡಿಕೆಯೂ ನಕ್ಸಲೀಯರ ಬೌದ್ಧಿಕ ದಾರಿದ್ರ್ಯವೂ

ಆರ್.ರಾಮಕೃಷ್ಣ

ತೆಲಂಗಾಣ ರಾಷ್ಟ್ರಸಮಿತಿ (ಟಿಆರ್‌ಎಸ್) ನ ಅಧ್ಯಕ್ಷರು, ಕೇಂದ್ರ ಸಚಿವರು ಆಗಿರುವ ಕೆ.ಚಂದ್ರಶೇಖರ್ ರಾವ್ ತಮ್ಮ ಪಕ್ಷವು ಕೇಂದ್ರ ಯುಪಿಎ ಸರ್ಕಾರಕ್ಕೆ ಬೆಂಬಲ ಮುಂದುವರಿಸಬೇಕೋ ಬೇಡವೋ ಎಂಬ ಜಿಜ್ಞಾಸೆಯನ್ನು ಪ್ರದರ್ಶಿಸುತ್ತಿದ್ದಾರೆ ಮತ್ತು ಆಂಧ್ರ ಪ್ರದೇಶದಲ್ಲಿ ನಕ್ಸಲೀಯರ ಭೀಕರ ಹಿಂಸಾಕಾಂಡಗಳ ಹಿನ್ನೆಲೆಯಲ್ಲಿ ಅಲ್ಲಿನ ಸರ್ಕಾರ ನಕ್ಸಲೀಯ ಸಂಘಟನೆಗಳ ಮೇಲೆ ಹೇರಿರುವ ನಿಷೇಧವನ್ನು ವಾಪಸ್ ಪಡೆಯಬೇಕೆಂದೂ ಒತ್ತಾಯಿಸಿದ್ದಾರೆ.

ಇತ್ತೀಚೆಗೆ ನೆರೆಯ ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಪಾಲ್ಗೊಂಡಿದ್ದ ತೆಲಂಗಾಣ ರಾಷ್ಟ್ರ ಸಮಿತಿಯ (ಟಿ.ಆರ್.ಎಸ್.) ಆರು ಸಚಿವರು ರಾಜೀನಾಮೆ ನೀಡುವುದರೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಟಿ.ಆರ್.ಎಸ್.ಗಳ ಮೈತ್ರಿ ಅಂತ್ಯಗೊಂಡಂತಾಗಿದೆ. ತೆಲಂಗಾಣ ಪ್ರತ್ಯೇಕ ರಾಜ್ಯ ಸ್ಥಾಪನೆಯ ಗುರಿಯನ್ನು ತಲುಪಬೇಕಾದರೆ ವೈ.ಎಸ್.ರಾಜಶೇಖರರೆಡ್ಡಿ ನೇತೃತ್ವದ ಸರ್ಕಾರದೊಂದಿಗೆ ತಮ್ಮ ಸಂಬಂಧಗಳನ್ನು ಕಡಿದುಕೊಳ್ಳಬೇಕೆಂದೂ ಇಲ್ಲವಾದಲ್ಲಿ 'ಪರಿಣಾಮ' ಎದುರಿಸಬೇಕೆಂದು (ನಕ್ಸಲ್‌ವಾದಿ) ಸಿಪಿಐ(ಮಾವೋವಾದಿ) ಗುಂಪು ಬೆದರಿಕೆಗಳನ್ನು ಒಡ್ಡಿತ್ತು.


ಸಿಪಿಐ(ಎಂ.ಎಲ್)ನ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಮತ್ತು ಇತ್ತೀಚೆಗೆ ನಕ್ಸಲೀಯರು ಮತ್ತು ರಾಜ್ಯ ಸರ್ಕಾರದ ನಡುವೆ ನಡೆದ ಮತುಕತೆಯಲ್ಲಿ ಪಾಲ್ಗೊಂಡಿದ್ದ ರಿಯಾಜ್ ಮತ್ತು ಇತರ ಮೂವರು ಇತ್ತೀಚೆಗೆ ಕರೀಂ ನಗರ ಸಮೀಪ ಪೋಲೀಸ್ ಎನ್‌ಕೌಂಟರ್‌ನಲ್ಲಿ ಹತರಾಗಿದ್ದರು. ಟಿಆರ್‌ಎಸ್. ಕೇಂದ್ರ ಸಚಿವ ಎ.ನರೇಂದ್ರ ಸೇರಿದಂತೆ ಹಲವು ಸಚಿವರು ಇದು ನಕಲಿ ಎನ್‌ಕೌಂಟರ್ ಎಂದೂ ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದೂ, ಇಂತಹ ನಕಲಿ ಎನ್‌ಕೌಂಟರ್‌ಗಳು ಮುಂದುವರಿದರೆ ತಾವು ಸರ್ಕಾರಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ ಎಂದೂ ಎಚ್ಚರಿಕೆ ನೀಡಿದ್ದರು. ಅದರಂತೆ ಇದೀಗ ರಾಜಿನಾಮೆ ನೀಡಿದ್ದಾರೆ.

ಮುಖ್ಯಮಂತ್ರಿಗಳು ತಮ್ಮ ಅನಿಸಿಕೆಗಳಿಗೆ ಸ್ಪಂದಿಸುತ್ತಿಲ್ಲ, ತಮ್ಮ ಬೇಡಿಕೆಗಳನ್ನು ಪರಿಗಣಿಸುತ್ತಿಲ್ಲ, ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ, ತೆಲಂಗಾಣ ವಿರೋಧಿ ನಿಲುವು ತೆಗೆದುಕೊಳ್ಳುತ್ತಿದ್ದಾರೆ ಎಂದು ಅವರು ತಮ್ಮ ರಾಜೀನಾಮೆಗೆ ಕಾರಣಗಳನ್ನು ನೀಡಿದ್ದಾರೆ. ಏನೇ ಕಾರಣಗಳನ್ನು ಟಿ.ಆರ್.ಎಸ್. ನೀಡಿದರೂ. ನಕ್ಸಲೀಯರ ಬೆದರಿಕೆಯೇ ಈ ರಾಜೀನಾಮೆಯ ಹಿಂದಿನ ಪ್ರಧಾನ ಕಾರಣ ಎಂಬುದು ವಾಸ್ತವ. ನಕ್ಸಲೀಯರ ಈ ಬೆದರಿಕೆ ಮತ್ತು ರಾಜೀನಾಮೆ ಪ್ರಕರಣ ಆಂಧ್ರ ಪ್ರದೇಶದಲ್ಲಿ ತೆಲಂಗಾಣ ಪ್ರತ್ಯೇಕತಾ ಚಳುವಳಿಗೂ - ನಕ್ಸಲೀಯರಿಗೂ ನಡುವೆ ಇರುವ ನಂಟಿನ ಸಾಕ್ಷಿಯೂ ಆಗಿದೆ.

ಸಚಿವರ ಈ ರಾಜೀನಾಮೆಗೆ ಇತರ ಕಾರಣಗಳೂ ಇರಬಹುದು. ಅದು ಏನೇ ಇರಲಿ ಭಾರತ ಒಕ್ಕೂಟದ ಒಂದು ವೈಶಿಷ್ಟ್ಯವೂ, ಜನರ ಪ್ರಜಾಸತ್ತಾತ್ಮಕ ಆಶಯವೂ ಆದ ಭಾಷಾವಾರು ರಾಜ್ಯಕ್ಕೆ ಆ ಮೂಲಕ ಭಾಷಾವಾರು ರಾಷ್ಟ್ರೀಯತೆಯ ಸಮಗ್ರತೆ ಐಕ್ಯತೆಗೆ ಧಕ್ಕೆಯುಂಟುಮಾಡುವ ಈ ವಿಭಜನಕಾರಿ ಚಳುವಳಿಯೊಂದಿಗೆ ನಕ್ಸಲೀಯರು ಹಾಸುಹೊಕ್ಕಾಗಿ ಬೆರೆತಿರುವುದು ಮಾತ್ರ ಒಂದು ಕ್ರೂರ ವ್ಯಂಗ್ಯವಾಗಿದೆ.

ಕರ್ನಾಟಕದಲ್ಲಿ, ಕೊಡಗು ಪ್ರತ್ಯೇಕ ರಾಜ್ಯ ಬೇಡಿಕೆ ಬಗ್ಗೆ ಇದೇ ನಕ್ಸಲೀಯರು ತೆಗೆದುಕೊಂಡಿರುವ ನಿಲುವನ್ನು ಇಲ್ಲಿ ಗಮನಿಸಬೇಕು. ಸರ್ಕಾರ ಮತ್ತು ಸಂವಿಧಾನದ ಸಕಲ ಸೌಲಭ್ಯಗಳನ್ನು ಕಬಳಿಸಿಕೊಂಡು ತಿಂದು, ತೇಗಿ, ಬಹುಪಾಲು ದಲಿತರು - ಹಿಂದುಳಿದವರು ಆಗಿರುವ ಕೂಲಿ ಕಾರ್ಮಿಕರು-ಬಡರೈತರನ್ನು ದಯನೀಯವಾಗಿ ಶೋಷಿಸುತ್ತಿರುವ ಕೊಡಗಿನ ಭೂಮಾಲಿಕ ವರ್ಗದ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಇದೇ ನಕ್ಸಲೀಯರ ಸ್ವಯಂ ಘೋಷಿತ 'ಮಾವೋವಾದಿ ಸಂಘಟನೆ'ಗಳು ಬೆಂಬಲಿಸುತ್ತಿವೆ. ಇದಕ್ಕೆ ಕೊಡವ ಭಾಷಾ ರಾಷ್ಟ್ರೀಯತೆ ಎಂಬ ನೆಪ ನೀಡಿವೆ.

ಕೊಡಗಿನ, ಬಹುತೇಕ ಶೋಷಿತ ಜಾತಿ ಮತ್ತು ವರ್ಗಗಳೂ ಆಗಿರುವ ಕುರುಬರು, ಕೆಂಬಟ್ಟಿಯವರು, ಹೆರವರು, ಇತ್ಯಾದಿ ದಲಿತ ಹಿಂದುಳಿದವರು ಕೊಡವ ಭಾಷೆ ಮಾತನಾಡುವವರಲ್ಲ. ಬಹುಸಂಖ್ಯಾತರಾದ ಶೋಷಿತ ದುಡಿಯುವ ವರ್ಗವು ವಿರೋಧಿಸುತ್ತಿ



ಗದ್ದರ್

ರುವ ಹಾಗೂ ಅವರ ಹಿತಾಸಕ್ತಿಗಳಿಗೆ ವಿರುದ್ಧವಾದ ಪ್ರತ್ಯೇಕ ರಾಜ್ಯವನ್ನು ಬೆಂಬಲಿಸಬಹುದೇ ಬೆಂಬಲಿಸ ಬಾರದೇ ಎಂಬ ವಿವೇಚನೆ ಮಾಡಲಾರದಷ್ಟರ ಮಟ್ಟಿಗೆ ಈ ನಕ್ಸಲೀಯರನ್ನು ಬೌದ್ಧಿಕ ದಾರಿದ್ರ್ಯ ಆವರಿಸಿದೆ.

ಅತ್ತ ಆಂಧ್ರ ಪ್ರದೇಶದ ಕತೆ ಇನ್ನೊಂದು ಬಗೆಯದು. ತೆಲಂಗಾಣ ಪ್ರತ್ಯೇಕ ರಾಜ್ಯ ಚಳುವಳಿಯನ್ನು ಬೆಂಬಲಿಸಲು ಈ ನಕ್ಸಲೀಯರಿಗೆ ಭಾಷಾ ರಾಷ್ಟ್ರೀಯತೆಯ ನೆಪವೂ ಇಲ್ಲಿ ಸಿಗುವುದಿಲ್ಲ.

ತೆಲಂಗಾಣ ಪ್ರಾಂತದ 'ಹಿಂದುಳಿದಿರುವಿಕೆ'ಯೇ ಪ್ರತ್ಯೇಕ ರಾಜ್ಯದ ಮೂಲ ಮಂತ್ರ. ಭಾಷಾವಾರು ರಾಷ್ಟ್ರೀಯತೆಯ ನೆಲೆಯಲ್ಲಿ ತೆಲುಗು ಭಾಷೆಯ ಪ್ರದೇಶವೆಲ್ಲವೂ ಒಂದುಗೂಡಬೇಕೆಂಬ ಆಂಧ್ರ ಪ್ರದೇಶದ ಜನತೆಯ ಚಾರಿತ್ರಿಕ 'ವಿಶಾಲಾಂಧ್ರ' ಚಳುವಳಿಯ ಪರಂಪರೆಯನ್ನೇ ಈ ಪ್ರತ್ಯೇಕತಾವಾದಿಗಳು ಮರೆತುಬಿಟ್ಟಿದ್ದಾರೆ.



ಯಾವುದೇ ಒಂದು ಪ್ರದೇಶ ಮತ್ತೊಂದರಿಂದ ಪ್ರತ್ಯೇಕಗೊಂಡರೆ ಅದು ಅಬಿವೃದ್ಧಿ ಹೊಂದಿ ಬಿಡುತ್ತದೆ, ಇಲ್ಲವಾದರೆ ಅಭಿವೃದ್ಧಿ ಹೊಂದುವುದು ಸಾಧ್ಯವೇ ಇಲ್ಲ ಎಂದು ಯೋಚಿಸುವ ವಿಧಾನವೇ ಅತ್ಯಂತ ಹಾಸ್ಯಾಸ್ಪದವಾಗಿದೆ.

ಹಿಂದುಳಿದಿರುವಿಕೆಯ ನೆಪದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಅಲ್ಲಿನ ಆಳುವ ವರ್ಗವು ಎತ್ತಬಹುದಾದ ಪ್ರಶ್ನೆ. ತೆಲಂಗಾಣದ ಭೂಮಾಲಕ ವರ್ಗ ಮತ್ತು ಆಳುವ ವರ್ಗದ ರಾಜಕಾರಣಿಗಳ ಕೆಲವು ವಿಭಾಗಗಳಿಗೆ ಪ್ರತ್ಯೇಕ ರಾಜ್ಯ ಇಂದು ಅಗತ್ಯವಾಗಿ ಕಾಣಿಸುತ್ತಿದೆ. ಇದರಿಂದ 'ವಿಶಾಲಾಂಧ್ರ'ದ ವಿಶಾಲ ರಾಜಕಾರಣದಲ್ಲಿ ರಾಜಕೀಯದ ಮೇಲಾಟದಲ್ಲಿ ಸ್ಪರ್ಧಿಸಿ ಯಶಸ್ಸು ಸಾಧಿಸುವ ವಿಶ್ವಾಸವಿಲ್ಲದ ರಾಜಕೀಯ ವ್ಯಕ್ತಿಗಳ ಮತ್ತು ಗುಂಪುಗಳ ಅಧಿಕಾರದಾಹ ತಣಿಯಬಹುದು ಮತ್ತು ಕುರ್ಚಿಯ ವ್ಯಾಮೋಹ ಗಳನ್ನು ಪೋಷಿಸಲು ಈ ಪ್ರತ್ಯೇಕ ರಾಜ್ಯ ರಚನೆ ಅನುಕೂಲವಾಗ ಬಹುದು. ಆದರೆ ಇದರಿಂದ ದುಡಿಯುವ ಜನತೆಗೆ - ಕಾರ್ಮಿಕ ವರ್ಗ - ರೈತ ಕೂಲಿಕಾರರಿಗೆ ಬರುವ ಲಾಭವೇನು? ಮತ್ತೊಬ್ಬರು ಮುಖ್ಯಮಂತ್ರಿ, ಮತ್ತೊಂದು ಮಂತ್ರಿ ಮಂಡಳ, ಮತ್ತೊಂದು ಸಚಿವಾಲಯದ ಸೌಧ... ಬಂಗಲೆಗಳು...... ಮತ್ತು ಕೆಂಪು ದೀಪದ ಕಾರುಗಳು.... ಹೀಗೆ ಜನಸಾಮಾನ್ಯರ ಬೆನ್ನ ಮೆಲೆ ಮತ್ತಷ್ಟು ತೆರಿಗೆಯ ಬರೆಗಳೇ ಬೀಳಬಹುದು.

ತೆಲಂಗಾಣ ಪ್ರಾಂತದ ಅಬಿವೃದ್ಧಿ ಚಕ್ರಕ್ಕೆ ತಡೆವೊಡ್ಡಿ ನಿಂತಿರುವ ಪ್ರಮುಖ ವರ್ಗ ಅಲ್ಲಿಯ ಭೂಮಾಲಿಕ ವರ್ಗ. ಜನಪರವಾದ ಭೂಸುಧಾರಣೆಗಾಗಿ ಭೂರಹಿತರ ಆಂದೋಲನ ರೂಪಿಸಿ ಭೂಮಿ ದಕ್ಕಿಸಿಕೊಳ್ಳುವುದು ಈ ಭಾಗದ ದುಡಿಯುವ ಜನತೆಯ ಜೀವನಾದಾಯವನ್ನು ಹಾಗೂ ಕೊಂಡುಕೊಳ್ಳುವ ಶಕ್ತಿಯನ್ನು ಎತ್ತರಿಸುವುದು ಯಾವುದೇ ಕ್ರಾಂತಿಕಾರಿ ಚಳುವಳಿಯ ಗುರಿಯಾಗಬೇಕು. ಈ ಪ್ರಶ್ನೆಯ ಜೊತೆ ಜೊತೆ ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಸಮತೋಲನದ ಪ್ರಶ್ನೆಯನ್ನು ಬೆಸೆಯುವುದು ಸಾಧ್ಯ. ಅಭಿವೃದ್ಧಿಯಲ್ಲಿನ ಅಸಮತೋಲನಕ್ಕೆ ಸಹ ನಮ್ಮ ದೇಶದ ಆಳುವ ವರ್ಗಗಳು ಆಯ್ಕೆ ಮಾಡಿಕೊಂಡಿರುವ ದೋಷಪೂರಿತ ಬಂಡವಾಳಶಾಹಿ ಅಭಿವೃದ್ಧಿ ದಾರಿಯೇ ಕಾರಣ. ಈ ಜನ ವಿರೋಧಿ ನೀತಿಯ ವಿರುದ್ಧ ಸಮಗ್ರ ದೃಷ್ಟಿಯ ಹೋರಾಟ ಅಗತ್ಯ. ಅದು ಬಿಟ್ಟು ಪ್ರತ್ಯೇಕ ರಾಜ್ಯದ ಪ್ರಶ್ನೆಯನ್ನೆತ್ತುವ ಮೂಲಕ ಜನರ ಗಮನವನ್ನು ತಮ್ಮ ಬದುಕಿನ ನಿಜವಾದ ಪ್ರಶ್ನೆಗಳಿಂದ ಬೇರೆಡೆ ಸೆಳೆಯುವ ಆಳುವ ವರ್ಗಗಳ ಅವಕಾಶವಾದಿ ರಾಜಕಾರಣದ ಕೂಸಾದ ಪ್ರತ್ಯೇಕ ತೆಲಂಗಾಣ ಚಳುವಳಿಯಲ್ಲಿ ತೂರಿಕೊಂಡಿರುವ ನಕ್ಸಲೀಯರು ನಿಜಕ್ಕೂ ಯಾರ ಪರವಾಗಿದ್ದಾರೆ ಎಂಬುದನ್ನು ಜನತೆ ಗಮನಿಸುತ್ತಿದ್ದಾರೆ.

ಆಂಧ್ರ ಪ್ರದೇಶದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತೆಲಂಗಾಣ ಪ್ರತ್ಯೇಕ ರಾಜ್ಯದ ಪ್ರಶ್ನೆಯ ಬಗೆಗೆ ಖಚಿತವಾದ ನಿಲುವು ತಳೆದಿದೆ. ಹಿಂದುಳಿದಿರುವಿಕೆ ಪ್ರಾದೇಶಿಕ ಅಸಮಾನತೆಯ ವಿರುದ್ಧ ಸಮಾಜದ ಮೂಲಭೂತ ಬದಲಾವಣೆಗೆ ಪೂರಕವಾದ ದೃಷ್ಟಿಯೊಂದಿಗೆ ಜನರನ್ನು ಸಂಘಟಿಸುತ್ತಾ - ಚಳುವಳಿ ರೂಪಿಸುತ್ತಲೇ 'ಪ್ರತ್ಯೇಕ ತೆಲಂಗಾಣ'ದ ಆಳುವ ವರ್ಗಗಳ ಅವಕಾಶವಾದಿ ಚಳುವಳಿಯನ್ನು ವಿರೋಧಿಸುತ್ತಿದೆ. ತೆಲಂಗಾಣ ಪ್ರದೇಶದಲ್ಲಿ ನೀರಾವರಿ ಸೌಲಭ್ಯದ ವಿಸ್ತರಣೆ, ಕೃಷಿ ಅಭಿವೃದ್ಧಿಗೆ ಪೂರಕ ಸಹಾಯ, ಈ ಪ್ರದೇಶ ಸಮಗ್ರ ಅಭಿವೃದ್ಧಿಗೆ ವಿಶೇಷ ಯೋಜನೆ ಹಾಗೂ ಸೂಕ್ತ ಬಜೆಟ್ ಬೆಂಬಲ, ಶಿಕ್ಷಣದ ವಿಸ್ತರಣೆ ಈ ಭಾಗದ ದಲಿತ ಹಿಂದುಳಿದವರ ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿಶೇಷ ಯೋಜನೆಗಳಿಗಾಗಿ ಒತ್ತಾಯಿಸುತ್ತಿದೆ.


**ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಅಪಾಯಗಳನ್ನು ಆಹ್ವಾನಿಸಿದಂತೆ**

ಪ್ರತ್ಯೇಕ ತೆಲಂಗಾಣ ಬೇಡಿಕೆಯ ಸಂಬಂಧ ಪ್ರತಿಕ್ರಿಯೆ ನೀಡಿರುವ ಪ್ರಧಾನಿಗಳ ಹೇಳಿಕೆ ಮತ್ತಷ್ಟು ಅಪಾಯಗಳನ್ನು ಆಹ್ವಾನಿಸುವಂತಹದ್ದಾಗಿದೆ. ರಾಜ್ಯಗಳ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ಮತ್ತೊಂದು ಆಯೋಗವನ್ನು ನೇಮಿಸುವ ಬಗ್ಗೆ ಅವರು ಮಾತನಾಡಿದ್ದಾರೆ.

ಇತ್ತೀಚೆಗೆ ಜಾರ್ಖಂಡ್, ಛತ್ತೀಸ್‌ಗಢ, ಉತ್ತರಾಂಚಲ ಈ ಮೂರು ಪ್ರತ್ಯೇಕ ರಾಜ್ಯ ರಚನೆಯ ಅನುಭವ ಏನನ್ನು ಹೇಳುತ್ತಿದೆ ಎಂಬುದನ್ನು ಇಲ್ಲಿ ಗಮನಿಸಬೇಕಿದೆ. ಈ ಹೊಸ ರಾಜ್ಯಗಳ ರಚನೆಯೂ ಅಭಿವೃದ್ಧಿಯ ಪ್ರಶ್ನೆಯಲ್ಲಿ ಯಾವ ಕೊಡುಗೆಯನ್ನು ನೀಡಿಲ್ಲ. ಮಾತ್ರವಲ್ಲ, ಅಭಿವೃದ್ಧಿಯ ಸಾಧ್ಯತೆಗೆ ಸಾಕಷ್ಟು ತೊಡಕುಗಳನ್ನೇ ಉಂಟುಮಾಡಿವೆ. ಇರುವ ಸಂಪನ್ಮೂಲಗಳೂ ಆಡಳಿತಾತ್ಮಕ - ನೌಕರಶಾಹಿ ಅಗತ್ಯಗಳಿಗೆ ಹೆಚ್ಚೆಚ್ಚು ಬಳಕೆಯಾಗುತ್ತಾ ಅಲ್ಲಿ ಅಭಿವೃದ್ಧಿಗೆ ಸಂಪನ್ಮೂಲಗಳ ಕೊರತೆ ಎದುರಾಗಿದೆ ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಹೀಗೆ ಪ್ರತ್ಯೇಕ ರಾಜ್ಯಗಳ ಬೇಡಿಕೆಗಳು ಪುಟಿದೇಳಲು ಹೊಸ ಸಂದರ್ಭಗಳನ್ನೆ ಸೃಷ್ಟಿಸಿಕೊಡುವುದರಿಂದ ರಾಷ್ಟ್ರವ್ಯಾಪಿ ಮತ್ತಷ್ಟು ಪ್ರತ್ಯೇಕತಾ ಚಳುವಳಿಗಳು ಭುಗಿಲೆದ್ದರೆ ಏನಾದೀತು ಎಂಬ ಎಚ್ಚರ ಆಳುವ ಸರ್ಕಾರಗಳಿಗೆ ಇರಬೇಕೆಂದು ಜನತೆ ಬಯಸುತ್ತಾರೆ. ಆದರೆ ಅದು ರಾಜ್ಯ ಸರ್ಕಾರವೇ ಇರಲಿ, ಕೇಂದ್ರ ಸರ್ಕಾರವೇ ಇರಲಿ, ಪ್ರತ್ಯೇಕ ರಾಜ್ಯದ ಚಳುವಳಿಯ ನೆಪದಲ್ಲಿ ತಮ್ಮ ಬದುಕಿನ ನೈಜ ಪ್ರಶ್ನೆಗಳಿಂದ ಜನರ ಗಮನ ಬೇರೆಡೆಗೆ ಹರಿಯುವಂತಾದರೆ ಅದರಿಂದ ಮತ್ತೂ ಒಳ್ಳೆಯದೆ ಎಂದು ಭಾವಿಸಿದಂತಿದೆ. ಇಂತಹ ಸನ್ನಿವೇಶದಲ್ಲಿ ತಮ್ಮ ಜನವಿರೋಧಿ ನೀತಿಗಳನ್ನು ಮತ್ತಷ್ಟು ಜೋರಾಗಿ ಜಾರಿ ಮಾಡಬಹುದೆಂದು ಈ ಸರ್ಕಾರಗಳು ಯೋಚಿಸುವ ಸಾಧ್ಯತೆಯೇ ಹೆಚ್ಚು. ಇಂತಹ ಸಂದರ್ಭದಲ್ಲಿ ಜನತೆ ಭೂಮಿ, ಆಹಾರ, ಉದ್ಯೋಗದಂತಹ ಮೂಲಭೂತ ಪ್ರಶ್ನೆಗಳನ್ನು ರಾಷ್ಟ್ರ ರಾಜಕಾರಣದ ಮುಂಚೂಣಿಗೆ ತರಲು ಸಾಧ್ಯವಾಗುವಂತಹ ಬೃಹತ್ ಆಂದೋಲನದ ಮೂಲಕ ಆಳುವ ಸರ್ಕಾರಗಳಿಗೆ ಪ್ರತ್ಯುತ್ತರ ನೀಡಬೇಕು.

# 'ಸಹಾಯಧನಗಳಿಂದ ಹಣಕಾಸು ಹೊರೆ'



## ಕುರುಡು ಕಾಂಚಾಣ

ಜಿ.ಎಸ್.ಮಣಿ

ಇದು ಕೇಂದ್ರದ ಹಣಕಾಸು ಸಚಿವ ಪಿ.ಚಿದಂಬರಂ ಅವರ ಅಂಬೋಣ. ಸಹಾಯಧನಗಳು ಮತ್ತು ಉದ್ಯೋಗ ಭರವಸೆ ಕಾರ್ಯಕ್ರಮಗಳಿಂದಾಗಿ ಹಣಕಾಸು ಹೊರೆ ಹೆಚ್ಚುತ್ತಿದೆ. ಇದರ ನಿರ್ವಹಣೆ ಮಾಡುವುದೇ ದೊಡ್ಡ ಸವಾಲು ಎಂಬುದು ಅವರ ಆತಂಕ.

ಇದಕ್ಕೇನು ಮಾಡಬೇಕು? ಯಾಕೆ ಇಂತಹ ಮಾತು?

ಸಹಾಯಧನಗಳು ಹೆಚ್ಚಾಗಿ ಜನಸಾಮಾನ್ಯರ ಹೊರೆಗಳನ್ನು ಹಗುರ ಮಾಡುವ ಸಲುವಾಗಿ ಇರುವುದು. ಉದಾಹರಣೆಗೆ ರಸಗೊಬ್ಬರಕ್ಕೆ ಸಹಾಯಧನ ನೀಡಿದರೆ ರೈತನ ಬೆಳೆ ಬೆಳೆವ ಖರ್ಚು ಮಿತಿಯಲ್ಲಿರುತ್ತದೆ. ರೈತ ಅಲ್ಪಸ್ವಲ್ಪ ಲಾಭ ಪಡೆದು ಬದುಕಬಹುದು. ಅಡುಗೆ ಅನಿಲದ ಬೆಲೆ ಕಡಿಮೆ ಇದ್ದರೆ ಬಡ ಜನ ಸಾಮಾನ್ಯರು ಉಣ್ಣಬಹುದು. ಹಾಗೆಯೇ ಉದ್ಯೋಗ ಭರವಸೆ ಯೋಜನೆ. ಬಡವರಲ್ಲಿ ಅತಿ ಬಡವರು, ಉದ್ಯೋಗವಿಲ್ಲದೆ ನರಳುವವರು 2 ಹೊತ್ತಿನ ಊಟವನ್ನಾದರೂ ಮಾಡಿ ಬದುಕಲು ಅವಕಾಶ ಕಲ್ಪಿಸಿಕೊಡುವ ಯೋಜನೆ ಇದು.

ಈ ಯೋಜನೆಗಳು / ಕಾರ್ಯಕ್ರಮಗಳು ಕೇಂದ್ರ ಹಣಕಾಸು ಮಂತ್ರಿಗಳಿಗೆ ಕರಾಳವಾಗಿ ಕಾಣುತ್ತವೆ. ಅವೇ ಹೊರೆಯಾಗಿ ತೋರುತ್ತವೆ. ಈ ಹೊರೆಯಿಂದಾಗಿ ಹಣಕಾಸು ನಿರ್ವಹಣೆ ಕಷ್ಟ ಎಂದು ಅವರಿಗೆ ಅನಿಸುತ್ತದೆ. ಇದೇ ಹಣಕಾಸು ಮಂತ್ರಿಗಳಿಗೆ ಕಂಪನಿಗಳಿಗೆ ಬಂಡವಾಳಿಗರಿಗೆ ತೆರಿಗೆ ವಿನಾಯಿತಿ ನೀಡುವಾಗ ಹೊರೆ ಎನಿಸುವುದೇ ಇಲ್ಲ. ಕಳೆದ ಸಾಲಿನಲ್ಲಿ ಶೇರು ಬ್ರೋಕರುಗಳಿಗೆ 6,000 ಕೋಟಿ ರೂಪಾಯಿಗಳ ವಹಿವಾಟು ತೆರಿಗೆ ತೆಗೆದುಹಾಕಿದಾಗ ಅದು ಹಣಕಾಸು ಹೊರೆಯಾಗುವುದಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ತೆರಿಗೆ ವಿನಾಯಿತಿಗಳನ್ನು ನೀಡುವಾಗಲೂ ಅದು ಹಣಕಾಸು ಹೊರೆಯಾಗುವುದಿಲ್ಲ.

ಜನಸಾಮಾನ್ಯರ ಬದುಕನ್ನು ಹಗುರಗೊಳಿಸಲು ನೀಡುವ ಹಣಕಾಸು/ ಸಹಾಯಧನದಿಂದ ಮಾತ್ರ ಹಣಕಾಸು ಹೊರೆಯಾಗುತ್ತದೆ. ಇದಲ್ಲವೆ ಬೂರ್ಜ್ವಾ ಅರ್ಥಶಾಸ್ತ್ರ?

○

# ಆರ್ಥಿಕ ಸುಧಾರಣೆ : ಮನಮೋಹನ ರಾಗ

ಪ್ರಧಾನ ಮಂತ್ರಿ ಮನಮೋಹನ ಸಿಂಗರು ಸಂಸತ್ತಿನಲ್ಲಿ 'ಸುಧಾರಣೆ'ಯ ರಾಗ ತೆಗೆದಿದ್ದಾರೆ. ವಿದೇಶಿ ನೇರ ಹೂಡಿಕೆ ಮತ್ತು ಕಾರ್ಮಿಕ ಕ್ಷೇತ್ರದ ಸುಧಾರಣೆಗಳು ಇಲ್ಲದೆ ಭಾರತದ ಆರ್ಥಿಕ ಶೇ. 8ರ ದರದಲ್ಲಿ ಬೆಳೆಯುವುದು ಸಾಧ್ಯವಾಗದು ಎಂದು ಅವರು ಹೇಳಿದ್ದಾರೆ.

ವಿದೇಶೀ ನೇರ ಹೂಡಿಕೆಯ ಅವಶ್ಯಕತೆಯ ಬಗ್ಗೆ ಅವರು ಹೇಳುತ್ತ ಪ.ಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರೇ ಸಿಂಗಾಪುರಕ್ಕೆ ಹೋಗಿ ಅಲ್ಲಿನ ಕಂಪನಿಗಳನ್ನು ಪ.ಬಂಗಾಳದಲ್ಲಿ ಹೂಡಿಕೆ ಮಾಡುವಂತೆ ಕೇಳುತ್ತಿದ್ದಾರೆ ಎಂಬುದನ್ನು ಉದಾಹರಣೆಯನ್ನಾಗಿ ನೀಡಿದ್ದಾರೆ.

ವಿದೇಶಿ ನೇರ ಹೂಡಿಕೆ ಮತ್ತು ಕಾರ್ಮಿಕ ಸುಧಾರಣೆ ಎರಡೂ ಒಂದಕ್ಕೊಂದು ಸಂಬಂಧಪಟ್ಟಂತಹವು. ಕಾರ್ಮಿಕ ಸುಧಾರಣೆ ಆಗದೆ ವಿದೇಶೀ ನೇರ ಹೂಡಿಕೆ ಬಾರದು. ಹಾಗಾದರೆ ಕಾರ್ಮಿಕ ಕ್ಷೇತ್ರದ ಸುಧಾರಣೆ ಏನು?

ಕಾರ್ಮಿಕ ಕ್ಷೇತ್ರದಲ್ಲಿನ ಸುಧಾರಣೆ ಎಂದರೆ ಕಾರ್ಮಿಕರನ್ನು ಯಾವಾಗ ಬೇಕಾದರೂ ಕೆಲಸಕ್ಕೆ ತೆಗೆದುಕೊಂಡು ಬೇಡವಾದಾಗ ಕೆಲಸದಿಂದ ತೆಗೆದುಹಾಕುವುದು. ಅತಿ ಕಡಿಮೆ ಸಂಬಳ ಮತ್ತು ಅನುಕೂಲಗಳನ್ನು ಒದಗಿಸುವುದು. ಇಂತಹ ಸುಧಾರಣೆ ತಂದರೆ ಮಾತ್ರ ವಿದೇಶಿ ನೇರ ಹೂಡಿಕೆ ಬರುತ್ತದೆ. ಇದೇ ಬೇಕು ಎಂಬುದು ಪ್ರಧಾನ ಮಂತ್ರಿಗಳ ಅಂಬೋಣ.

ಹೀಗೆ ನೇರ ಹೂಡಿಕೆ ಮಾಡುವ ಕಂಪನಿಗಳು ನಮ್ಮ ದೇಶದ ಬಗ್ಗೆ ಯಾವುದೇ ಕಾಳಜಿ ಹೊಂದಿರುವುದಿಲ್ಲ. ಇಲ್ಲಿನ ಕಾನೂನುಗಳನ್ನು ಮುರಿಯುತ್ತಾರೆ. ಲೆಕ್ಕಾಚಾರ ಇತ್ಯಾದಿಗಳಲ್ಲಿ ಅಪರಾ ತಪರಾ ಮಾಡುತ್ತಾರೆ. ಒಟ್ಟಾರೆ ಅವರು ಮನಸೊ ಇಚ್ಛೆ ವಹಿವಾಟು ಮಾಡಲು ಅವಕಾಶ ನೀಡಬೇಕು.

ಪ್ರಧಾನ ಮಂತ್ರಿಗಳು ಇದು ಬೇಕೇ ಬೇಕು ಎನ್ನುತ್ತಾರೆ. ನಮ್ಮ ಜನರ ಹಿತಾಸಕ್ತಿಗಳನ್ನು ಕಾಯಲು ಅವರು ಏನು ಮಾಡುತ್ತಾರೆ ಎಂಬುದರ ಬಗ್ಗೆ ಮಾತಿಲ್ಲ.

ಇಂತಹ ಸುಧಾರಣೆಗಳನ್ನು ಸಿಪಿಐ(ಎಂ) ಪೂರ್ತಿ ವಿರೋಧಿಸಿದೆ. ಎನ್ರಾನ್ ಮತ್ತು ಪಾಸ್ಕೊಗಳು ಏನು ಮಾಡಬಲ್ಲವು ಎಂಬ ಉದಾಹರಣೆ ನಮ್ಮ ಮುಂದೆ ಇವೆ. ಸುಧಾರಣೆಯ ನೆವದಲ್ಲಿ ಕಾರ್ಮಿಕರನ್ನು ಗುಲಾಮರಾಗಿ ಮಾಡುತ್ತೇವೆ ಎಂದರೆ ಅದಕ್ಕೆ ಒಪ್ಪುವುದು ಸಾಧ್ಯವಿಲ್ಲ.

ಪ.ಬಂಗಾಳದಲ್ಲಿ ವಿದೇಶೀ ನೇರ ಹೂಡಿಕೆ ಬೇಕು ಎಂದು ಎಡರಂಗ ಸರ್ಕಾರ ಬಯಸಿದರೆ ಅದು ಆ ರಾಜ್ಯದ ಹಿತಾಸಕ್ತಿಗಳಿಗೆ ಅನುಗುಣವಾಗಿ ಕಾರ್ಮಿಕರ ಹಿತಾಸಕ್ತಿಗಳಿಗೆ ಧಕ್ಕೆಯಾಗದಂತೆ ಆಗಬೇಕು ಎಂಬ ಕಾಳಜಿಯನ್ನು ಎಡರಂಗ ಸರ್ಕಾರ ತೆಗೆದುಕೊಳ್ಳುತ್ತದೆ. ಆದರೆ ಇದೇ ಕಾಳಜಿಯನ್ನು ಕೇಂದ್ರದ ಯುಪಿಎ ಸರ್ಕಾರ ತೆಗೆದುಕೊಳ್ಳುತ್ತಿಲ್ಲ ಎಂಬುದೇ ಈ ಸುಧಾರಣೆಗಳನ್ನು ವಿರೋಧಿಸಲು ಕಾರಣ.

ಇದು ಪ್ರಧಾನ ಮಂತ್ರಿಗಳಿಗೆ ಅರ್ಥವಾಗಬೇಕಲ್ಲವೆ?

# ಭೂಮಿ ಬಡವರಿಗೆ ವಿತರಣೆಯಾಗಲಿ......

ಪುಟ 3 ರಿಂದ

ಕರ್ನಾಟಕ ಸರ್ಕಾರದ ವಶದಲ್ಲಿಯೂ ಸಾಕಷ್ಟು ಕೃಷಿಯೋಗ್ಯ ಭೂಮಿ ಇದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಪ್ರಕಟಿಸಿರುವ ಈ ಕೆಳಗಿನ ಅಂಕಿ ಅಂಶಗಳನ್ನು ಗಮನಿಸಿ

| ಜಿಲ್ಲೆಯ ಹೆಸರು | 2000-01 (ಹೆಕ್ಟೇರುಗಳಲ್ಲಿ) ಸಾಗುವಳಿ ಯೋಗ್ಯವಾದ ಬಂಜರು ಭೂಮಿ | ಗೋಮಾಳ | ತೋಪುಗಳು |
|---|---|---|---|
| 1. ಬೆಂಗಳೂರು | 4067 | 5608 | 8021 |
| 2. ಬೆಂಗಳೂರು(ಗ್ರಾ.) | 6225 | 30,613 | 21,863 |
| 3. ಚಿತ್ರದುರ್ಗ | 21,615 | 88,740 | 11,317 |
| 4. ದಾವಣಗೆರೆ | 9231 | 19,538 | 5,048 |
| 5. ಕೋಲಾರ | 12,540 | 98,928 | 13,491 |
| 6. ಶಿವಮೊಗ್ಗ | 17,199 | 1,66,016 | 26,986 |
| 7. ತುಮಕೂರು | 62,681 | 86,239 | 20,141 |
| 8. ಬೆಳಗಾಂವ | 12,761 | 24,807 | 1,201 |
| 9. ಬಿಜಾಪುರ | 5,502 | 9,575 | 1,306 |
| 10. ಬಾಗಲಕೋಟೆ | 2,035 | 3,429 | 212 |
| 11. ಧಾರವಾಡ | 2,669 | 3,571 | 162 |
| 12. ಗದಗ | 1,010 | 2,592 | 235 |
| 13. ಹಾವೇರಿ | 2,990 | 12,395 | 1,919 |
| 14. ಉತ್ತರಕನ್ನಡ | 7,925 | 19,618 | 4,756 |
| 15. ಬಳ್ಳಾರಿ | 24,839 | 5,472 | 3,564 |
| 16. ಬೀದರ್ | 19,264 | 13,964 | 10,974 |
| 17. ಗುಲ್ಬರ್ಗ | 11,802 | 37,359 | 1,792 |
| 18. ರಾಯಚೂರು | 10,712 | 19,816 | 13,680 |
| 19. ಕೊಪ್ಪಳ | 2,568 | 14,675 | 210 |
| 20. ಚಿಕ್ಕಮಗಳೂರು | 21,510 | 97,761 | 21,467 |
| 21. ದಕ್ಷಿಣ ಕನ್ನಡ | 34,006 | 19,350 | 32,900 |
| 22. ಉಡುಪಿ | 32,924 | 10,684 | 48,900 |
| 23. ಹಾಸನ | 17,542 | 33,479 | 6,312 |
| 24. ಕೊಡಗು | 11,915 | 17,804 | 32,148 |
| 25. ಮಂಡ್ಯ | 41,955 | 38,185 | 3,177 |
| 26. ಮೈಸೂರು | 21,460 | 56,256 | 6,866 |
| 27. ಚಾಮರಾಜನಗರ | 7,637 | 22,750 | 4,741 |
| ಒಟ್ಟು | 4,26,584 | 9,59,224 | 3,3389 |

ಸರ್ಕಾರಿ ಬೀಳು ಭೂಮಿಯನ್ನು ಹಾಗೂ 20 ಲಕ್ಷ ಕೃಷಿಗೆ ಯೋಗ್ಯವಲ್ಲದ ಸರ್ಕಾರಿ ಭೂಮಿಯನ್ನು ಅಲ್ಲಿನ ಬಿಜೆಪಿ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಲು ಮುಂದಾಗಿದೆ. ತಮಿಳುನಾಡು ಸರ್ಕಾರ 50 ಲಕ್ಷ ಎಕರೆ ಸರ್ಕಾರಿ ಬೀಳು ಭೂಮಿಯನ್ನು ದೇಶಿಯ ಮತ್ತು ವಿದೇಶಿಯ ಕಂಪನಿಗಳಿಗೆ ಉಚಿತವಾಗಿ, 15 ವರ್ಷಗಳವರೆಗೆ ನೀಡಲು ನಿರ್ಧರಿಸಿದೆ. ಹರಿಯಾಣ ಮತ್ತು ಪಂಜಾಬ ರಾಜ್ಯಗಳಲ್ಲಿ ಗ್ರಾಮ ಪಂಚಾಯತಿಗಳ ಸ್ವಾಧೀನ ದಲ್ಲಿರುವ ಸರ್ಕಾರಿ ಭೂಮಿ ಯನ್ನು ಕಂಪನಿಗಳಿಗೆ ಲೀಸ್ ಆಧಾರದಲ್ಲಿ ನೀಡಲಾಗುತ್ತಿದೆ.

ಅಂಕಿ ಅಂಶಗಳ ಪ್ರಕಾರ 4,26,584 ಹೆಕ್ಟೇರ್ ಕೃಷಿಯೋಗ್ಯ ಬಂಜರು ಭೂಮಿ ಸರ್ಕಾರದ ವಶದಲ್ಲಿದೆ. ಅದರಂತೆಯೇ 9,59,224 ಹೆಕ್ಟೇರ್ ಗೋಮಾಳ ಎಂದು ವರ್ಗೀಕರಿಸಿದ ಭೂಮಿ ಸರ್ಕಾರದ ವಶದಲ್ಲಿದೆ. ಇಷ್ಟು ಭೂಮಿಯಲ್ಲಿ ಕೆಲವು ಭಾಗವನ್ನು ಭೂಹೀನ ಬಡವರು ಅತಿಕ್ರಮಣ ಮಾಡಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಅನೇಕ ಕಡೆ ಶ್ರೀಮಂತ ರೈತರೂ ಸಹ ಒತ್ತುವರಿ ಮಾಡಿ ಸಾಗುವಳಿ ಮಾಡುತ್ತಿದ್ದಾರೆ. ಇದಲ್ಲದೆ ಸುಮಾರು 7,93,986 ಹೆಕ್ಟೇರ್ ಕೃಷಿ ಯೋಗ್ಯವಲ್ಲದ ಬಂಜರು ಭೂಮಿ 17,75,688 ಹೆಕ್ಟೇರ್ ಬೀಳು ಭೂಮಿ ಹಾಗೂ 30,68,353 ಹೆಕ್ಟೇರ್ ಅರಣ್ಯ ಭೂಮಿ ಸರ್ಕಾರದ ವಶದಲ್ಲಿದೆ. ಸರ್ಕಾರದ ವಶದಲ್ಲಿರುವ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿಯಲ್ಲಿ ಕೇವಲ ಅರ್ಧದಷ್ಟನ್ನು ಭೂಹೀನ ಕೃಷಿ ಕೂಲಿಕಾರರ ಬದುಕಿನಲ್ಲಿ ಗಣನೀಯ ಬದಲಾವಣೆ ತರಲು ಸಾಧ್ಯವಿದೆ. ಹಾಗೇ ಮಾಡುವಾಗ ಶ್ರೀಮಂತರು ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಭೂಮಿಯನ್ನು ಅವರಿಂದ ನಿರ್ದಾಕ್ಷಿಣ್ಯವಾಗಿ ಸರ್ಕಾರ ವಶಪಡಿಸಿಕೊಂಡು ಬಡವರಿಗೆ ವಿತರಣೆ ಮಾಡಬೇಕಾಗಿದೆ.

ಕಂದಾಯ ಭೂಮಿ ಅಕ್ರಮ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಲು ನಮೂನೆ 53ರಲ್ಲಿ ಸಲ್ಲಿಸಲಾದ ಸಾವಿರಾರು ಅರ್ಜಿಗಳೆ ಇನ್ನೂ ಇತ್ಯರ್ಥವಾಗದೆ ಉಳಿದಿವೆ. ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ, ಸ್ವಜನಪಕ್ಷಪಾತ ನಡೆಯುತ್ತಿದ್ದು ಸರ್ಕಾರಿ ಭೂಮಿ ಅರ್ಹರಲ್ಲದವರ ಪಾಲಾಗುತ್ತಿದೆ. ಇಂತಹ ಸಮಿತಿಗಳಲ್ಲಿ ರೈತ ಸಂಘ, ಕೃಷಿ ಕೂಲಿಕಾರರ ಸಂಘಗಳ ಪ್ರತಿನಿಧಿಗಳನ್ನು ನೇಮಿಸುವಂತೆ ಸರ್ಕಾರವನ್ನು ಒತ್ತಾಯಿಸಬೇಕಾಗಿದೆ.

ಈ ನಡುವೆ, ಕಳೆದ ಕೆಲವು ದಶಕಗಳಿಂದ ಅರಣ್ಯ ಭೂಮಿಯಲ್ಲಿ ವಾಸ ಮಾಡುತ್ತಿರುವ ಹಾಗೂ ಸಾಗುವಳಿ ಮಾಡಿಕೊಂಡು ಬದುಕುತ್ತಿರುವ ಬಡವರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಆರಂಭವಾಗಿದೆ. ಅರಣ್ಯದಲ್ಲೇ ಹುಟ್ಟಿ, ಅರಣ್ಯದಲ್ಲೇ ಬೆಳೆದ ಆದಿವಾಸಿಗಳನ್ನು ಪರಿಸರ ರಕ್ಷಣೆಯ ಹೆಸರಿನಲ್ಲಿ ಅರಣ್ಯದಿಂದ ಹೊರಹಾಕುವ ಪ್ರಯತ್ನವೂ ನಡೆದಿದೆ. ಹಿಂದೆ ಹೆಚ್ಚು ಆಹಾರ ಬೆಳೆಯಿರಿ ಎಂಬ ಘೋಷಣೆಯ ಅಡಿಯಲ್ಲಿ ಸಾಗುವಳಿ ಮಾಡಲು ನೀಡಲಾದ ಕೃಷಿಯೋಗ್ಯ ಅರಣ್ಯ ಭೂಮಿಯನ್ನು ಸಹ ವಾಪಸ್ ಪಡೆಯಲಾಗುತ್ತಿದೆ.

ಸರ್ವೋಚ್ಚ ನ್ಯಾಯಾಲಯದ ಆದೇಶದ ಹೆಸರಿನಲ್ಲಿ 2002 ರಲ್ಲಿ ವಾಜಪೇಯಿ ಸರ್ಕಾರವು ಅರಣ್ಯಭೂಮಿ ಸಾಗುವಳಿದಾರರನ್ನು ಹೊರಹಾಕುವಂತೆ ಆದೇಶ ಹೊರಡಿಸಿತು. 1978 ರ ಪೂರ್ವದಿಂದ ಅರಣ್ಯ ಭೂಮಿಯಲ್ಲಿ ನೆಲೆಸಿರುವವರನ್ನು ಮತ್ತುಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸಬಾರದೆಂದು 1980 ರ ಅರಣ್ಯ ಸಂರಕ್ಷಣಾ ಕಾಯ್ದೆಯಲ್ಲಿ ಸ್ಪಷ್ಟಪಡಿಸಲಾಗಿದ್ದರೂ ದಾಖಲೆಗಳ ಕೊರತೆಯಿಂದ ಅತಿಕ್ರಮಣಕಾರರು ಅರಣ್ಯ ಇಲಾಖೆಯವರ ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾರೆ. ನಲ್ವತ್ತು ಐವತ್ತು ವರ್ಷಗಳಿಂದ ಬೆಳೆಸಿಕೊಂಡು ಬರಲಾದ ಅಡಿಕೆ, ತೆಂಗು ಮೊದಲಾದ ಮರಗಳನ್ನು, ಹತ್ತಿ ಮೊದಲಾದ ವಾಣಿಜ್ಯ ಬೆಳೆಗಳನ್ನು ನಾಶ ಮಾಡಲಾಗುತ್ತಿದೆ. ಅರಣ್ಯ ನಾಶದ ಸುಳ್ಳು ಆರೋಪಗಳನ್ನು ಹೊರಿಸಿ ನ್ಯಾಯಾಲಯಗಳಿಗೆ ಅಲೆದಾಡಿಸಲಾಗುತ್ತಿದೆ. ಅರಣ್ಯ ಭೂಮಿ ಅತಿಕ್ರಮಣ ಪ್ರಕರಣಗಳನ್ನು ಪರಿಶೀಲಿಸಲು ತಾಲ್ಲೂಕು ಮಟ್ಟದ ಸಮಿತಿಗಳ ರಚನೆ ಕೆಲವು ಕಡೆ ನಡೆದರೂ ವಿಧಾನಸಭಾ ಚುನಾವಣೆಗಳ ನಂತರ ಆ ಪ್ರಕ್ರಿಯೆ ಮುಂದುವರೆಯಲಿಲ್ಲ. ಹೊಸದಾಗಿ ಸಮಿತಿಗಳ ರಚನೆಯಾಗಬೇಕಾಗಿದೆ. ಕೃಷಿಯೋಗ್ಯ ಅರಣ್ಯಭೂಮಿಯನ್ನು ಭೂಹೀನ ಬಡವರಿಗೆ ವಿತರಣೆ ಮಾಡಲು ಸಾಧ್ಯವಾಗುವಂತೆ ಅರಣ್ಯ ಸಂರಕ್ಷಣಾ ಕಾಯ್ದೆಗೆ ಅಗತ್ಯ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಾಯ ತರಬೇಕಾಗಿದೆ. ಅರಣ್ಯಭೂಮಿ ಫಲಾನುಭವಿಗಳು ತಮಗೆ ನೀಡಲಾದ ಅರಣ್ಯಭೂಮಿಯ ಸ್ವಲ್ಪ ಭಾಗದಲ್ಲಿ ಮರಗಳನ್ನು ಬೆಳೆಸುವುದನ್ನು ಕಡ್ಡಾಯಗೊಳಿಸಬಹುದು.

ಕರ್ನಾಟಕದಲ್ಲಿ ಕೆಲವು ವರ್ಷಗಳ ಹಿಂದೆ ಅರಣ್ಯ ಬೆಳೆಸುವ ಹೆಸರಿನಲ್ಲಿ 'ಸಿ' ಮತ್ತು 'ಡಿ' ವರ್ಗದ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿತ್ತು. ಇಂತಹ ಭೂಮಿಯನ್ನು ಅರಣ್ಯ ಇಲಾಖೆಯಿಂದ ವಾಪಸ್ ಪಡೆದು ಭೂಹೀನ ಬಡವರಿಗೆ ವಿತರಣೆ ಮಾಡಬೇಕು ಎಂದು ಒತ್ತಾಯಿಸಬೇಕಾಗಿದೆ. ಅದರಂತೆಯೇ ನೂರಾರು ವರ್ಷಗಳ ಹಿಂದೆ ಕಾರಣಾಂತರದಿಂದ ಜನವಸತಿ ನಷ್ಟವಾಗಿ ಹಾಳುಬಿದ್ದ ಅನೇಕ ಬೇಚಿರಾಕ್ ಗ್ರಾಮಗಳಿವೆ. ಈ ಗ್ರಾಮಗಳ ಹಾಳಾದ ಬಾವಿಗಳು, ದೇವಾಲಯಗಳು ಹಿಂದೆ ಇದ್ದ ಜನ ವಸತಿಯ ಕುರುಹುಗಳಾಗಿ ಉಳಿದುಕೊಂಡಿವೆ. ಇಂತಹ ಗ್ರಾಮಗಳ ಸಾವಿರಾರು ಹೆಕ್ಟೇರ್ ಕಂದಾಯ ಭೂಮಿ ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟಿದೆ. ಜನಸಂಖ್ಯೆ ಹೆಚ್ಚಾಗಿರುವ ಈ ಕಾಲದಲ್ಲಿ ಅಂತಹ ಬೇಚರಾಕ ಗ್ರಾಮಗಳ ಪುನರ್ನಿರ್ಮಾಣ ಮಾಡುವಂತೆಯೂ ಅಂತಹ ಗ್ರಾಮಗಳ ಭೂಮಿಯನ್ನು ಅರಣ್ಯ ಇಲಾಖೆಯಿಂದ ವಾಪಸ್ ಪಡೆದು ಭೂಹೀನ ಕೃಷಿಕೂಲಿಕಾರರಿಗೆ ವಿತರಣೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಬೇಕಾಗಿದೆ.

○

## ವಿಶ್ವ ವಿದ್ಯಾರ್ಥಿ-ಯುವಜನ ಉತ್ಸವ, ವೆನಿಜುವೆಲಾ 2005

# ವಿಶ್ವದಾದ್ಯಂತ ಮಾನವೀಯ ಮೌಲ್ಯ ಹರಡಲು ನಡೆದ ವಿಶ್ವಹಬ್ಬ

16th World Festival of Youth and Students
VENEZUELA
august 2005

**ಜಗತ್ತಿನ ಮೇಲೆ ನಗ್ನ ದುರಾಕ್ರಮಣಗಳನ್ನು ನಡೆಸುತ್ತಾ, ಯುದ್ಧಕೋರತನವನ್ನು ಮೆರೆಯುತ್ತಿರುವ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧ ಶಾಂತಿ-ಸೌಹಾರ್ದತೆ ಹಾಗೂ ಯುದ್ಧ ವಿರೋಧಿ ಘೋಷಣೆಗಳೊಂದಿಗೆ ವಿಶ್ವ ಸಾಮ್ರಾಜ್ಯಶಾಹಿ ವಿರೋಧಿ ಯುವ ಜನೋತ್ಸವವು ಆಗಸ್ಟ್ 7 ರಿಂದ 15, 2005 ರವರೆಗೆ ಅಮೆರಿಕಾದ ಹಿತ್ತಲು ಎಂದೇ ಪರಿಗಣಿಸಲಾದ ದಕ್ಷಿಣ (ಲ್ಯಾಟಿನ್) ಅಮೆರಿಕದ ವೆನಿಜುವೆಲಾ ದೇಶದ ರಾಜಧಾನಿ ಕಾರಕಸ್‌ನಲ್ಲಿ ನಡೆಯಿತು. ವಿಶ್ವದ ಎಲ್ಲಾ ಖಂಡಗಳಿಂದ, 140 ದೇಶಗಳಿಂದ ಬಂದ ಯುವಜನರು ಈ ಐತಿಹಾಸಿಕ ಉತ್ಸವದಲ್ಲಿ ಪಾಲ್ಗೊಂಡು ಜಾಗತೀಕರಣ-ಸಾಮ್ರಾಜ್ಯಶಾಹಿ ವಿರೋಧಿ, ಯುದ್ಧ ವಿರೋಧಿ ಹೋರಾಟಗಳ ಅನುಭವಗಳನ್ನು ಹಂಚಿಕೊಂಡಿದ್ದಾರೆ. ವಿಶ್ವಬ್ಯಾಂಕ್ - ಐಎಂಎಫ್ - ಡಬ್ಲ್ಯುಟಿಓ ಪ್ರೇರಿತ ಜಾಗತೀಕರಣ ನೀತಿಗಳನ್ನು ತಲೆಕೆಳಗು ಮಾಡಿ ಜನಪರ ನೀತಿಗಳ ಹಾದಿಯಲ್ಲಿ ನಡೆದಿರುವ - ಜಾಗತೀಕರಣ ವಿರೋಧಿ ಹೋರಾಟದ ಸ್ಫೂರ್ತಿಬಿಂದುವೂ ಆಗಿರುವ ವೆನಿಜುವೆಲಾದಲ್ಲಿ ನಡೆದಿರುವ ಈ ಉತ್ಸವದಲ್ಲಿ ಪಾಲ್ಗೊಂಡ ಎಸ್ಎಫ್ಐ ರಾಜ್ಯಾಧ್ಯಕ್ಷ ಬಿ.ರಾಜಶೇಖರಮೂರ್ತಿ ಅವರ ಲೇಖನ...**

---

ವಿಶ್ವ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಬ್ಲ್ಯು.ಎಫ್.ಡಿ.ವೈ.) ನೇತೃತ್ವದಲ್ಲಿ ಅತ್ಯಂತ ಸಂಭ್ರಮದಿಂದ ವಿಶ್ವ ವಿದ್ಯಾರ್ಥಿ-ಯುವಜನ ಉತ್ಸವ 'ಯುದ್ಧ ವಿರೋಧಿ ಶಾಂತಿ ಸೌಹಾರ್ದತೆಗಾಗಿ' ಎಂಬ ಘೋಷಣೆಯೊಂದಿಗೆ ಲ್ಯಾಟಿನ್ ಅಮೇರಿಕದ ವೆನಿಜುವೆಲಾ ದೇಶದ ಕಾರಕಸ್ ನಗರದಲ್ಲಿ ಆಗಸ್ಟ್ 7 ರಿಂದ 15ರವರೆಗೆ ನಡೆಯಿತು.

ಪ್ರತಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವಂತೆ ಈ ಬಾರಿಯೂ ನಡೆದ ವಿಶ್ವ ಹಬ್ಬ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಾರರಲ್ಲಿ ಹೊಸ ಹುರುಪು ಹುಟ್ಟಿಸಿದೆ. ಹೊಸ ಕ್ರಾಂತಿಕಾರಿ ಉತ್ಸಾಹವನ್ನು ಪ್ರಪಂಚದಾದ್ಯಂತ ಹರಡಿದೆ. 20 ಸಾವಿರಕ್ಕಿಂತ ಹೆಚ್ಚು ಸಂಖ್ಯೆಯಲ್ಲಿದ್ದ ಪ್ರತಿನಿಧಿಗಳು 140 ದೇಶಗಳನ್ನು ಪ್ರತಿನಿಧಿಸಿದ್ದರು.

ವೆನಿಜುವೆಲಾ ರಾಷ್ಟ್ರಗೀತೆಯೊಂದಿಗೆ ಉದ್ಘಾಟನೆಗೊಂಡ ಉತ್ಸವ ಕಣ್ಮನಗಳನ್ನು ಸೆಳೆಯುತ್ತಲೇ ನಾವು ಸೇರಿದ ಉದ್ದೇಶ- ಬದ್ಧತೆಗಳ ದೃಢತೆಯನ್ನು ಹೆಚ್ಚಿಸಿತ್ತು. ತಮ್ಮ ತಾಯಿನಾಡಿನ ಬಡ ಶೋಷಿತ ಜನತೆಯ ವಿಮೋಚನೆಗಾಗಿ ಶ್ರಮಿಸಿದ ಜನ ನಾಯಕರನ್ನು ನೆನಪಿಸುವ ಸಂದರ್ಭವೂ ಇದಾಗಿತ್ತು. ಅದೇ ರೀತಿಯಲ್ಲಿ ವೈವಿಧ್ಯಮ ರೀತಿಯಲ್ಲಿ ವೆನಿಜುವೆಲಾ ದೇಶದ ಪಾರಂಪಾರಿಕ ಸಾಂಸತಿಕ ಆಚರಣೆಗಳ ಸೊಬಗು ಪ್ರದರ್ಶಿಸಲಾಯಿತು. ಜಾತಿ - ಭಾಷೆ- ದೇಶಗಳ ಗಡಿ ದಾಟಿ ಮನುಷ್ಯರು ನಾವೆಲ್ಲಾ ಒಂದೇ, ಯುದ್ಧ ಬೇಡ - ಶಾಂತಿ ಬೇಕು. ಸಾಮ್ರಾಜ್ಯಶಾಹಿ ಯುದ್ಧ ಪಿಶಾಚಿಗಳಿಗೆ ಧಿಕ್ಕಾರವೆಂಬ ಘಂಟಾಘೋಷದೊಂದಿಗೆ ಆರಂಭವಾದ ಅಂತರ ರಾಷ್ಟ್ರೀಯ ಉತ್ಸವ ಉದ್ಘಾಟನೆ ವೆನಿಜುವೆಲಾ ಅಧ್ಯಕ್ಷ ಹ್ಯೂ-ಗೋ- ಛಾವೇಜ್‌ರವರಿಂದ.

### ಉತ್ಸಾಹಭರಿತ - ಥಲಭರಿತ ಉದ್ಘಾಟನಾ ಭಾಷಣ ಛಾವೇಜ್‌ರವರಿಂದ

ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಸ್ಫೂರ್ತಿ ಬಿಂದು ವೆನಿಜುವೆಲಾ ಅಧ್ಯಕ್ಷರಾದ ಛಾವೇಜ್‌ರವರು ತಮ್ಮ ಅಂತರಾಳದಿಂದ ಪ್ರೀತಿ-ಆತ್ಮೀಯತೆಯಿಂದ ಪ್ರತಿನಿಧಿಗಳನ್ನು ಸ್ವಾಗತಿಸಿ, ಮನುಷ್ಯರಿಗೆ ಬೇಕಿರುವುದು ಶಾಂತಿ-ಪ್ರೀತಿ - ಅನುಕಂಪ. ಹಿಂಸೆಯಲ್ಲ, ಯುದ್ಧವಲ್ಲ ಸೌಹಾರ್ದತೆ. ಇಂಥ ಮಹತ್ತರ ಸಾಧನೆಯನ್ನು ಸಾಧಿಸೋಣ. ಮಾನವೀಯ ಸಮಾಜವನ್ನು ನಿರ್ಮಿಸೋಣ. ರಾಜಕೀಯ ಸ್ವಾತಂತ್ರ್ಯ ನಿಜವಾದ ಪ್ರಜಾಪ್ರಭುತ್ವವನ್ನು ನೀಡುತ್ತದೆ. ಅದೇ ರೀತಿಯಲ್ಲಿ ಬಂಡವಾಳ ಶಾಹಿ ಪದ್ಧತಿಯನ್ನು ನಾಶಗೊಳಿಸಿ ಆರ್ಥಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಬೇಕಿದೆ. ಪ್ರಪಂಚದಾದ್ಯಂತ ಅಮೇರಿಕಾ ದೇಶದ ಸಾಮ್ರಾಜ್ಯಶಾಹಿ ಒತ್ತಡವನ್ನು, ಧಾಳಿಯನ್ನು ಎದುರಿಸುತ್ತಿದ್ದೇವೆ. ಆರ್ಥಿಕ, ಮಿಲಿಟರಿ, ಶಿಕ್ಷಣ, ವಿಜ್ಞಾನ-ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಅದು ತನ್ನ ಕಪಿಮುಷ್ಠಿಯನ್ನು ಚಾಚುತ್ತಿದೆ. ಆದರೆ ನಾವು ವೆನಿಜುವೆಲಾದ ಕಾರಕರಸ್‌ನಲ್ಲಿ ವಿಶ್ವವನ್ನೇ ಪ್ರತಿನಿಧಿಸಿ ಒಂದೆಡೆ ಸೇರಿರುವ ನಾವು-ನೀವೆಲ್ಲಾ ಸೇರಿ ಸಾರಿ ಹೇಳೋಣ, ಅಮೇರಿಕಾದ ರಾಕ್ಷಸ ನೀತಿಯನ್ನು ಖಂಡಿಸೋಣ. ಮಾನವೀಯ ಮೌಲ್ಯ-ಸಮಾಜವಾದವನ್ನು ಸಾಧಿಸೋಣ ಎಂದರು, ಅದೇ ರೀತಿಯಲ್ಲಿ ಪ್ರಗತಿಪರ ಹೋರಾಟ ಗಾರರಾಗಿ ಪ್ರಾಣತ್ಯಾಗ ಮಾಡಿದ ಮಹನೀಯ ಕ್ರಾಂತಿಕಾರರನ್ನು ನೆನಪಿಸಿಕೊಂಡರು. ಅಮಾನವೀಯ ಕೃತ್ಯವೆಸಗಿದ




ಅಮೇರಿಕಾ ದೇಶ ಘೋರ ಧಾಳಿ ನಡೆಸಿ 60 ವರ್ಷಗಳು ಕಳೆದರೂ ಇಂದಿಗೂ ಹೃದಯ ಕರಗುವಂತಹ, ಕಣ್ಣೀರು ತರುವಂತಹ ಕುರುಹುಗಳು ಹಿರೋಶಿಮಾ ನಾಗಸಾಕಿಯಲ್ಲಿ ಕಾಣುತ್ತಿದ್ದೇವೆ. ಆ ಸಂದರ್ಭದಲ್ಲಿ ಅಸುನೀಗಿದ ಜನತೆಯನ್ನು ಸ್ಮರಿಸೋಣ. ಇಂಥ ಕೃತ್ಯಕ್ಕೆ ಕಾರಣವಾದ ಭಯೋತ್ಪಾದಕರನ್ನು ಹಿಮ್ಮೆಟ್ಟಿಸೋಣ. ಇದೇ ರೀತಿಯಲ್ಲಿ ಅಮೆರಿಕಾ ದೇಶ ವೆನಿಜುವೆಲಾ ದೇಶದ ವಿರುದ್ಧ ಸಂಚು ಹೂಡುತ್ತಿದೆ. ಪ್ರಪಂಚದ ವಿವಿಧೆಡೆಯಿಂದ ಬಂದಿರುವ ನೀವು ಯುವ ಜನರಿದ್ದೀರಿ, ನಿಮ್ಮಂತೆಯೇ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ವ್ಯಕ್ತಿ ಸೈಮನ್ ಬೊಲಿವೆರ್ ಅವರ ಉದ್ದೇಶವನ್ನು ನಾವು ಕಾರಕಸ್ ಜನ ಈಡೇರಿಸುತ್ತೇವೆಂದರು.




ಅದೇ ರಿತಿಯಲ್ಲಿ 6 ದಶಕಗಳ ಅನುಭವವಿರುವ ಯುವಜನ ಸಂಘಟನೆ ಯಾದ ನಿಮಗೆ ಪ್ರಪಂಚದ ಇತಿಹಾಸ ಗೊತ್ತಿದೆ. 2 ನೇ ಮಹಾಯುದ್ಧದ ನಂತರ ಚೈನಾ ಮತ್ತು ಕ್ಯೂಬಾದಲ್ಲಿ ಕ್ರಾಂತಿಯಾದದ್ದು. ಅದೇ ರೀತಿಯಲ್ಲಿ ಪ್ರಪಂಚದ ಯುವಜನತೆಗೆ ಆಶಾಕಿರಣವಾದ ಜನನಾಯಕ ಚೆಗುವೇರಾ ಕ್ಯೂಬಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀಮಂತ. ಅದೇ ರೀತಿಯಲ್ಲಿ ತಮ್ಮ ದೇಶದ ಜನರ ಸ್ವಾತಂತ್ರ್ಯಕ್ಕಾಗಿ, ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಿದ ಕ್ರಾಂತಿಕಾರರನ್ನು ನೆನೆದರಲ್ಲದೆ ನಮ್ಮ ಮುಂದಿನ ಗುರಿಗೆ ಸ್ಪಷ್ಟ ದಾರಿಯನ್ನು ನೀಡಿದರು. ಅಮೇರಿಕಾ ಮತ್ತಿತರ ದುಷ್ಟ ಸಾಮ್ರಾಜ್ಯಶಾಹಿ ಶಕ್ತಿಗಳ ದೃಷ್ಟಿಕೋನದ ಹುರುಳನ್ನು ತೆರೆದಿಟ್ಟರು. ಪ್ರಪಂಚ ನಮ್ಮದು-ಜನರದ್ದು, ಅದನ್ನು ಯಾರಿಂದಲೂ ಕಸಿಯಲು ಸಾಧ್ಯವಿಲ್ಲ. ಅದು ಯಾರು ಜನರ ಹಿತಕ್ಕಾಗಿ ಶ್ರಮ ಪಡುತ್ತಾರೋ ಅವರದ್ದು. ಹೊಸ ಪ್ರಪಂಚದ ಗುರಿ- ಉತ್ಸಾಹ, ಶಕ್ತಿ ಹೊಂದಿರುವ ಯುವಜನ ಸಮೂಹವೇ ಮುನ್ನೆಡೆಯಿರಿ, ಸಾಧನಗೈಯಲಿಕ್ಕೆ ಒಂದಾಗಿ. ಹಿರಿಯರ ಆಶಯಗಳ ಈಡೇರಿಕೆಗೆ ಕನಸುಗಳನ್ನು ನನಸು ಮಾಡಲಿಕ್ಕೆ ಎಂಬ ಉದ್ವೇಗದ ಭಾವೋದ್ವೇಗದ ಮಾತುಗಳು ಛಾವೇಜ್‌ರವರಿಂದ ಬರುತ್ತಿದ್ದಂತೆಯೇ ಯುವಜನರ ಪ್ರತಿಸ್ಪಂದನದ ಧ್ವನಿ ಮುಗಿಲು ಮುಟ್ಟಿತು. ದೇಶ ದೇಶಗಳ ಗಡಿದಾಟಿ ಧಾವಿಸಿದ್ದ ಯುವಜನರಲ್ಲಿ ದೇಶ, ಜಾತಿ, ಭಾಷೆ ಮೀರಿದ ಮನಸ್ಸು ಮನಸ್ಸುಗಳ ಬೆಸುಗೆಯಾಗಿತ್ತು. ಬಿಡಿಸದ ಬಂಧನವಾಗಿತ್ತು ಆ ಸಂದರ್ಭ. ಯುದ್ಧ ಸಾರುವ ಕ್ರೂರ ಶಕ್ತಿಗಳಿಗೆ ಆ ಗಟ್ಟಿತನ ಒಂದು ಎಚ್ಚರಿಕೆಯಾಗಿತ್ತು. ಶಾಂತಿಗಾಗಿ ಪ್ರಾಣತ್ಯಾಗಕ್ಕೆ ಸಿದ್ಧವೆಂಬ ಘೋಷಣೆ ಯುವ ಕಂಠಗಳಿಂದ ಹೊರ ಹೊಮ್ಮಿತ್ತು.



ಭಾರತದ ಪ್ರತಿನಿಧಿಗಳ ತಂಡ

ಎಲ್ಲರ ಚಪ್ಪಾಳೆ, ಕರತಾಡನ, ಸಮಾಜವಾದ ಚಿರವಾಗಲಿ, ಸಾಮ್ರಾಜ್ಯಶಕ್ತಿ ಅಳಿಯಲಿ ಎಂಬ ಘೋಷಣೆಗಳ ನಡುವೆಯೇ ಮತ್ತೆ ಛಾವೇಜ್ ರವರಿಂದ ಭಾಷಣ ಪ್ರಾರಂಭ. ಇಂತಹ ಐತಿಹಾಸಿಕ ವಿಶ್ವ ಯುವಜನ ಸಮ್ಮೇಳನ ನಡೆಸಲು ಹಗಲಿರುಳು ದುಡಿದ ವೆನಿಜುವೆಲಾ ರಾಷ್ಟ್ರದ ಸಿದ್ಧತಾ ಸಮಿತಿಯನ್ನು ಶ್ಲಾಘಿಸಿದರು. ಅಭಿನಂದಿಸಿದರು, ಹಾರೈಸಿದರು, ಹೊಗಳಿದರು.

ಆನಂತರದಲ್ಲಿ, ವಿವಿಧ ರಾಷ್ಟ್ರಗಳ ಸಾಂಸತಿಕ ಕಾರ್ಯಕ್ರಮಗಳ ಆರಂಭ ಒಂದೇ ವೇದಿಕೆಯಲ್ಲಾ ಹಲವಾರು, ಅಂದರೆಷ್ಟೋ ನೂರಾರು. ನೆರೆದಿದ್ದ ಜನರೆಲ್ಲಾ ನೋವು, ದುಃಖ ಮರೆತು ಒಂದೇ ಉದ್ದೇಶಕ್ಕಾಗಿ ಹಾಡುತ್ತಿದ್ದ, ಕುಣಿಯುತ್ತಿದ್ದ, ಸಂಭ್ರಮಿಸುತ್ತಿದ್ದ ದೃಶ್ಯ ಶಾಂತಿ- ಸೌಹಾರ್ದತೆಯ ಪ್ರತೀಕವೇ ಆಗಿತ್ತು. ತನ್ನ ತನ್ನ ದೇಶದ ಪರಂಪರೆ ಸಾಂಸತಿಕ ಜೀವಂತ ಆಚರಣೆಯ ಅನುಭವಗಳ ಮಹಾಪೂರ. ಆ ದಿನ , ಆ ಕ್ಷಣಗಳು, ಅದು ವಿಶ್ವ ವಿದ್ಯಾರ್ಥಿ, ಯುವಜನ ಉತ್ಸವದ ಉದ್ಘಾಟನಾ ದಿನ. ಕೇವಲ ಎರಡು ಮುಕ್ಕಾಲು ಕೋಟಿ ಜನತೆಯನ್ನು ಹೊಂದಿರುವ ವೆನಿಜುವೆಲಾ ರಾಣಿ ಇಡೀ ತನ್ನ ದೇಶದ ಜನರೆಲ್ಲಾ ವಿಶ್ವ ಉತ್ಸವದಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಂಡಿದ್ದರು. ಬಡ, ಶ್ರೀಮಂತರ ನಡುವೆ ಅಜಗಜಾಂತರ ವ್ಯತ್ಯಾಸವಿದ್ದರೂ ಇಡಿಯಾಗಿ ವೆನಿಜುವೆಲಾ ಜನತೆ ವಿಶ್ವವಿದ್ಯಾರ್ಥಿ, ಯುವಜನ ಉತ್ಸವವನ್ನು ನಾಡಹಬ್ಬವನ್ನಾಗಿ ಆಚರಿಸಿದರು. ಉತ್ಸವ ನಡೆದ ಕಾರಕಸ್ ನಗರದಲ್ಲಷ್ಟೇ ಅಲ್ಲ ಇಡೀ ವೆನಿಜುವೆಲಾ ದೇಶವೇ ಸಡಗರ ಸಂಭ್ರಮದಿಂದ ಹಬ್ಬವನ್ನು ಆಚರಿಸಿತ್ತು.

ಒಟ್ಟು ಅಧಿಕೃತವಾಗಿ 9 ದಿವಸ ಕಾಲ ಹಲವಾರು ವಿಚಾರ ಸಂಕಿರಣಗಳು, ಸಮ್ಮೇಳನಗಳು, ತರಬೇತಿ ಶಿಬಿರಗಳು, ಚಲನಚಿತ್ರ ಪ್ರದರ್ಶನಗಳು, ನಾಟಕ ಪ್ರದರ್ಶನಗಳು, ಕಿರುಚಿತ್ರ ಪ್ರದರ್ಶನಗಳು, ವಸ್ತು ಪ್ರದರ್ಶನ. ದಿನವೆಲ್ಲಾ, ರಾತ್ರಿಯೆಲ್ಲಾ ಸಾಂಸತಿಕ ಕಾರ್ಯಕ್ರಮಗಳು. ಒಂದೇ ಬಾರಿ, ಒಂದೇ ಸಮಯ ಹಲವಾರು ಕಡೆ ಹಲವಾರು ರೀತಿಯ ಕಾರ್ಯಕ್ರಮಗಳು.

ಮಾನವ ಅನಾರೋಗ್ಯಕ್ಕೆ ಔಷಧಿಗಳನ್ನು ಸಂಶೋಧಿಸುವ ರೀತಿಯಲ್ಲೇ ಪ್ರಪಂಚದಲ್ಲಿ ಬಹುತೇಕ ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಕಂಡುಹಿಡಿಯಲು ಮುನ್ನುಗ್ಗಲು ನಡೆದ ಕಮ್ಮಟಗಳು ಒಂದಾ, ಎರಡಾ, ಅಲ್ಲ ನೂರಾರು. ಲ್ಯಾಟೀನ್ ಅಮೇರಿಕಾದ ದೇಶಗಳ ಕಡೆ ಸಂಪರ್ಕ ಭಾಷೆ ಸ್ಪಾನಿಸ್. ಇಂಗ್ಲೀಷ್ ಅಲ್ಲ, ಇಂಗ್ಲೀಷ್ ಲ್ಯಾಟಿನ್ ಅಮೇರಿಕಾ ದೇಶದಲ್ಲಿ ಇಲ್ಲವೆಂದೇ ಹೇಳಬೇಕು. ಆದರೂ ವಿಚಾರ ಸಂಕಿರಣ ಉಪನ್ಯಾಸಗಳಲ್ಲಿ ಇಂಗ್ಲೀಷ್‌ಗೆ ಭಾಷಾಂತರಿಸುವ ವ್ಯವಸ್ಥೆ ಇತ್ತು. ಯಾವ, ಯಾವ ವಿಷಯಗಳ ಬಗ್ಗೆ ಕಾರ್ಯಕ್ರಮಗಳು ಎಂದರೆ, ಯಾವ ವಿಷಯಗಳ ಬಗ್ಗೆ ಇರಲಿಲ್ಲ ಎಂಬುದೇ ಗೊತ್ತಾಗಲಿಲ್ಲ. ಶಿಕ್ಷಣ, ಉದ್ಯೋಗ, ಕೃಷಿ, ಕೈಗಾರಿಕೆಗಳ ಪರಿಸ್ಥಿತಿ, ಕಾರ್ಮಿಕರ ಬವಣೆ, ವಿವಿಧ ದೇಶಗಳ ಮೇಲೆ ಸಾಮ್ರಾಜ್ಯಶಾಹಿ ದೇಶದ ದಾಳಿಗಳ ಹುನ್ನಾರ, ಸಮಾಜವಾದಿ ರಾಷ್ಟ್ರಗಳ ಮುನ್ನಡೆ ಹೀಗೆ.... ಜನರ ಬಡತನ, ಅನಕ್ಷರತೆ, ಅಭದ್ರತೆ, ಕಾರಣ, ಉದ್ದೇಶ, ಮಹಿಳೆಯರ ಮೇಲೆ ದೌರ್ಜನ್ಯ, ಅಶ್ಲೀಲತೆ, ಸ್ವಾತಂತ್ರ್ಯ, ಮಕ್ಕಳ ಬಗ್ಗೆ, ಉನ್ನತ ಶಿಕ್ಷಣ, ಶಿಕ್ಷಣ ವ್ಯಾಪಾರೀಕರಣ, ಶಿಕ್ಷಣ ನಿರಾಕರಣೆ, ಡಬ್ಲ್ಯು.ಟಿ.ಓ., WORLD BANK, IMF ನೀತಿಗಳು, ರೈತರ, ಕೃಷಿಕೂಲಿಕಾರರ, ನಿರ್ಗತಿಕರ ಪರಿಸ್ಥಿತಿ, ವಿವಿಧ ದೇಶಗಳ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಮುಂತಾದ ಎಲ್ಲ ರೀತಿಯ ವಿಚಾರ ವಿನಿಮಯ. ವೆನಿಜುವೆಲಾ ಸ್ವಾತಂತ್ರ್ಯ ಚಳುವಳಿ, ಕ್ಯೂಬಾ ಕ್ರಾಂತಿ, ವಿಯಟ್ನಾಂ ಬಗ್ಗೆ, ವಿವಿಧ ದೇಶಗಳ ಸಾಂಸತಿಕ ಮಜಲುಗಳ ಬಗ್ಗೆ ಒಂದೇ ಬಾರಿಗೆ ಹಲವಾರು, ಹಲವಾರು ಕಡೆ.

### ವಿಶ್ವ ವಿದ್ಯಾಲಯಗಳಲ್ಲೂ ಉನ್ನತ ಮಟ್ಟದ ವಿಚಾರ ಸಂಕಿರಣಗಳು, ತರಬೇತಿ ಶಿಬಿರಗಳು

ವಿವಿಧ ದೇಶಗಳ ಉನ್ನತ ಅಧ್ಯಯನ ಮಾಡುವ ವಿದ್ಯಾರ್ಥಿ, ಪ್ರತಿನಿಧಿಗಳು ತಮ್ಮ ದೇಶದ ಶಿಕ್ಷಣ ಪರಿಸ್ಥಿತಿ, ಸರ್ಕಾರದ ನೀತಿಗಳು, ಬಹುಸಂಖ್ಯಾತ ಯುವಜನತೆ ಶಿಕ್ಷಣ ವಂಚಿತಗೊಂಡಿರುವ ಬಗ್ಗೆ ಸಂಶೋಧನಾ ವರದಿಗಳು, ವಿಷಯಗಳು.

ವೆನಿಜುವೆಲಾ ದೇಶದಲ್ಲಿ ಸಾಮ್ರಾಜ್ಯಶಾಹಿಗಳ ಅಟ್ಟಹಾಸ ಹಾಗೂ ನಿರಂತರವಾದ ಅಮೆರಿಕಾ ದೇಶದ ಕುತಂತ್ರದ ಬಗ್ಗೆ ಅದರ ಕ್ರೂರ ಮುಖಗಳ ಬಗ್ಗೆ ಸಮಾಜದ ಅನಕ್ಷರಸ್ತ ಪ್ರಜೆಗೂ ತಿಳಿದಿದೆ. ಅದೇ ರೀತಿಯಲ್ಲಿ ಸಮಾಜವಾದ ಎಂದರೇನು ಅದರ ಉದ್ದೇಶವೇನೆಂದು ಒಬ್ಬ ಸಾಮಾನ್ಯ ಗೃಹಿಣಿಗೂ ತಿಳಿದಿದೆ. ಬಂಡವಾಳಶಾಹಿಗಳ ಬಲಿಪಶುಗಳಾಗಿದ್ದ ಜನತೆ ಈಗ ಸ್ವಲ್ಪಮಟ್ಟಿಗೆ ಸ್ವತಂತ್ರವಾಗಿ ಉಸಿರಾಡುತ್ತಿದ್ದಾರೆ. ಮಾನವೀಯ ಮೌಲ್ಯವಳ್ಳ ಹೊಸ ದಾರಿಯಲ್ಲಿ ಹೊರಟಿದ್ದಾರೆ. ಛಾವೇಜ್‌ರವರು ಆಡಳಿತದಲ್ಲಿ ಶಿಕ್ಷಣ, ಆರೋಗ್ಯ, ಬಡತನ ನಿವಾರಣೆ ಇತ್ಯಾದಿ ರಂಗಗಳಲ್ಲಿ ಗಮನಾರ್ಹಪ್ರಗತಿ, ಅಭಿವೃದ್ಧಿ ಕೆಲಸ ನಡೆಯುತ್ತಿದೆ. ಪ್ರತಿಯೊಬ್ಬ ನಾಗರೀಕನಿಗೂ ಅಕ್ಷರ ಜ್ಞಾನ ನೀಡುವ ಪ್ರಯತ್ನ ಮಕ್ಕಳಿಗಳಿಗಂತೂ ಶಿಕ್ಷಣ ಪಡೆಯುವುದು ಕಡ್ಡಾಯ. ಒಟ್ಟಾರೆ ಜಗತ್ತಿಗೆ ಅಗತ್ಯವಾದಂತಹ ಶಾಂತಿ, ಸೌಹಾರ್ದತೆ, ವಿಶ್ವಾದ್ಯಂತ ಚಳುವಳಿ ಬಲಪಡಿಸುವ ನಿಟ್ಟಿನಲ್ಲಿ ಸಂಘಟಿಸಿದ ವಿಶ್ವ ಉತ್ಸವ ಮಹಾ ಐತಿಹಾಸಿಕ. ಅಚ್ಚಳಿಯದೆ ಉಳಿಯುವ ನೆನಪುಗಳು.


# ಮಹಿಳಾ ಮೀಸಲಾತಿ: ಬಿಜೆಪಿ ಗೋಸುಂಬೆತನ ಬಯಲು

**ಆಗಸ್ಟ್ 26 ರಂದು ಬೆಂಗಳೂರಿನಲ್ಲಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಸುದ್ದಿಗೋಷ್ಠಿಯಲ್ಲಿ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತ ಪಕ್ಷದ ನಿಲುವು ವಿವರಿಸಿದರು. ಆ ಬಗ್ಗೆ ಸಂಕ್ಷಿಪ್ತ ವರದಿ.**

**ಮಹಿಳಾ ಮೀಸಲಾತಿ :** ಸಂಸತ್ತು ಹಾಗೂ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33 ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಒಮ್ಮತಾಭಿಪ್ರಾಯ ರೂಪಿಸುವ ಹೆಸರಿನಲ್ಲಿ ಇನ್ನಷ್ಟು ದಿನ ಮುಂದೂಡಬಾರದು. ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಅದನ್ನು ಮಂಡಿಸಬೇಕು. ಇದರಿಂದಾಗಿ ಮಹಿಳಾ ಮೀಸಲಾತಿ ವಿಚಾರದಲ್ಲಿ ಯಾರ ನಿಲುವು ಏನೆಂಬುದು ಸ್ಪಷ್ಟವಾಗುತ್ತದೆ ಎಂದರು. ಈ ವಿಚಾರದಲ್ಲಿ ಬಿಜೆಪಿ ತನ್ನ ನಿಲುವು ಬದಲಾಯಿಸಿದೆ. ಸ್ಥಾನಗಳಿಗೆ ಮೀಸಲಾತಿ ಎಂಬ ತನ್ನ ಹಿಂದಿನ ನೀತಿಗೆ ಬದಲಿಗೆ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳಲ್ಲಿ ಶೇ.33 ರಷ್ಟು ಮಹಿಳಾ ಮೀಸಲಾತಿ ನೀಡಬೇಕೆನ್ನುತ್ತಿದೆ. ರಾಜಕೀಯ ಪಕ್ಷಗಳು ತಾವು ಸೋಲುವ ಸಾಧ್ಯತೆ ಇರುವ ಕಡೆಗಳಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ನೀಡುವ ಅಪಾಯವಿದೆ. ಬಿಜೆಪಿ ಗೋಸುಂಬೆತನ ಇದರಿಂದ ಬಯಲಾಗಿದೆ ಎಂದು ಪ್ರಕಾಶ್ ಕಾರಟ್ ತಿಳಿಸಿದರು.

**ನಕ್ಸಲೀಯ ಸಮಸ್ಯೆ**

ಆರ್ಥಿಕ ಸಾಮಾಜಿಕ ಸಮಸ್ಯೆಗಳ ಪರಿಣಾಮವಾಗಿ ನಕ್ಸಲೀಯ ಚಟುವಟಿಕೆಗಳು ಹುಟ್ಟಿಕೊಂಡಿವೆ. ಆದರೆ ನಕ್ಸಲೀಯರ ಹಿಂಸಾಚಾರದ ಮಾರ್ಗವನ್ನು ಸಿಪಿಐ(ಎಂ) ಒಪ್ಪುವುದಿಲ್ಲ, ಮಾತ್ರವಲ್ಲ ಖಂಡಿಸುತ್ತದೆ. ಭಯೋತ್ಪಾದಕ ವಿಧ್ವಂಸಕ ಕೃತ್ಯಗಳಿಂದ ಯಾವ ಸಮಸ್ಯೆಯನ್ನೂ ಬಗೆಹರಿಸಲು ಸಾಧ್ಯವಿಲ್ಲ. ಆದೇ ಸಮಯದಲ್ಲಿ ನಕ್ಸಲೀಯ ಸಂಘಟನೆಗಳನ್ನು ನಿಷೇಧಿಸುವದರಿಂದ ಮಾತ್ರವೇ ನಕ್ಸಲೀಯ ಚಟುವಟಿಕೆಯನ್ನು ಹತ್ತಿಕ್ಕಲಾಗದು. ಈ ಸಮಸ್ಯೆಗೆ ರಾಜಕೀಯ ಪರಿಹಾರ ಅಗತ್ಯ. ಪಶ್ಚಿಮ ಬಂಗಾಳ -ಕೇರಳದಂತಹ ರಾಜ್ಯಗಳಲ್ಲಿ ಭೂಸುಧಾರಣೆ ಮತ್ತು ಜನರಲ್ಲಿ ತಿಳುವಳಿಕೆ ಮೂಡಿಸುವುದು ಮುಂತಾದ ರಾಜಕೀಯ ಕ್ರಮಗಳ ಮೂಲಕ ನಕ್ಸಲ್ ಚಳುವಳಿಯನ್ನು ಸಮರ್ಥವಾಗಿ ಎದುರಿಸಲಾಗಿದೆ ಎಂದು ಪ್ರಕಾಶ್ ಕಾರಟ್‌ರವರು ತಿಳಿಸಿದರು.



**ತೃತೀಯ ರಂಗ**

ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಕಾರಟ್‌ರವರು ಕೇಂದ್ರ ಯುಪಿಎ ಸರ್ಕಾರಕ್ಕೆ ಎಡಪಕ್ಷಗಳು ನೀಡಿರುವ ಬೆಂಬಲ ಮುಂದುರಿಯುತ್ತದೆ. ಪ್ರಸ್ತುತ ಕೇಂದ್ರ ಸರ್ಕಾರವನ್ನು ಅಸ್ಥಿರಗೊಳಿಸುವುದರಿಂದ ಕೋಮುವಾದಿ ಶಕ್ತಿಗಳಿಗಷ್ಟೆ ಲಾಭ ಎಂದರು.

ಆರ್ಥಿಕ ನೀತಿಗಳು ಸೇರಿದಂತೆ ಹಲವು ಪ್ರಶ್ನೆಗಳಲ್ಲಿ ಎಡಪಕ್ಷಗಳು ಮತ್ತು ಸರ್ಕಾರದ ನಡುವೆ ಭಿನ್ನಾಭಿಪ್ರಾಯಗಳಿವೆ. ನಾವು ಜನಪರ ನೀತಿಗಳಿಗಾಗಿ ಒತ್ತಾಯಿಸುತ್ತೇವೆ. ನಮ್ಮ ಪ್ರಯತ್ನಗಳ ಬಗೆಗೆ ಜನತೆಗೆ ವಿವರಿಸುತ್ತೇವೆ ಎಂದರು.

ಭವಿಷ್ಯದಲ್ಲಿ ತೃತೀಯ ರಂಗವನ್ನು ರೂಪಿಸುವ ಉದ್ದೇಶವಿದ್ದರೂ ತಕ್ಷಣದಲ್ಲಿ ಈ ಯೋಜನೆಯಿಲ್ಲ ಎಂದು ಕಾರಟ್‌ರವರು ಸ್ಪಷ್ಟಪಡಿಸಿದರು.

**ಬೆಂಗಳೂರು ಸುದ್ದಿಗೋಷ್ಠಿಯಲ್ಲಿ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಕಾರಟ್**

# ದಲಿತರ ಮನೆಗಳಿಗೆ ಕೊಳ್ಳಿಯಿಟ್ಟರೋ ಬಿಜೆಪಿಗಳು

ಮನುವಾದಿ ಭಾರತೀಯ ಜನತಾ ಪಕ್ಷ ಮತ್ತು ಸಂಘ ಪರಿವಾರದ ದಲಿತ ವಿರೋಧಿ ವಿಕೃತ ಮುಖ ಮತ್ತೊಮ್ಮೆ ಅನಾವರಣಗೊಂಡಿದೆ. ಹರ್ಯಾಣ ರಾಜ್ಯದ ಸೋನಾಪೇಟ್ ಜಿಲ್ಲೆಯ ಗೋಹಾನ ಗ್ರಾಮದಲ್ಲಿ ವಾಲ್ಮೀಕಿ ಜನಾಂಗಕ್ಕೆ ಸೇರಿದ 50 ದಲಿತರ ಮನೆಗಳಿಗೆ ಸೋನಾಪೇಟ್ ಕ್ಷೇತ್ರದ ಬಿಜೆಪಿ ಸಂಸದ ಕೃಷ್ಣಸಿಂಗ್ ಸಂಗ್ವಾನನ ಮಗನ ನೇತೃತ್ವದಲ್ಲಿ ದುಷ್ಕರ್ಮಿಗಳ ಗುಂಪು ಬೆಂಕಿಯಿಟ್ಟಿದೆ. ಈ ಬಿಜೆಪಿ ಸಂಸದರ ನೇರ ಕುಮ್ಮಕ್ಕಿನಿಂದಲೇ ಈ ಕೃತ್ಯವೆಸಗಲಾಗಿದೆ. ಸೋನಾಪೇಟ್ ಜಿಲ್ಲಾಧಿಕಾರಿ (ಡಿ.ಸಿ) ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ)ಯವರು ಘಟನೆ ನಡೆಯುವಾಗ ಗೋಹಾನದಲ್ಲಿಯೇ ಇದ್ದರು. ಅವರ ಮೌನ ಸಮ್ಮತಿ- ಪರೋಕ್ಷ ಬೆಂಬಲದಿಂದಲೇ ಇಂತಹ ನೀಚ ಕೃತ್ಯ ನಡೆದಿರುವುದು ಮತ್ತೂ ಆಘಾತಕಾರಿಯಾದ ವಿಚಾರವಾಗಿದೆ. ಈ ಹಂತದಲ್ಲಿ ತಾವು ಮಧ್ಯ ಪ್ರವೇಶಿಸಿದಿದ್ದರೆ ಪ್ರಾಣಹಾನಿ ಸಂಭವಿಸುತ್ತಿತ್ತು ಎಂದು ಪೊಲೀಸರು ತಮ್ಮ ನಿಷ್ಕ್ರಿಯತೆಯನ್ನು ಸಮರ್ಥಿಸಿಕೊಂಡಿದ್ದಾರೆ. ಸತ್ತ ದನಗಳ ಚರ್ಮ ಸುಲಿಯುತ್ತಿದ್ದರೆಂಬ ಕಾರಣಕ್ಕೆ ವಿಹೆಚ್‌ಪಿ-ಬಜರಂಗದಳದ ಗೂಂಡಾಗಳು 5 ಜನ ದಲಿತರನ್ನು ಜಾಜ್ಜರ್‌ನ ದುಲಿನಾ ಪ್ರದೇಶದಲ್ಲಿ ಕಲ್ಲು ಹೊಡೆದು ನಡು ಬೀದಿಯಲ್ಲಿ ಕ್ರೂರವಾಗಿ ಕೊಂದಾಗಲೂ ಪೊಲೀಸರು ಇದೇ ರೀತಿ ತಮ್ಮನ್ನು ಸಮರ್ಥಿಸಿಕೊಂಡಿದ್ದರು.

ಈ ಘಟನೆಯಲ್ಲಿ ಪ್ರಾಣಹಾನಿ ಆಗಿಲ್ಲದಿದ್ದರೂ ಸಹ ಕರ್ನಾಟಕದಲ್ಲಿ ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ ದಲಿತರ ಮನೆಗಳಿಗೆ ಬೆಂಕಿ ಇಟ್ಟು ದಲಿತ ಜೀವಗಳನ್ನು ಭಸ್ಮ ಮಾಡಿದ ಘಟನೆಯನ್ನೆ ನೆನಪಿಗೆ ತರುವ ಈ ನೀಚ ಧಾಳಿಯನ್ನು ಸಿಪಿಐ(ಎಂ) ಪಕ್ಷ ತೀವ್ರವಾಗಿ ಖಂಡಿಸಿದೆ. ಪಕ್ಷದ ರಾಜ್ಯ ಮುಖಂಡರೂ, ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ.ಬೃಂದಾ ಕಾರಟ್ ಮುಂತಾದವರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ರಾಜ್ಯವ್ಯಾಪಿ, ರಾಷ್ಟ್ರವ್ಯಾಪಿ ಪ್ರತಿಭಟನೆಗಳೂ ನಡೆಯುತ್ತಿವೆ.

ದಲಿತರ ಮನೆಗಳಿಗೆ ಬೆಂಕಿಯಿಟ್ಟ ದುಷ್ಕರ್ಮಿಗಳೆಲ್ಲರನ್ನು ಬಂಧಿಸಿ ಉಗ್ರವಾಗಿ ಶಿಕ್ಷಿಸಬೇಕು. ದಲಿತ ಕುಟುಂಬಗಳಿಗೆ ಆಗಿರುವ ಹಾನಿಗೆ ಪ್ರತಿಯಾಗಿ ಸೂಕ್ತ ಪರಿಹಾರವನ್ನು ಮತ್ತು ದಲಿತರ ಜೀವನಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದೂ ಪಕ್ಷ ಆಗ್ರಹಿಸಿದೆ.





# ಶ್ರೀರಾಮಪುರದಲ್ಲಿ ಸ್ವಾತಂತ್ರ್ಯ ದಿನಾಚರಣೆ

ದೇಶದಾದ್ಯಂತ ನಡೆದ 59ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶ್ರೀರಾಂಪುರ ಪ್ರದೇಶದಲ್ಲಿ ಯುವಜನ ಸಂಘಟನೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಸಂಘಟನೆ ನೇತೃತ್ವದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಯಿತು. ಆಗಸ್ಟ್15 ಬೆಳಿಗ್ಗೆ ಶ್ರೀರಾಂಪುರ ಪರದೇಶದ ಬಂಡಿರೆಡ್ಡಿ ವೃತ್ತದಲ್ಲಿ ಧ್ವಜಾರೋಹಣವನ್ನು ನಡೆಸಿದರು ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಕೆ.ಎನ್.ಉಮೇಶ್‌ರವರು ಮತ್ತು ಜಿಲ್ಲಾ ಕಾರ್ಯದರ್ಶಿ ಧನರಾಜ್, ಇನ್ನು ಇತರೇ ಹಲವು ರಾಜ್ಯ ಜಿಲ್ಲಾ ಮತ್ತು ಸ್ಥಳೀಯ ಮುಖಂಡರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನಂತರ ಯುವಜನ ಸಂಘಟನೆ ನೇತೃತ್ವದಲ್ಲಿ ಬೈಕ್ ಜಾಥಾವನ್ನು ನಡೆಸಲಾಗಿತ್ತು. ಪ್ರಮುಖ ಪ್ರದೇಶದ ಮುಖ್ಯ ರಸ್ತೆಗಳಲ್ಲಿ ಯುವಜನತೆ ಜಾಥಾ ಹೊರಟು ಜನತೆಗೆ ಸ್ವಾತಂತ್ರ್ಯ ದಿನಾಚರಣೆಯ ಅಭಿನಂದನೆಯನ್ನು ನಿಡಿ ಜೊತೆಗೆ ನಮ್ಮ ಮುಂದಿರುವ ಪ್ರಮುಖ ಸಮಸ್ಯೆಗಳ ಬಗೆಗೆ ಯುವಜನತೆ ಘೋಷಣೆಗಳ ಮುಖಾಂತರ ಪ್ರದೇಶದ ಜನತೆಯನ್ನು ಎಚ್ಚರಿಸುತ್ತಾ ಬಂದು ಮತ್ತೆ ಕಾರ್ಯಕ್ರಮದ ಸ್ಥಳಕ್ಕೆ ಬೈಕ್ ಜಾಥಾವು ಬಮದು ತಲುಪಿತು.

ಸಂಜೆ ಪ್ರದೇಶದ ಪ್ರಮುಖ ಶಾಲೆಗಳ ಮಕ್ಕಳಿಂದ ನೃತ್ಯ ಸ್ಪರ್ಧೆ ಕಾರ್ಯಕ್ರಮ ನಡೆಯಿತು. ಜೊತೆಗೆ ಮಧ್ಯದಲ್ಲಿ ಕಾರ್ಯ ಕ್ರಮದ ಮುಂಚಿತವಾಗಿ ನಡೆಸಲಾದ ಚಿತ್ರಕಲಾ ಸ್ಪರ್ಧೆ, ಚರ್ಚಾ ಸ್ಪರ್ಧೆ, ರಂಗೋಲಿ ಸ್ಪರ್ಧೆ, ನೃತ್ಯ ಸ್ಪರ್ಧೆಗಳಲ್ಲಿ ವಿಜೇತರಾದಂತಹ ಪ್ರಮುಖ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ನಿರುದ್ಯೋಗ, ಕೋಮುವಾದ, ಬಡತನ, ಹಾಗೂ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧ ಮತ್ತು ಉದ್ಯೋಗ ಸೃಷ್ಟಿ ಯೋಜನೆಗಳಿಗಾಗಿ ದೇಶದ ಐಕ್ಯತೆ ಸಮಗ್ರತೆಯ ರಕ್ಷಣೆಗಾಗಿ ಹೋರಾಡುವುದಾಗಿ ಸಂಕಲ್ಪ ಮಾಡುವ ಮೂಲಕ ಶ್ರೀರಾಮಪುರದ ಯುವಜನತೆ ಸ್ವಾತಂತ್ರ್ಯ ದಿನಾಚರಣೆ ಆಚರಿಸಿದರು.

- ಎನ್.ವಿನೋದ್
ಶ್ರೀರಾಮಪುರ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH